ಬೆಲೆ ಎರಡು ಆಣೆ

ಕರ್ಮವೀರ

ಮಹಾತ್ಮರ ಮನೋರಂಗ

ಅನುವಾದಕರು:
ಶ್ರೀ. ರಂಗರಾವ ದಿವಾಕರ
ಜೀವನದ ವಿವಿಧ ಸಮಸ್ಯೆಗಳ ಬಗ್ಗೆ ಗಾಂಧೀಜಿಯ ವಿಚಾರಗಳನ್ನು ಅವರ ಭಾಷಣ ಲೇಖನಗಳಿಂದಲೇ ಆಯ್ದು, ಸಂಗ್ರಹಿಸಿದ ಪುಸ್ತಕ.
೩೦೪ ಪುಟ, ಬೆಲೆ: ೪-೮-೦
ಸಾಹಿತ್ಯ ಭಾಂಡಾರ ಹುಬ್ಬಳ್ಳಿ.

ವಚನಶಾಸ್ತ್ರ ರಹಸ್ಯ

ಲೇ: ಶ್ರೀ. ರಂ. ರಾ. ದಿವಾಕರ
ಕರ್ನಾಟಕದ ಉಪನಿಷತ್ತುಗಳೆನಿಸಿದ ಶಿವಶರಣರ ವಚನಗಳ ಬಗ್ಗೆ ವಿಚಾರ ಪರಿಪ್ಲುತ ಹಾಗು ಪಾಂಡಿತ್ಯಪೂರ್ಣ ವಿವೇಚನೆ.
ಬೆಲೆ: ೫ ರೂಪಾಯಿ
ಸಾಹಿತ್ಯ ಭಾಂಡಾರ ಹುಬ್ಬಳ್ಳಿ

ಸಂಪಾದಕರು:
ಹ. ರಾ. ಪುರೋಹಿತ, ಎಂ. ಎ.

ಅಖಿಲ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯ ವಾರಪತ್ರಿಕೆ

Editor,
H. R. PUROHIT, M. A.

— [ಸಂಪುಟ ೧೯] — ಹುಬ್ಬಳ್ಳಿ ಸೋಮವಾರ ತಾರೀಖು ೧೯—೧—೧೯೪೮ — [ಸಂಚಿಕೆ ೪೯] —

ಸಾಮಾನ್ಯನ ಜೀವನ ಸುಧಾರಣೆಗೆ ವಿಜ್ಞಾನಿಗಳ ನೆರವು

ಚರಾಚರಗಳ ಜ್ಞಾನ ಪಿಪಾಸೆ— ಪ್ರಾಚೀನ ದಾರ್ಶನಿಕರ ಸೂಕ್ಷ್ಮ ದೃಷ್ಟಿ— ಸಾಮಾನ್ಯರಲ್ಲಿ ವಿಜ್ಞಾನ ಪ್ರಸಾರ— ನವನಿರ್ಮಿತಿಗೆ ವಿಜ್ಞಾನಿಗಳ ಆಶ್ವಾಸನ—

ಸತ್ಯಕ್ಕಾಗಿ, ಜಗದ್ಧಿತಕ್ಕಾಗಿ, ಮಾನವ್ಯ ಪ್ರಗತಿಗಾಗಿ, ದೇಶದ ವಿವಿಧ ಸಮಸ್ಯೆಗಳ ಪರಿಹಾರಕ್ಕಾಗಿ, ಸಾಮಾನ್ಯ ನಾಗರಿಕನ ಉದ್ಧಾರಕ್ಕಾಗಿ ವಿಜ್ಞಾನಿಗಳಿಂದು ಸೊಂಟ ಕಟ್ಟಿ ನಿಲ್ಲಬೇಕೆಂದು ಮಹಾ ಪ್ರಧಾನ ನೆಹರುಗಳ ಸಂದೇಶ; ವಿಜ್ಞಾನವೊಂದು ಸಾಧನವಲ್ಲದೆ ಸಾಧ್ಯವಲ್ಲ, ವಿಜ್ಞಾನಗಳು ಹಲವಿದ್ದರೂ ಜ್ಞಾನ ಮಾತ್ರ ಅಖಂಡವೂ ಅದ್ವಿತೀಯವೂ ಆದುದು. ವಿಜ್ಞಾನಿಗಳಿಂದು ರಾಷ್ಟ್ರೀಯ ಪುನರ್ರಚನೆಗೆ ಮುಕ್ತ ಮನಸ್ಕರಾಗಿ ನೆರವೀಯಬೇಕು ಎಂಬುದಾಗಿ ಉದ್ಘಾಟಕರಾದ ಬಿಹಾರದ ಗವ್ಹರ್ನರ ಶ್ರೀ. ದೌಲತರಾಮರ ಬಿನ್ನಹ; ಮಾನಸಿಕ ಶಿಸ್ತನ್ನು ವಿಜ್ಞಾನವಿಂದು ಜನರಲ್ಲಿ ಹರಡಬೇಕು; ಅಂತರಾಷ್ಟ್ರೀಯ ವಿಜ್ಞಾನಿಗಳ ಸಂಘವೊಂದು ವಿಜ್ಞಾನ ವಿತರಣಕ್ಕೆ ನಿಲ್ಲಬೇಕು ಎಂದು ಸರ್. ಸಿ. ಪಿ. ಎನ್. ಸಿಂಗರ ವಾದ; ವಿಜ್ಞಾನಿಗಳಲ್ಲಿ ಪರಸ್ಪರ ವಿಶ್ವಾಸ, ಸಹಕಾರ ಕೊಡುಕೊಳು ಗಳಿರಬೇಕು. ಹೊಸ ಜಗತ್ತಿನ ನಿರ್ಮಾಣಕ್ಕೆ ವಿಜ್ಞಾನಿಗಳ ಬೆಂಬಲ ಅಗತ್ಯ ಎಂಬುದಕ್ಕೆ ಸರ್. ಸಿ. ಪಿ. ರಾಮನ್ನರ ಒಪ್ಪಿಗೆ ಮತ್ತು ಬೆಂಬಲ !

ಮೊನ್ನೆ ಪಾಟ್ನಾದಲ್ಲಿ ಹಿಂದೀ ವಿಜ್ಞಾನ ಸಂಘದ ೩೫ ನೆಯ ಸಭೆಸೇರಿತು. ಸರ್. ಆರ್. ಎನ್. ಚೋಪ್ರಾರವರನ್ನು ಅಧ್ಯಕ್ಷರನ್ನಾಗಿ ಆರಿಸಲಾಗಿತ್ತು. ಆದರೆ ದೇಹಾಲಸ್ಯದ ನಿಮಿತ್ತ ಅವರು ದಯಮಾಡಿಸಲಿಲ್ಲ. ಅವರ ಭಾಷಣವನ್ನು ಅಧ್ಯಕ್ಷಸ್ಥಾನವನ್ನಲಂಕರಿಸಿದ ಸರ್. ಸಿ. ವಿ. ರಾಮನ್ನರು ಓದಿ ಹೇಳಿದರು. ಸಭೆಯ ಉದ್ಘಾಟನೆಯನ್ನು ಬಿಹಾರದ ಗವರ್ನರರಾದ ಶ್ರೀ ಜಯರಾಮದಾಸ ದೌಲತರಾಮರು ಮಾಡಿದರು. ದೇಶ ವಿದೇಶದ ಪ್ರಸಿದ್ಧ ವಿಜ್ಞಾನಿಗಳು ವೇದಿಕೆಯನ್ನಲಂಕರಿಸಿದ್ದರು- ಅಮೇರಿಕದ ಪ್ರೊ- ಡಾಟ್ಲೆರ್, ಇಂಗ್ಲಂಡಿನ ಪ್ರೊ. ಫಿಂಡ್ಲೆ, ಡಾ. ಹೀವರ್ಟ್, ಆಸ್ಟ್ರೇಲಿಯದ ಸರ್. ಜಾನ್. ಮೆಡ್ಸೇನ್ ಮುಂತಾದವರು ಅವರಲ್ಲಿ ಪ್ರಮುಖರು. ಸಭೆಗೆ ಮಹಾಪ್ರಧಾನ ಪಂಡಿತ ನೆಹರು, ಸರ್. ಆರ್. ಎನ್. ಚೋಪ್ರಾ, ಬರ್ಮದ ಶ್ರೀ ಬಾ, ಸರ್. ಅರ್ದೇಶಿದಲಾಲ, ಸರ್ ಜ್ಞಾನಚಂದ್ರ ಘೋಷ, ಡಾ. ಜೀವರಾಜ ಮೆಹ್ತಾಮುಂತಾದವರು ತಮ್ಮ ಅಮೂಲ್ಯ ಸಂದೇಶಗಳನ್ನು ಕಳುಹಿದ್ದರು.ಅವನ್ನು ಕ್ರಮವಾಗಿ ಓದಿಹೇಳಲಾಯಿತು.

ಮಹಾಪ್ರಧಾನರ ಸಂದೇಶ

"ಸಂಘಕ್ಕೆ ಅಭಿನಂದನೆಗಳು. ಸಾಮಾನ್ಯನ ಉದ್ಧಾರಕ್ಕಾಗಿ ವೈಜ್ಞಾನಿಕ ಉನ್ನತಿಯತ್ತ ಸಂಘವು ಭಾರತವನ್ನು ಒಯ್ಯುವುದೆಂದು ನನ್ನ ಆಶೆ. ದೇಶದ ದೊಡ್ಡ ದೊಡ್ಡ ಸಮಸ್ಯೆಗಳನ್ನು ವೈಜ್ಞಾನಿಕ ಕ್ರಮದನ್ವಯ ಬಿಡಿಸಬಹುದು. ಸಾರ್ವಜನಿಕ ದೃಷ್ಟಿಯಿಂದ ವಿಚಾರಮಾಡುವುದು ಮತ್ತು ದುಡಿಯುವದು ವಿಜ್ಞಾನಿಗಳ ಕರ್ತವ್ಯ. ಅವರು ಕೇವಲ ವೈಯಕ್ತಿಕ ಉನ್ನತಿ ಸಾಧನೆಗಲ್ಲದೆ, ರಾಷ್ಟ್ರೀಯ ಮತ್ತು ಮಾನವ್ಯ ಪ್ರಗತಿಗಾಗಿ ತಮ್ಮ ಜೀವನವನ್ನು ಮುಡಿಪಿಡಬೇಕು. ಅವರು ಸಂಕುಚಿತ ಭಾವನೆಯನ್ನೂ ಪಕ್ಷ ಪ್ರತಿಪಕ್ಷ ಭಾವನೆಯನ್ನೂ ಬಿಟ್ಟು ಸತ್ಯದ ಮಾರ್ಗ ಅಬಾಧಿತವಾಗಿರುವಂತೆ ನೋಡಿಕೊಳ್ಳಬೇಕು." ಎಂದು ಕಳುಹಲಾದ ಪಂಡಿತ ನೆಹರುಗಳ ಸಂದೇಶವನ್ನು ಸಭಿಕರ ಆನಂದೋದ್ಗಾರಗಳ ನಡುವೆ ಪ್ರಿನ್ಸಿಪಾಲ್ ಪಿ.ಬಿ.ಗಾಂಗುಲಿಯವರು ಓದಿ ಹೇಳಿದರು.

ದೌಲತರಾಮರ ಭಾಷಣ

"ವಿಜ್ಞಾನವೆಂದೂ 'ಸಾಧ್ಯ' ವೆನಿಸಿಲ್ಲ, ಎನಿಸುವದಿಲ್ಲ. ಜ್ಞಾನದ ಅಸಂಖ್ಯಾಕ ಸೋಪಾನ ಪಂಕ್ತಿಯಲ್ಲಿ ಮಾನವನು ನೆಟ್ಟಿಬಿಡುವ ಪ್ರತಿಯೊಂದು ಹೆಜ್ಜೆಯೂ ಸ್ವಭಾವತಃ ಯಾವುದಾದರೊಂದು ಒತ್ತಾಯದ ಒತ್ತಡವನ್ನು ಸಮಾಧಾನಪಡಿಸಲು ಎದ್ದ ಅವಸರದ ಅವಶ್ಯಕತೆಯನ್ನು ಪೂರಯಿಸುವುದರ ಸಲುವಾಗಿಯೇ ಆಗಿದೆ. ಪ್ರಯೋಜನದ ಉದ್ದೇಶದಿಂದ ಒತ್ತಲ್ಪಟ್ಟವನಾಗಿ ಮನುಷ್ಯನು ಜ್ಞಾನಾನ್ವೇಷಿಯಾದನು ಚರವಿರಲಿ, ಅಚರವಿರಲಿ; ಈ ಎಲ್ಲ ವಿಶ್ವದ ಸಾರಸರ್ವಸ್ವದಲ್ಲಿಯೇ, ಪ್ರಗತಿಪ್ರವೃತ್ತಿಯಲ್ಲಿಯೆ ಅದು ಅಡಗಿನಿಂತಿದೆ. ಮಾನವನಲ್ಲಿಯ ಪಶುತ್ವವಿನ್ನೂ ಪ್ರಧಾನ ಪದದಲ್ಲಿಯೇ ಕುಳಿತಿದೆ. ಎಲ್ಲಕ್ಕಿಂತಮೊದಲು ಅದು ದೈಹಿಕ ಅವಶ್ಯಕತೆಯ ಪೂರಯಿಕೆಯನ್ನು ಕೇಳುತ್ತದೆ. ಮಾನವ ಕುಲಕ್ಕೆ ನೀತಿಕ್ಷೇತ್ರದಲ್ಲಿ ಪ್ರಗತಿ ಬೇಡವಾಯಿತೆ?"

ಮುಂದುವರಿದು ಶ್ರೀ ದೌಲತರಾಮರು, ವಿಶ್ವದಲ್ಲಿ ಸ್ಥಿರವ್ಯೊಂದೂ ಇಲ್ಲ, ಎಲ್ಲವೂ ಚಂಚಲ. ಆಶಯುಗದಿಂದ ಇಂದಿನವರೆಗೆ ಮಾನವಕುಲ ಜ್ಞಾನದ ಸಂಪಾದನೆ ಮತ್ತು ಬಳಕೆಗೆ ಪ್ರಯತ್ನಿಸುತ್ತ ನಡೆದಿದೆ. ಈ ಕ್ರಮವು ದೈಹಿಕ ಮತ್ತು ಮಾನಸಿಕ ಕ್ಷೇತ್ರಗಳಲ್ಲಲ್ಲದೆ ನೈತಿಕ ಕ್ಷೇತ್ರದಲ್ಲೂ ಬರುವಂತೆ ಮಾನವನು ನೋಡಬೇಕು.. ಎಂದುದಲ್ಲದೆ, ರಾಷ್ಟ್ರೀಯ ಪುನರುದ್ಧಾರ, ಪುನರ್ರಚನೆಗಳಿಗೆ ವಿಜ್ಞಾನಿಗಳ ಸಂಪೂರ್ಣ ಸಹಾಯ ಸಹಕಾರಗಳಗತ್ಯವೆಂದೂ ಎಲ್ಲಕ್ಕಿಂತ ನೀತಿಯೇ ಹೆಚ್ಚಿನದೆಂದು ಸ್ಥಿರಪಡಿಸಿ ಎಲ್ಲ ಸಾಧ್ಯಗಳಿಗೂ ನೀತಿಯನ್ನೇ ಸಾಧನವಾಗಿ ಭಾರತವು ತೆಗೆದುಕೊಳ್ಳಬೇಕೆಂದೂ ಪ್ರತಿಪಾದಿಸಿದರು.

ಆಧುನಿಕ ವಿಜ್ಞಾನ ಅರಿಯದ ಅದ್ಭುತಶಕ್ತಿಯೊಂದರ ಬಲದಿಂದ ಪ್ರಾಚೀನ ಭಾರತೀಯರು ನಕ್ಷತ್ರಚಲನ ಮುಂತಾದ ವೈಜ್ಞಾನಿಕ ಸತ್ಯಗಳನ್ನು ಕಂಡು ಹಿಡಿದರು. ದೈಹಿಕ ಮತ್ತು ಮಾನಸಿಕ ಮುಖಗಳಿಂದ ಯೋಗ ಶಾಸ್ತ್ರವನ್ನೀಗ ಒಂದು ಪದ್ಧತಿಯನ್ನಾಗಿ ಮಾಡಬೇಕಾಗಿದೆ. ಅಧ್ಯಾತ್ಮ ವಿದ್ಯಾವಿಶಾರದರು ಅಂದು ತಮ್ಮ ದಿವ್ಯಚಕ್ಷುಸ್ಸಿನ ಸಹಾಯದಿಂದ ಮಾನವ್ಯವಿವರ್ತ (Human Evolution) ವನ್ನು ಗೊತ್ತುಹಚ್ಚಿದರು. ಹಾಗೇ ಇಂದು ಭಾರತೀಯ ವಿಶ್ವವಿದ್ಯಾನಿಲಯಗಳು ಜ್ಞಾನ ಮತ್ತು ಕರ್ಮಗಳಲ್ಲಿ ಹೊಂದಿಕೆಯನ್ನುಂಟುಮಾಡಿ, ಬಿಹಾರದ ಮಹಾತ್ಮನಾದ ಜನಕರಾಯನ ಪರಂಪರೆಯಲ್ಲಿ ಬಂದ ಆಳಲು ಮತ್ತು ಸೇವಿಸಲೆಂದು ಬದುಕುವುದು ಮತ್ತು ದುಡಿಯುವುದು; ಅನಂತರ ಸಾಯುವುದು— ಎಂಬ ತತ್ವಗಳನ್ನು ಆಚರಣೆಗೆ ತರಬೇಕು, ಎಂದು ಮುಂತಾಗಿ ಹೇಳಿ, ಗವರ್ನರರು ಮಾತುಮುಗಿಸಿದರು.

ಸಿಂಗರ ಕರ್ತವ್ಯಬೋಧ

ಪಾಟ್ನಾ ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಸರ್ ಚಂದ್ರೇಶ್ವರ ಪ್ರಸಾದ ನಾರಾಯಣರು ತಮ್ಮ ಸ್ವಾಗತ ಸಮಿತಿಯ ಅಧ್ಯಕ್ಷಪೀಠದಿಂದ ಹೀಗೆಂದರು:

" ಈ ೨೦ ನೆಯ ಶತಮಾನದಲ್ಲಿ ವಿಜ್ಞಾನಿಗಳು ಮತ್ತು ವೈಜ್ಞಾನಿಕ ಭಾವನೆಯುಳ್ಳವರು ಹೊಸ ವೀರ ಪ್ರಪಂಚವನ್ನು ಕಟ್ಟುವಲ್ಲಿ ಮಾನವ ಕುಲಕ್ಕೆ ನೆರವೀಯಬೇಕಾಗಿದೆ. ಬಿಹಾರವು ಈ ಕ್ಷೇತ್ರದಲ್ಲಿ ಹಿಂದೆ ಕೀರ್ತಿಪಡೆದಿದೆ. ಆದಿಂದು ಮುನ್ನಡೆಗೆ ಪ್ರಚೋದಕವಾಗಬೇಕು. ನಮ್ಮ ಜಗತ್ತಿಂದು ವಿಚಾರಶಕ್ತಿಯನ್ನು, ಬುದ್ಧಿಯನ್ನು ಅತ್ತಿತ್ತ ದೂಡುತ್ತಿದೆ. ಜಗದ ಬಹುಸಂಖ್ಯಾಕ ಪ್ರಜೆಗಳಿಂದು ವಿನಾಶಮುಖರಾಗಿದ್ದಾರೆ. ಮನುಷ್ಯನ ಅಸ್ತಿತ್ವವನ್ನೇ ಕಂಪಿಸುವಂಥ ನೂರಾರು ಸಮಸ್ಯೆಗಳಿದ್ದವೆ. ಆದರೆ ಅವುಗಳನ್ನು ಅಣುಬಾಂಬುಗಳು ಉತ್ತರಿಸಲಾರವು. ವಿಜ್ಞಾನದಿಂದ- ಇನ್ನೆಂದೂ ಮಾನವನಾಗರಿಕತೆ ವಂಚಿತವಾಗಲಾರದು, ಎಂದು ಮುಂಬರಿದು, ಭಾರತಕ್ಕಿಂದು ವಿಜ್ಞಾನಿಗಳ ನೆರವು ಅತ್ಯಗತ್ಯ, ನಮ್ಮ ವಿದ್ಯಾಭ್ಯಾಸ ಪದ್ಧತಿಯನ್ನೇ ಪುನಃ ರೂಪಿಸಬೇಕು; ಬೌದ್ಧಿಕ ಸಂಯಮ ರೂಪದ ವೈಜ್ಞಾನಿಕ ಮನೋಭಾವವು ಸರ್ವಪ್ರಜೆಗಳಲ್ಲೂ ಪಸರಿಸಬೇಕು. ವಿಜ್ಞಾನ ಶೋಧಗಳ, ವಿಜ್ಞಾನ ವಿವರಗಳ ವಿತರಣದ ಬಗ್ಗೆ, ವಿನಿಮಯದ ಬಗ್ಗೆ ಒಂದು ಅಂತರ್ರಾಷ್ಟ್ರೀಯ ವಿಜ್ಞಾನಿಸಂಘ ಅಗತ್ಯವಿದೆ- ಎಂಬ ಸಂಗತಿಗಳನ್ನು ಸಿಂಗರು ವಿಶದಪಡಿಸಿದರು.

ರಾಮನ್ನರ ಬೋಧ

ಶ್ರೀ ಚೋಪ್ರಾರವರ ಭಾಷಣವನ್ನು ಅಲ್ಲಲ್ಲಿಂದ ತೆಗೆದು ಓದಿಹೇಳಿದ ಅಧ್ಯಕ್ಷ ಸರ್. ಸಿ. ವಿ. ರಾಮನ್ನರು ಹಿಂದೆ ಆಯುರ್ವೇದ ಶಾಸ್ತ್ರ ಹೇಗೆ ಅತ್ಯುನ್ನತ ಸ್ಥಿತಿಗೆ ಮುಟ್ಟಿತ್ತೆಂಬುದನ್ನೂ ಅದೀಗ ಹೀನಸ್ಥಿತಿಗೆ ಬಂದಿರುವುದು ದುಃಖಕರ ವಾಗಿದೆಯೆಂಬುದನ್ನೂ ಹೇಳಿ, ವಿಜ್ಞಾನಿಗಳ ಪರವಾಗಿ ಸಾಮಾನ್ಯನ ಜೀವನದ ಮಟ್ಟವನ್ನೇರಿಸುವ ಪ್ರಯತ್ನದಲ್ಲಿ ಅವರು ಸಹಾಯಕರಾಗುವರೆಂದು ರಾಮನ್ನರು ಆಶ್ವಾಸನ ವಿತ್ತರು.

ಅನಂತರ ಮಾನವನ ರುಚಿ ಮತ್ತು ವಾಸನಾಗ್ರಹಣಶಕ್ತಿಗಳತ್ತ ಹೊರಳಿ,ಅವು ಜೀವನದ ಮೂಲಭೂತ ಕ್ರಮಗಳಿಗೆ ಹೇಗೆ ಸಂಬಂಧಿಸಿರುವುವೆಂಬುದನ್ನು ಸರ್. ಸಿ. ವಿ. ಯವರು ವಿವರಿಸಿದರು. ಈ ಅವಯವಗಳ ಚರಿತ್ರೆಯನ್ನು ಚರ್ಚಿಸಿ, ಅವರು ಹೇಗೆ ಪ್ರಾಣಶಕ್ತಿಯು ಸ್ಮರಣಶಕ್ತಿಗೆ ಸಹಾಯಕವಾಗುತ್ತದೆಯೆಂಬುದನ್ನು ಸ್ಪಷ್ಟಪಡಿಸಿದರು. ವೈಜ್ಞಾನಿಕ ಸಂಶೋಧನದಲ್ಲೂ ನಾಲಿಗೆ ಮೂಗುಗಳು ಪ್ರಮುಖಭಾಗ ವಹಿಸುವವೆಂಬುದನ್ನು ಅಧ್ಯಕ್ಷರು ವಿಶದಪಡಿಸಿದರು.

ಕೊನೆ

ಅಧ್ಯಕ್ಷರ ಭಾಷಣವಾದ ಬಳಿಕ ಕೃತಜ್ಞತಾ ಸಮರ್ಪಣೆ ನಡೆಯಿತು.

ಮೇಲಿನ ಎಲ್ಲ ವಾಗ್ಮಿಗಳ ಮಾತುಗಳಲ್ಲೂ ಸಾಮಾನ್ಯ ಮನುಷ್ಯನನ್ನು ಮೇಲೆತ್ತುವ ಹಂಬಲು ಸ್ಪಷ್ಟವಾಗಿ ಯಾಗಲಿ ಅಸ್ಪಷ್ಟವಾಗಿಯಾಗಲಿ ತುಂಬಿದೆ. ಇದಕ್ಕೆ ವಿಜ್ಞಾನಿಗಳನ್ನು ಸರಕಾರವು ಕೆಲವು ಯೋಜನೆಗಳನ್ನು ರಚಿಸಿ ಆಚರಣೆಗೆ ತರುವಂತೆ ನಿಯಮಿಸಿ, ಅದಕೆ ತಕ್ಕ ಅನುಕೂಲಗಳನ್ನು ಒದಗಿಸಿಕೊಡಬೇಕು. ಹಾಗಲ್ಲದೆ, ವ್ಯಕ್ತಿ ಇಲ್ಲವೆ ಖಾಸಗಿ ಸಂಸ್ಥೆಗಳ ಪಾಲಿಗೆ ಈ ಹೊಣೆಯನ್ನು ಬಿಟ್ಟರೆ ಸಿದ್ಧಿಯು ಸುದೂರವೂ ಸಂದಿಗ್ಧವೂ ಎನಿಸುವುದಲ್ಲದೆ ಅನ್ಯ ರಾಷ್ಟ್ರಗಳಿಗೆ ಆರ್ಥಿಕ ಮತ್ತು ಮಿಲಿಟರಿ ದೃಷ್ಟಿಯಿಂದ ಭಾರತವು ಅವಶ್ಯವಿರುವಷ್ಟು ಬೇಗ ಸರಿಗಟ್ಟಿ ನಿಲ್ಲಲಾರದು. ಈ ಮಾತನ್ನು ನಾಡ ನಾಯಕರು ಮನದಂದು ತಕ್ಕ ಉಪಾಯಗಳನ್ನು ಕೈಕೊಳ್ಳುವರೆಂದು ಪ್ರಗತಿಶೀಲ ಭಾರತೀಯರಾರೂ ಹಾರೈಸದಿರರು. ಪ್ರೊ. ಮಹಾಲಾನವೀಸರ ಅನುಭವದಂತೆ ಜಗತ್ತಿನ ಅನೇಕ ಪ್ರಸಿದ್ಧ ವಿಜ್ಞಾನಿಗಳು ಈ ಸಭೆ ಯಶಸ್ವಿಯಾಗಿ ನಡೆವಂತೆ ಮಾಡಲು ಉತ್ಸುಕರಾಗಿದ್ದರೆಂಬುದೊಂದು ಸಂತೋಷದ ಸಂಗತಿ. ಈ ವಿಜ್ಞಾನ ಯುಗದಲ್ಲಿ ಜಗತ್ತಿನ ವಿಜ್ಞಾನಿಗಳು ವಿನಾಶಕ ಯಂತ್ರಗಳನ್ನು ಕಂಡುಹಿಡಿದು ರೊಕ್ಕದಾಸೆಗೆ ಧನಿಕರಿಗೆ ಮಾರಿ ಜಗತ್ತಿನ ಪ್ರಲಯಕ್ಕೆ ಕಾರಣರಾಗುತ್ತಿರುವುದು ಕೇವಲ ಹೊಣೆಗಾರಿಕೆಯಿಲ್ಲದ ಕೆಲಸವಾಗಿದೆ. ವಿಜ್ಞಾನಿಗಳಲ್ಲಿ ಹೊಣೆಗಾರಿಕೆಇದ್ದಿದ್ದರೆ ೨ ನೆಯ ಮಹಾಯುದ್ಧ ಸಂಭವಿಸುತ್ತಲೇ ಇರಲಿಲ್ಲ; ಸಂಭವಿಸಿದ್ದರೂ ಇಷ್ಟು ಘೋರವಾದ ವಿಶ್ವವ್ಯಾಪಿಯಾದ ವಿನಾಶ ಉಂಟಾಗುತ್ತಿದ್ದಿಲ್ಲ. ಈ ಮಾತನ್ನು ದೃಷ್ಟಿಯಲ್ಲಿಟ್ಟುಕೊಂಡೇ ಶ್ರೀ ದೌಲತರಾಮರು ನೈತಿಕ ಸಂಸ್ಕಾರಕ್ಕೆ ಬಹಳ ಪ್ರಾಧಾನ್ಯ ಕೊಟ್ಟು ಮಾತನಾಡಿದ್ದಾರೆ. ಭಾರತವಿಂದು ಪೂರಕ ಮಾರಕ ವಿಜ್ಞಾನಗಳಲ್ಲಿ ಉಳಿದ ಯಾವ ರಾಷ್ಟ್ರಕ್ಕೂ ಕಡಿಮೆಯೆನಿಸದೆ ಮುಂಬರಿದು ಜಯ ಹೊಂದಿ,ಆ ಬಳಿಕ ಶಿಷ್ಟರಕ್ಷಣ ದುಷ್ಟದಂಡನಕ್ಕಾಗಿ ವಿಜ್ಞಾನ ಶಕ್ತಿಯನ್ನು ಬಳಸುವ ಧ್ಯೇಯ ದತ್ತ ಮುನ್ನಡೆದರೆ ಮಾತ್ರ ಅವರ ವಿಜ್ಞಾನ ದೃಷ್ಟಿ ನ್ಯಾಯ್ಯ,ಗೌರವಾರ್ಹ ಎನಿಸೀತು; ಬರಿದೆ ನೀತಿಪೇಳುತ್ತ ಕುಳಿತರೆ ಅಪ್ರಯೋಜಕ ರಾಷ್ಟ್ರವೆನಿಸೀತೆಂಬುದನ್ನು ನಾವು ಇಲ್ಲಿ ಎಚ್ಚರಿಸಬಯಸುತ್ತೇವೆ.

ಘಜನಿ ಮುಹಮ್ಮದನ ಚರಿತ್ರೆಯ ಮೇಲೆ ಬೆಳಕು

ಮುಹಮ್ಮದನ ಗುಣಾಂಶಗಳು— ಅಕ್ಬರ ಮುಂತಾದವರೊಡನೆ ತಾರತಮ್ಯ— ಸೋಮನಾಥದ ಕತೆಯ ಸತ್ಯತೆ—

ಅಲಿಗಢ ಮುಸ್ಲಿಮ ಕೀರ್ತಿಯಿಂದ ಪ್ರಕಟವಾದ ಉರ್ದು ತ್ರೈಮಾಸಿಕ ಪತ್ರಿಕೆಯಲ್ಲಿ ಒಂದು ಲೇಖನ ಅಚ್ಚಾಗಿದೆ. ಅದರ ನಾಮಧೇಯ "ಶಾಹಿಬಾಂಧವರಿಗೆ ಎಂದಿದ್ದು ಅದರ ಒಂದು ಸಾಲಿನ ಅರ್ಥ ಹೀಗುಂಟು.

"ಸೋಮನಾಥನ ಸ್ವರವು ಮತ್ತೆ ಗಾಳಿಯಲ್ಲಿ ಪ್ರತಿಧ್ವನಿತವಾಗುತ್ತಿದೆ. ಅದ್ದರಿಂದ ಯಾವುದಾದರೊಂದು ಆಧುನಿಕ ಘಜನಿಯಿಂದ ಇನ್ನೊಬ್ಬ ಮುಹಮ್ಮದ ಘಜನಿಯನ್ನು ಹುಟ್ಟಿಸಿರಿ."

ಆರ್ಗನೈಸರ್ ಇದನ್ನು ಬರೆದ ಕವಿಯು ಇತ್ತೀಚೆ ಪತ್ರಿಕೆಗಳಲ್ಲಿ ಪ್ರಕಟವಾದ ಸೋಮನಾಥ ದೇವಾಲಯದ ಪುನರುದ್ಧಾರದ ಸಂಗತಿಯನ್ನು ಕುರಿತೇ ಹೀಗೆ ನುಡಿದಿದ್ದಾನೆ. ಮುಹಮ್ಮದನು ಸೋಮನಾಥನನ್ನು ಮುಟ್ಟಿದನೋ ಇಲ್ಲವೋ ಎಂಬುದು ವಿವಾದಾಸ್ಪದ ಪ್ರಶ್ನೆಯೇ ಆಗಿದ್ದರೂ ಈ ಕಾಲನ್ನು ಓದಿ ನಮಗೆ ಅತ್ಯಂತ ಖೇದವಾಯಿತೆಂಬುದನ್ನು ಒಪ್ಪಲೇಬೇಕು.

ಮುಹಮ್ಮದನು ಸೋಮನಾಥನನ್ನು ಮುಟ್ಟಿದ ಇತಿಹಾಸ ವಿವಾದಾಸ್ಪದವೆಂದು ನಾವು ಹೇಳಿದ್ದಕ್ಕೆ ಅನೇಕ ಓದುಗರು ಚಕಿತರಾಗಬಹುದು. ಆದರೆ ೫೦ ವರ್ಷಗಳ ಪೂರ್ವದಲ್ಲಿ ಕಲಕತ್ತೆಯ ಕತ್ತಲೆಯ ಕೋಣೆ(ಬ್ಲ್ಯಾಕಹೋಲ)ಯ ಕಥೆಯು ಸುಳ್ಳೆಂದು ಯಾರಿಗೆ ತೋರಿತ್ತು? ೧೮೫೭ ರ ಬಿಬಿಘರದ ಕೊಲೆಯ ಕಥೆಯೂ ಕಾನಪುರದ "ಹಾಳು ಬಾವಿಯ" ಕಥೆಯೂ "ನಿರ್ಲಜ್ಜ ಸುಳ್ಳು ಕಥೆ"ಯೆಂದರೆ ಯಾರು ನಂಬುವರು? ಅವರ ಸುಳ್ಳುಗಳನ್ನು ೧೯೫೦ ರ ಆಗಸ್ಟ ೫ರ ಹೊಸ ಕಾಲದ "ಜಾಮಿಯಾ" ಪತ್ರಿಕೆಯಲ್ಲಿ ಓರ್ವ ಹೊಣೆಗಾರ ಇಂಗ್ಲೀಷ ಸಭ್ಯಗೃಹಸ್ಥನು ತನ್ನ ಲೇಖನದಲ್ಲಿ ಬಯಲಿಗಿಟ್ಟಿದ್ದಾನೆ. ಐತಿಹಾಸಿಕ ಘಟನೆಗಳೆಂದು ಹೇಳಲಾಗುತ್ತಿರುವ ಎಷ್ಟೋ ಮಾತುಗಳ ಬಗೆಗೆ ಇನ್ನೂ ನಮಗೆ ಆಶ್ಚರ್ಯವನ್ನುಂಟುಮಾಡುವ ಪ್ರಸಂಗ ಬರಬಹುದು. ಶ್ರೀ. ಸಿ. ವಿ. ವೈದ್ಯರ ಸುಪ್ರಸಿದ್ಧವಾದ "ಮಧ್ಯಯುಗೀನ ಹಿಂದು ಭಾರತದ ಇತಿಹಾಸ" ಎಂಬ ಗ್ರಂಥದಿಂದ ಕೆಳಗೆ ಕಾಣಿಸಿದ ಸಂಗತಿಯನ್ನು ಎತ್ತಿ ಕೊಡಲಾಗಿದೆ. ಮುಹಮ್ಮದನು ಸೋಮನಾಥನನ್ನು ಮುಟ್ಟಿದ ಬಗ್ಗೆ ಅವರು ಹೀಗೆ ಹೇಳುತ್ತಾರೆ:

"ಉತ್ಬಿಯು ಬರೆದ ಕೃತಿಯಲ್ಲಿ, ಮುಹಮ್ಮದನ ಆತ್ಮಶ್ಲಾಘನೆ ನಿಜವೆನ್ನಿಸುವ ಈ ದಾಳಿಯ ಬಗ್ಗೆ ಉಲ್ಲೇಖವೇ ಇಲ್ಲದಿರುವುದು ದುರ್ದೈವದ ಸಂಗತಿ. ಉತ್ಬಿಯು ೧೦೨೦ ರ ವರೆಗೂ ಜೀವಿಸಿದ್ದನು. ಅಂದರೆ ಮೊದಲೇ ಹೇಳಿದಂತೆ ಈ ದಾಳಿಯು ನಂತರ ೬ ವರ್ಷ ಅವನಿದ್ದನು. ಎರಡು ಶತಮಾನಗಳ ನಂತರ ಬರೆದವನಾದ ರಶೀದುದ್ದೀನನೂ ಸೋಮನಾಥ ದಾಳಿಯ ಬಗ್ಗೆ ಮಾತನಾಡಿಲ್ಲ. ಇಪ್ಪತ್ತು ವರ್ಷಗಳ ನಂತರದ ಅಲಬೆರೂನಿ [illegible] ಯೂ ಒಂದು ಶಬ್ದವನ್ನು ಈ ಬಗ್ಗೆ ಎತ್ತಿಲ್ಲ. ಇದರ ವರ್ಣನೆಯು ಮೊಟ್ಟಮೊದಲು ಇಬ್ನ ಅಸೀರ ಎಂಬವನ ಕೃತಿಯಲ್ಲಿ ಕಂಡುಬರುತ್ತದೆ. ಆಮೇಲಿನ ಬರಹಗಾರರ ಕೃತಿಗಳಲ್ಲಿ ಅವನ ವರ್ಣನೆಯೇ ಅತಿರಂಜಿತವಾಯಿತು. ಸೋಲಂಕೀ ರಾಜರ ಆಳಿಕೆಯಲ್ಲಿ ಗುಜರಾತದ ಅತ್ಯಂತ ಉಜ್ವಲ ಕಾಲದಲ್ಲಿ ಈ ಗಂಡಾಂತರವು ಎರಗಿತು. ಈ ರಾಜರ ಇತಿಹಾಸವು ಅನೇಕ ಗುಜರಾಥದ ಜೈನ ಹಾಗೂ ಹಿಂದು ಇತಿಹಾಸಕಾರರಿಂದ ವಿವರವಾಗಿ ಬರೆಯಲ್ಪಟ್ಟಿದ್ದು ಈ ಮಹಾ ವಿಪ್ಲವದ ವಿಷಯವೇ ಅವರ ಬರಹದಲ್ಲಿ ಕಂಡುಬರುವದಿಲ್ಲ. ಈ ಇತಿಹಾಸಕಾರರು ಸೋಲಂಕಿ ರಾಜರ ಮೂಲ ಪುರುಷನಾದ ಮತ್ತು ಅಣಹಿಲ್ಲಾಡದ ರಾಜಪಟ್ಟವನ್ನು ಏರಿದ ಮೂಲರಾಜ ಎಂಬ ರಾಜನಿಂದ ತಮ್ಮ ವಿವರವನ್ನು ಮೊದಲಿಡುತ್ತಾರೆ. ಈ ರಾಜನು ಆಳಿಕೆಯಲ್ಲಿ ಸಬಕ್ತಗೀನನಿಗಿಂದ ೧೩ ವರ್ಷ ಮೊದಲು ಪಟ್ಟವೇರಿದನು. ಅವರಲ್ಲಿ ಉಲ್ಲೇಖ ಮುಂದೆ ಬಂದೇ ಬರುತ್ತದೆ. ಈ ದುರ್ಘಟನೆಯ ಉಲ್ಲೇಖವು ಈ ವರೆಗೆ ದೊರೆತ ಯಾವ ಶಿಲಾಲೇಖ, ತಾಮ್ರಪಟಗಳಲ್ಲಿಯೂ ಕಂಡುಬರುವದಿಲ್ಲ. ಈ ಎಲ್ಲ ಕಾರಣಗಳಿಗಾಗಿ ಮುಹಮ್ಮದನು ಈ ದಾಳಿಯನ್ನು ನಿಜವಾಗಿಯೂ ಮಾಡಿರಬಹುದೇ? ಎರಡು ಸಂದೇಹ ಉಂಟಾಗುತ್ತದೆ; ಅದೂ ಅಪಾರವಾದ ಉಸುಬಿನ ಪ್ರದೇಶವನ್ನು ದಾಟಿ ಇಷ್ಟು ದೂರದ ಗುಜರಾಥಕ್ಕೆ ಬಂದಿರಬಹುದೇ?"

ಇಷ್ಟಾಗಿಯೂ, ಶ್ರೀ ವೈದ್ಯರು ಸೋಮನಾಥದ ದಾಳಿಯಲ್ಲಿ ಸತ್ಯಾಂಶವಿರಲೇಬೇಕೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ಅವರ ವಾದ ಸರಣಿಯು ಹೀಗೆ —

"ಹಿಂದು ಇತಿಹಾಸಕಾರರು, ತಮ್ಮ ದೇವಾಧಿದೇವರಿಗೆ ಮತ್ತು ಅತಿ ಶ್ರೇಷ್ಠ ರಾಜರಿಗೆ ಒದಗಿದ ದುರ್ಘಟನೆಯ ಉಲ್ಲೇಖ ಮಾಡದಿರುವದು ಸಹಜ. ನೂರಾರು ವರ್ಷ ತರುವಾಯ ಬರೆದ ಇತಿಹಾಸಕಾರರಿಗೆ ತಮ್ಮ ಪೂರ್ವಜ ಮುಸಲ್ಮಾನರು ಬರೆದ ಕೆಲವೊಂದು ಆಧಾರವಿರಲೇಬೇಕು. ಹಾಗೂ ಅವೆಲ್ಲ ಕೇವಲ ಕಾಲ್ಪನಿಕ ಕಥೆಗಳಾಗಿರಲಾರವು. ಇದಾದ ಮೇಲೆ ಶ್ರೀ ವೈದ್ಯರು ಇಬ್ನ ಅಸೀರನ ಬರೆಹದ ಇಂಗ್ಲೀಷ ಅನುವಾದವನ್ನು ಕೊಡುತ್ತಾರೆ. ಅದರ ಆ ಮುನ್ನ ಶ್ರೀ ವೈದ್ಯರು ಮತ್ತೆ ಇಬ್ನ ಅಸೀರನ ವಿವರಣೆಯ ಬಗ್ಗೆ ಹೀಗೆ ಹೇಳಿದ್ದಾರೆ —

"ಇದು ಅತಿಶಯೋಕ್ತಿ ಎಂದು ಒಮ್ಮೆಗೇ ಹೇಳಿಬಿಡಬಹುದು. ಮುಂದಿನ ಇತಿಹಾಸಕಾರರಲ್ಲಿ ಇದು ಇನ್ನೂ ಹೆಚ್ಚಿ ಹೋಯ್ತು. ಮುಹಮ್ಮದನ ಕಾಲ್ಪನಿಕ ಕತೆಗಳನ್ನೂ ಬರೆದರು. ಮುಹಮ್ಮದನ ಧಾರ್ಮಿಕ ಘನತೆಯನ್ನು ಹೆಚ್ಚಿಸುವದೇ ಅವರ ಮುಖ್ಯ ಹೇತು. ಉದಾಹರಣಾರ್ಥವಾಗಿ, ಗಿಬ್ಬನ್‌ರಿಂದ ಕೂಡ ಉಲ್ಲಿಖಿತವಾದ ಕತೆಯಿದೆ. ಸೋಮನಾಥನ ಮೂರ್ತಿಯಲ್ಲಿ ಅಪಾರವಾದ ಸಂಪತ್ತು ಬಚ್ಚಿಡಲಾಗಿದ್ದು ಅದನ್ನೂ ಮೂರ್ತಿಯನ್ನೂ ಉಳಿಸಿಕೊಳ್ಳಲು ಬ್ರಾಹ್ಮಣರು ಕೋಟಿ ಕೋಟಿ ರೂಪಾಯಿಗಳನ್ನು ಮುಹಮ್ಮದನಿಗೆ ಕಾಣಿಕೆ ಒಪ್ಪಿಸಹೋಗಲು ಅವನ ರಾಯಭಾರಿಗ್ಯಳಕರಿಸಿಕೇಳಿದರೂ ಅವನು ಈ ಕಾಣಿಕೆಯನ್ನು ನಿರಾಕರಿಸಿ, ಪರಲೋಕದ ನ್ಯಾಯಾಸ್ಥಾನದಲ್ಲಿ ತಾನು ವಿಗ್ರಹ ಭೇದಕನಲ್ಲದೆ ವಿಗ್ರಹಗಳನ್ನು ಮಾರಿಕೊಳ್ಳುವವನಲ್ಲ ಎಂದು ಹೇಳುವಂತಾಗಬೇಕು ಎಂದು ಮುಹಮ್ಮದನು ನುಡಿದನಂತೆ. ಇದನ್ನು, ಈ ಕತೆಯನ್ನು ಫರಿಸ್ತಾ ಎಂಬವನಲ್ಲದಿದ್ದರೂ ಇನ್ನಾರೋ ಕಲ್ಪಿಸಿ ಸೇರಿಸಿರಬೇಕು. ಸೋಮನಾಥದ ಈ ಅತಿರಂಜಿತ ಕತೆಯ ಬಗ್ಗೆ ವಿಲ್‌ಸನ್ನರು, ಈಲಿಯಟರು ಅನ್ನುವಂತೆ, ವಿವೇಚಿಸುತ್ತ ಹೀಗೆ ಹೇಳುತ್ತಾರೆ:— ಮೊದಲ ಕಾಲದ ಮುಸಲ್ಮಾನ ಲೇಖಕರು ಈ ಮೂರ್ತಿಯ ಅಂಗ ಭಂಗವಾದ ಬಗ್ಗೆ ಏನನ್ನೂ ಹೇಳುವದಿಲ್ಲ. ಯಾಕೆಂದರೆ ಲಿಂಗಕ್ಕೆ ಅಂಗಾಂಗಗಳೇ ಇರುವದಿಲ್ಲ. ಹಾಗೂ ಕಠಿಣ ಶಿಲಾಮಯ ಲಿಂಗದ ಒಡಲಲ್ಲಿ ಸಂಪತ್ತಿರುವ ಬಗೆ ಹೇಗೆ? ಫರಿಸ್ತಾ ಎಂಬವರು ಕಂಡು ಹಿಡಿದ ಮುತ್ತು ರತ್ನಗಳ ಗುಪ್ತ ರಾಶಿಯ ವಿಷಯ ನಿರಾಧಾರವಾಗಿದೆ. ಈ ಕತೆ ಹಾಸ್ಯಾಸ್ಪದವೆಂದು ಮೇಲೆಯೇ ಕಾಣುತ್ತದೆ. ಯಾಕೆಂದರೆ ಸೋಮನಾಥನ ಲಿಂಗವು ಕಠಿಣವಾದ ಶಿಲೆಯಿಂದ ರಚಿತವಾದುದು. ಈ ಕತೆಯಂತೆಯೇ ಓರ್ವ ವಿಶ್ವಾಸಘಾತಕ ಹಿಂದು ಮಾರ್ಗದರ್ಶಕನು ಮುಹಮ್ಮದನನ್ನು ಒಂದು ನಿರ್ಜಲ ಮರು ಪ್ರದೇಶಕ್ಕೆ ಕರೆದೊಯ್ಯಲು ಮುಹಮ್ಮದನು ತನ್ನ ಪ್ರಾರ್ಥನಾ ಬಲದಿಂದ ನೀರು ದೊರಕಿಸಿದನೆಂಬ ಕತೆಯೂ ಗುಜರಾತವು ಫಲಪ್ರದ ಹಾಗೂ ಹೊನ್ನಿನ ಕಣಗಳಿಂದ ಕೂಡಿದ ಪ್ರದೇಶವೆಂದು ಅಲ್ಲಿಯೇ ತಾನು ನೆಲೆಸಬೇಕೆಂದು ನಿರ್ಧರಿಸಲು ಇದು ಅಯುಕ್ತವೆಂದು ಮುಹಮ್ಮದನ ಮಂತ್ರಿಗಳು ಅವನ ಮನ ಒಲಿಸಿ, ಅವನ ತಂದೆಯಿಂದ ಬಂದ ಖುರಾಸಾನ ಎಂಬ ದೇಶವು ಅವನ ವಾಸಕ್ಕೆ ಯೋಗ್ಯ ಸ್ಥಳವೆಂದು ನಿವೇದಿಸಿದ ಕತೆಯೂ ನಂಬಲು ಬರುವಂತಹವಲ್ಲ.

ಇದರಂತೆಯೇ ಈ ದಾಳಿಯ ಬಗ್ಗೆ ಪ್ರಚಲಿತವಿರುವ ಇನ್ನು ಕೆಲವು ಕತೆಗಳ ಸತ್ಯತೆಯನ್ನು ಸಹ ಶ್ರೀ ವೈದ್ಯರು ಶಂಕಿಸಿದ್ದಾರೆ. ಇವುಗಳಲ್ಲಿ ಬಹ್ವಂಶ ಇಬ್ನ ಅಸೀರನ ಕತೆಗಳಂತೆ ಅತಿಶಯೋಕ್ತಿಯವಾಗಿವೆ. ಇಬ್ನ ಅಸೀರನ ವಿವರಣೆ ಕೂಡ ಅತಿಶಯೋಕ್ತಿಯಿಂದೇ ಶ್ರೀ ವೈದ್ಯರ ಅಭಿಪ್ರಾಯ. ಇಸ್ಲಾಮದ ಪ್ರಸಾರವಾಗಬೇಕೆಂಬ ಧರಿಮೆಯಿಂದ ಆ ಕಾಲದ ಮುಸಲ್ಮಾನ ಬರಹಗಾರರನೇಕರು ತಮ್ಮ ರಾಜರೂ ವೀರಾಧಿ ವೀರ ನಾಯಕರೂ ಭಂಗಿಸಿದ ಮೂರ್ತಿಗಳ, ಕೆಡಹಿದ ಗುಡಿಗಳ ಮತ್ತು ಒತ್ತಾಯದಿಂದ ಮತಾಂತರ ಗೊಳಿಸಿದ ಕತೆಗಳನ್ನು ಸಿಕ್ಕಾಬಟ್ಟೆ ಅತಿಶಯೋಕ್ತಿಯಿಂದ ಬರೆಯುತ್ತ ಬರೆದಿದ್ದಾರೆಂಬ ವಿಷಯ ಮಧ್ಯಯುಗೀನ ಹಿಂದುಸ್ತಾನ ಇತಿಹಾಸದ ವಿದ್ಯಾರ್ಥಿಗಳಿಗೆಲ್ಲ ಗೊತ್ತಿದ್ದ ವಿಷಯವೇ ಆಗಿದೆ. ಮುಹಮ್ಮದನು ಸೋಮನಾಥನನ್ನು ಮುಟ್ಟಿದ ಕಥೆಯು ಸತ್ಯವೆಂದು ಕೊಂಡರೂ, ಅದು ಸತ್ಯವಲ್ಲವೆನ್ನುವದಕ್ಕೆ ಸಾಕಷ್ಟು ಪ್ರಬಲ ಕಾರಣಗಳಿವೆ. ಈ ಘಟನೆಯ ಬಗ್ಗೆ ದೊರೆಕುವ ಉಲ್ಲೇಖಗಳು ಬಹ್ವಂಶ ಐತಿಹಾಸಿಕವಲ್ಲವೆಂಬುದರಲ್ಲಿ ಯಾವ ಸಂದೇಹವೂ ಇಲ್ಲ.

ಇನ್ನು ಶ್ರೀ ವೈದ್ಯರ ಶಬ್ದಗಳಲ್ಲಿಯೇ ಮುಹಮ್ಮದನ ಗುಣ ಸ್ವಭಾವ ಏನೆಂದು ಅರಿಯುವಾ.

"ರಾಷ್ಟ್ರಗಳ ಭವಿತವ್ಯವನ್ನು ಬದಲಿಸುವ, ಜಗದ ಇತಿಹಾಸವನ್ನೇ ಹೊಸದಾಗಿ ರೂಪಿಸುವ ಅಸಾಮಾನ್ಯ ಶಕ್ತಿಯಿಂದ ಕೂಡಿದ ಯುಗಪುರುಷರು ಆಗೊಮ್ಮೆ ಈಗೊಮ್ಮೆ ಉದಯಿಸುವದುಂಟು. ಇಂತಹರ ಸಾಲಿಕೆಯಲ್ಲಿ ಮುಹಮ್ಮದನೂ ಒಬ್ಬ. ಅಕಬರ, ಶಿವಾಜಿ, ನೆಪೋಲಿಯನ್ ಮತ್ತು ಪೀಟರ ಮಹಾಶಯ ಇವರೊಡನೆ ಮುಹಮ್ಮದನ ಹೆಸರನ್ನೂ ಎತ್ತಬಹುದು. ಮುಹಮ್ಮದನು ಅತ್ಯಂತ ನಿಯಮನಿಷ್ಠನು, ನಿರ್ಧಾರದ ಸ್ವಭಾವದವನು. ಅವನ ದಾಳಿಗಳ ಇತಿಹಾಸದಲ್ಲಿ ಪಟ್ಟಣಗಳ, ಗುಡಿಗಳ, ಸುಲಿಗೆಯ ನರಹತ್ಯೆಯ ಹಾಗೂ ವೈರಿಗಳನ್ನು ಗುಲಾಮರನ್ನಾಗಿ ಮಾಡಿಕೊಂಡ ಮಾತಿದ್ದರೂ ಸ್ತ್ರೀ ಮಾನಭಂಗವಾಗಲೀ ಸ್ತ್ರೀ ಹತ್ಯೆಯಾಗಲೀ ಕಂಡು ಬರುವದಿಲ್ಲ. ಅವನ ನ್ಯಾಯ ಬುದ್ಧಿಯು ಬಹಳ ತೀಕ್ಷ್ಣವಾಗಿತ್ತು. ಒತ್ತಾಯ ವಜ್ಞಾಳಿಕೆಗಳೆಂದರೆ ಅವನಿಗೆ ಆಗುತ್ತಿರಲಿಲ್ಲ. ವ್ಯಭಿಚಾರದ ಅಪರಾಧದಲ್ಲಿ ತನ್ನ ಮಗನು ಸಿಲುಕಿಕೊಂಡಿದ್ದರೂ ಅವನಿಗೆ ಸಹ ಕಠಿಣ ಪ್ರಾಣದಂಡನೆ ವಿಧಿಸಲು ಹಿಂದೆಗೆಯದಂತಹವನು. ಅವನು ಒಳ್ಳೆಯ ಅರಸನು. ಅವನ ಆಡಳಿತವು ಒಳ್ಳೆಯದು. ಜನರ ಹಿತಕ್ಕಾಗಿ ದುಡಿಯಲು ಸದಾ ಸಿದ್ಧನು. ಕಳವು, ತುಡುಗು ಆಗದಂತೆ ನೋಡಿಕೊಂಡು ವ್ಯಾಪಾರ ಬೆಳೆವಂತೆ ಮಾಡಿದನು. ದೂರ ದೂರದ ಪ್ರಾಂತಗಳ ಸಂಪರ್ಕ, ವಿನಿಮಯ ನಿರಾತಂಕವಾಗಿ ಗಂಡಾಂತರಗಳಿಲ್ಲದೆ ಸಾಗುವಂತೆ ಏರ್ಪಡಿಸಿದ್ದನು. ಇದರಿಂದ ಖೋರಾಸಾನ ಮತ್ತು ಲಾಹೋರ (ಉಚ್ಚ) ಗಳ ನಡುವೆ ಪ್ರಯೋಜಕರ ತಂಡಗಳು ನಿರ್ಭಯವಾಗಿ ಹೋಗುತ್ತಿದ್ದವು ಬರುತ್ತಿದ್ದವು. ಅವನು ಪ್ರಾಂತಗಳಲ್ಲಿ ಒಳ್ಳೆಯ ಗವ್ಹರ್ನರರನ್ನು ನೇಮಿಸಿದ್ದನಲ್ಲದೆ ಅವನು ಜನರನ್ನು ದಬ್ಬಿ ಆಳದ ಹಾಗೆ ತಾನೇ ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದನು. ಬಡವರ ಭಾಗ್ಯದಾತನೆಂದೂ, ವಿಧವೆಯರು ಧನಿಕರು ಮೊದಲು ಮಾಡಿ ಎಲ್ಲರಿಗೂ ಸಮಾನ ನ್ಯಾಯದಾನ ಮಾಡಿ ಬಲಾತ್ಕಾರ ಇಲ್ಲದ, ಜಂಬಗಳಿಗೆ ಅಸ್ಪದವೇ ದೊರಕದ ಹಾಗೆ ಮಾಡಿದವನೆಂದೂ ಉತ್ಬಿಯು ಮುಹಮ್ಮದನನ್ನು ಹೊಗಳಿದ್ದು ಕೇವಲ ಮುಖಸ್ತುತಿಯಲ್ಲ. ಅವನು ತೂಕ ಅಳತೆಯ ಅಧಿಕಾರಿಯ ಮುಖಾಂತರ ಪೇಟೆಯ ನಿರ್ದಿಷ್ಟವಾದ ಅಳತೆ ಮಾಪುಗಳಲ್ಲಿ ಮೋಸವಾಗದಂತೆ ವ್ಯವಸ್ಥೆ ಮಾಡಿದ್ದನು. ಮೊದಲು ಪೇಟೆಯ ಬೀದಿಗಳಿಗೆ ಹೊಂದಿಕೆ ಇರಲಿಲ್ಲ. ಜನರು ದೂಳು ಮಳೆ ಗಾಳಿ ಉಪಟಳಕ್ಕೆ ಗುರಿಯಾಗಬೇಕಾಗುತ್ತಿತ್ತು. ಅವನು ಪೇಟೆಯ ಸಾಲಿಗೆಗಳಲ್ಲಿ ಒಂದಕ್ಕೊಂದು ಹೊಂದಿಕೊಂಡಿರಬೇಕೆಂದು ಆಜ್ಞೆ ವಿಧಿಸಿದನು. ಎಲ್ಲರೂ ಬೆಳಕು ಮತ್ತು ಸೂರ್ಯನ ಪ್ರಕಾಶದಿಂದ ಆನಂದಿತರಾಗುವ ಹಾಗೆ ತಕ್ಕ ವ್ಯವಸ್ಥೆಯನ್ನು ಇರಿಸಿದ್ದನು. ಜನತೆಯ ಸುಖಕ್ಕಾಗಿ ನ್ಯಾಯ ಬುದ್ಧಿಯ ಪ್ರಸಾರಕ್ಕಾಗಿ ಮತ್ತು ಪವಿತ್ರ ಹಾಗೂ ಉದಾರ ದಾನಕ್ಕಾಗಿ ಅವನು ಪ್ರತಿ ವರ್ಷ ಒಂದು ಲಕ್ಷ 'ದಿನಾರ' ಗಳನ್ನು ವೆಚ್ಚ ಮಾಡುತ್ತಿದ್ದನು.

ಚಂಗಿಸಖಾನ ಮತ್ತು ತಿಮೂರರ ಹಾಗೆ ಮುಹಮ್ಮದನು ನಿರಪರಾಧಿಗಳ ಹಾಗೂ ಅಸಹಾಯರ ಅವಮಾನಪುಕೊಲೆ ಕೈಕೊಳ್ಳಲಿಲ್ಲ. ಅವನು ವಿದ್ಯಾಪ್ರಸಾರಕ್ಕಾಗಿ ಪ್ರತಿವರ್ಷ ಅಪಾರಧನ ವೆಚ್ಚ ಮಾಡುತ್ತಿದ್ದನು. ನೇತನದ ಪ್ರಾಧ್ಯಾಪಕರಿದ್ದ ದೊಡ್ಡ ಕಾಲೇಜನ್ನು ಇವನು ಸ್ಥಾಪಿಸಿದ್ದನು ಸರಕಾರವೇ ಅಲ್ಲಿ ಕಲಿವ ವಿದ್ಯಾರ್ಥಿಗಳಿಗೆ ವಾಸಗ್ರಾಸಗಳನ್ನು ಒದಗಿಸುತ್ತಿತ್ತು.

ಫಿರ್ದೂಸಿಯ ಬಗ್ಗೆ ಹೇಳಲಾಗುತ್ತಿದ್ದ ಕಥೆಯು ಪರ್ಶಿಯಾ ದೇಶದ ಸಾಹಿತ್ಯ ಹಾಗೂ ಪ್ರಾಚೀನ ಇತಿಹಾಸಗಳ ಸಂರಕ್ಷಣೆಗೆ ಮುಹಮ್ಮದನು ತುಂಬ ಪ್ರೋತ್ಸಾಹ ಕೊಟ್ಟನೆಂದು ತೋರುತ್ತದೆ. ಫಿರ್ದೂಸಿಯು ಶಿಯಾ ಪಂಥದವನು ಹಾಗೂ ಬಹುತರ ಪಾಖಂಡಿ. ಅದರೂ ಅಗ್ನಿಪೂಜಕ ಪರ್ಶಿಯಾ ರಾಜರ ಇತಿಹಾಸವನ್ನು ಅಜರಾಮರವಾಗಿಸುವ ಕಾರ್ಯ ಅವರಿಗೆ ಒಪ್ಪಿಸಲ್ಪಟ್ಟಿತ್ತು. ಇದರಿಂದ ಸಂಗತಿಯಿಂದ ಮುಹಮ್ಮದನಿಗಿದ್ದ ಅಸ್ಮಾನ ವಿದ್ಯಾಪಕ್ಷಪಾತವು ವ್ಯಕ್ತವಾಗದಿರದು.

ಮುಹಮ್ಮದನು ಸ್ವತಃ ಸುನ್ನಿ ಪಂಥಕ್ಕೆ ಸೇರಿದವನು. ಆದರೂ ಪಿಸ್ತೂರೀ ಕಲ ಅರೆಬ್ಬ ಸಂಸ್ಕೃತಿಯನ್ನು ಬರಿಗೆ ಸಂಸಿಯಾ ಅವನು ಪರ್ಶಿಯನ್ ಸಾಹಿತ್ಯ ಹಾಗೂ ತತ್ತ್ವ ಶಾಸ್ತ್ರಗಳ ಬೆಳವಣಿಗೆಗೆ ಧನ ಸಹಾಯ ನೀಡಿದನು..... ಮುಹಮ್ಮದನು ಅಲ್ಬೆರುಣಿಗೆ ಕೊಟ್ಟ ಉದಾರಾಶ್ರಯದಿಂದ ಸಂಸ್ಕೃತ ಸಾಹಿತ್ಯ, ಶಾಸ್ತ್ರ ಮತ್ತು ತತ್ತ್ವಜ್ಞಾನಗಳ ಅಭ್ಯಾಸಕ್ಕೂ ಅವನ ಅಕ್ಷೇಪವಿರಲಿಲ್ಲ ಎಂಬುದಾಗಿ ಕಂಡುಬರುತ್ತದೆ. ಮುಹಮ್ಮದನ ರಾಜಾಸ್ಥಾನವನ್ನು ಫಿರ್ದೂಸಿ ಹಾಗೂ ಅಲ್ಬೆರುಣಿಗಳಂತಹ ಅಸಾಮಾನ್ಯ ಪ್ರತಿಭೆಯ ವಿದ್ವಾಂಸರು, ಕವಿಗಳು, ಶಾಸ್ತ್ರಜ್ಞರು ಮತ್ತು ತತ್ತ್ವಜ್ಞಾನಿಗಳು ಅಲಂಕರಿಸಿದ್ದರು. ಇದರಿಂದ ಅಕಬರನಂತೆ ಮತ್ತು ವಿಕ್ರಮಾದಿತ್ಯನಂತೆ ಇವನ ಕೀರ್ತಿಯೂ ಅಜರಾಮರವಾಗಲಿದೆ ಇಲ್ಲ. ಚಾಲರನಂತೆ ಮುಹಮ್ಮದನೂ ಯುದ್ಧ ಮಧ್ಯದಲ್ಲಿದ್ದಾಗ ತನ್ನ ನೆನಪುಗಳನ್ನು ಬರೆದು ಮನೆಗೆ ಕಳಿಸುತ್ತಿದ್ದನು. ಮುಹಮ್ಮದನ ಮುಲ್ಕಿ ಆಡಳಿತವೂ ಸೈನ್ಯ ಶಾಖೆಯ ಆಡಳಿತವೂ ಸುವ್ಯವಸ್ಥಿತವಾಗಿ ಭದ್ರವಾಗಿದ್ದವು.... ಒಟ್ಟಿನಮೇಲೆ, ಮುಹಮ್ಮದನು ಜಗತ್ತಿನ ಅತಿ ಶ್ರೇಷ್ಠ ರಾಜರಲ್ಲಿ ಒಬ್ಬನೆಂದು ಗಿಬ್ಬನ್ನರು ಅಂದುದು ಸರಿಯಾಗಿಯೇ ಇದೆ ಎಂದು ನಮಗೆನ್ನಿಸುತ್ತದೆ. ಅವನು ಕೆಚ್ಚೆದೆಯ ಸೈನಿಕನೂ, ಒಳ್ಳೆ ಸಮರ್ಥ ಸೇನಾಪತಿಯೂ, ನ್ಯಾಯಪ್ರಿಯನೂ ವಿದ್ಯಾಪಕ್ಷಪಾತಿಯೂ ತನ್ನ ಪ್ರಜಾಸುಖಕ್ಕಾಗಿ ಅವರ ಶಾಂತಿಗಾಗಿ, ಏಳಿಗೆಗಾಗಿ ದುಡಿವ ರಾಜಾಧಿರಾಜನೂ ಆಗಿದ್ದನು. ತನ್ನ ರಾಜ್ಯದಲ್ಲಿ ಶಿಕ್ಷಣ ಮತ್ತು ವ್ಯಾಪಾರ ಹೆಚ್ಚಲೆಂದು ಬಹಳ ಪರಿಶ್ರಮ ವಹಿಸಿದನು. ಮುಹಮ್ಮದನ ವೈಯಕ್ತಿಕ ಸ್ವಭಾವವು ಸೌಮ್ಯ;ಕ್ರೂರನಲ್ಲ, ಉದಾರಿ, ಕೃಪಣನಲ್ಲ; ಅವನು ಅತ್ಯಂತ ನಿಯಮನಿಷ್ಠನು, ಶಾಂತ ಸ್ವಭಾವದವನು."

ಶ್ರೀ ವೈದ್ಯರು ಮತ್ತೂ ಹೀಗೆ ಹೇಳುತ್ತಾರೆ—

"ಸೋಮನಾಥ ದೇವಾಲಯದ ಚಂದನ ಮಹಾದ್ವಾರಗಳನ್ನು ಮುಹಮ್ಮದನು ಘಜನಿಗೆ ಒಯ್ದನೆಂಬ ಕಥೆಗೆ ಆಧಾರವೇನ ಪಂಡಿತರ ಬೆಂಬಲವಿಲ್ಲ. ಇದರಂತೆ, ೧೮೪೨ ರಲ್ಲಿ ಇಂಗ್ಲೀಷರು ಅಫಗಾನಿಸ್ತಾನವನ್ನು ಗೆದ್ದಮೇಲೆ ಈ ಮಹಾದ್ವಾರಗಳನ್ನು ತಿರುಗಿ ತಂದರೆಂಬ ಹಾಗೂ ಅವಿನ್ನೂ ಆಗ್ರಾ ಕೋಟೆಯಲ್ಲಿ ದಿಕ್ಕಿಲ್ಲದೆ ಬಿದ್ದಿವೆ ಎಂಬ ಮಾತಿಗೂ ಹುರುಳಿಲ್ಲ. (ಸರದೇಸಾಯಿ)"

ಮುಹಮ್ಮದನ ಸೈನ್ಯದಲ್ಲಿ ಹಿಂದುಗಳನೇಕರಿದ್ದರು. ಅವರು ತಮ್ಮ ತಮ್ಮ ಧರ್ಮವನ್ನೇ ಅನುಸರಿಸಿಕೊಂಡಿದ್ದರು. ಅವರಲ್ಲಿ ಓರ್ವ ಸೇನಾಪತಿಯ ಹೆಸರು ಟಿಳಕ ಎಂದಿತ್ತು. ಟಿಳಕ ಹಾಗೂ ಅವನ ಹಿಂದು ಸೈನಿಕರ ಸಹಾಯದಿಂದ ಮುಹಮ್ಮದನು ಹಿಂದುಸ್ತಾನದ ಹೊರಗಿನ ಮುಸಲ್ಮಾನ ವೈರಿಗಳನ್ನೆಷ್ಟೋ ಎದುರಿಸಿ ಗೆದ್ದನು. ಹಿಂದುಸ್ತಾನದ ದಾಳಿಯ ಕಾಲಕ್ಕೆ ಪೂಜಾರಿಗಳಿಂದ ಕಪ್ಪ ಕಾಣಿಕೆ ಪ್ರಚುರವಾಗಿ ಪಡೆದಾಗ ಅವನು ಗುಡಿಗಳನ್ನು ಕೆಡವದೆ ಹಾಗೇ ಹೋಗುತ್ತಿದ್ದನು. ತನ್ನ ರಾಜ್ಯವನ್ನು ವಿಸ್ತರಿಸುವಾಗ ಅವನು ಟಾರ್ಟಾರ, ಖೋರಾಸಾನ, ಬಲ್ಖ ಮತ್ತು ಇಸ್ಫಹಾನುಗಳಲ್ಲಿ ಮಾಡಿದ್ದನ್ನು ಹಿಂದುಸ್ತಾನದಲ್ಲಿ ಮಾಡಿದ್ದಾನೆ.

ಆದರೂ, ಮುಹಮ್ಮದನು ಹಿಂದುಸ್ತಾನದ ದಾಳಿಯಲ್ಲಿ ಗುಡಿಗಳನ್ನು ಕೆಡವಿದ, ವಿಶೇಷತಃ ಯುದ್ಧ ಕೈದಿಗಳನ್ನು ಒತ್ತಾಯದಿಂದ ಮತಾಂತರಗೊಳಿಸಿದ ಮಾತುಗಳು ನಿಜವೆಂದೇ ಒಪ್ಪಬೇಕಾಗುತ್ತದೆ. ಅಕಬರನಾಗಲಿ, ಶಿವಾಜಿಯಾಗಲಿ ಬೇರೆ ಧರ್ಮದವರ ವಿಷಯದಲ್ಲಿ ಈ ಬಗೆಯ ಬಲಾತ್ಕಾರದ ತಪ್ಪು ಎಂದೂ ಮಾಡಲಿಲ್ಲ. ಈ ಮಾತು ಅವರ ಸ್ವಭಾವದಲ್ಲಿ ಬಹು ದೊಡ್ಡ ಅಂತರವನ್ನು ತೋರಿಸುತ್ತದೆ. ನಾವು ಮೇಲೆ ಹೇಳಿರುವದೆಲ್ಲ ಮುಖ್ಯವಾಗಿ ಎರಡು ಮಾತುಗಳನ್ನು ಸ್ಪುಟಗೊಳಿಸುವ ಉದ್ದೇಶದಿಂದ. ಮೊದಲನೆಯದಾಗಿ, ಇತಿಹಾಸದ ಹೆಸರಿನಲ್ಲಿ ಬರೆದಿಟ್ಟ ಕತೆಗಳೆಲ್ಲ ನಿಜವೆಂದು ನಂಬಬೇಕಿಲ್ಲ; ಎರಡನೆಯದಾಗಿ, ಅನೇಕ ವ್ಯಕ್ತಿಗಳ ದುರ್ಗುಣಗಳಲ್ಲಿ ಸದ್ಭಾವ ಸದ್ಗುಣಗಳು ಅಡಗಿರುವವು. ಇತಿಹಾಸವನ್ನು ನಾವು ತುಂಬ ಎಚ್ಚರಿಕೆಯಿಂದ, ಸಹಾನುಭೂತಿಯಿಂದ, ತಾಳ್ಮೆಯಿಂದ, ನಿಷ್ಪಕ್ಷಪಾತ ಮನಸ್ಸಿನಿಂದ ಅಭ್ಯಸಿಸುವದು ಅಗತ್ಯವಾಗಿದೆ. ಅಂದರೆ ಮಾತ್ರ ಸತ್ಯದ ಸಹಿಹಕ್ಕೆ ಹೋಗಿ ಇಂತಹ ಅಭ್ಯಾಸದಿಂದ ಪ್ರಯೋಜನ ಪಡೆಯಬಹುದು. ಮೇಲಾಗಿ ಧರ್ಮದ ವಿಷಯದಲ್ಲಿ ಯಾವದೇ ಪ್ರಕಾರದ ಬಲಾತ್ಕಾರವು ಕುರಾನ ಉಪದೇಶ ಹಾಗೂ ಪೈಗಂಬರರ ಜೀವನ ಮತ್ತು ಉದಾಹರ

—ಎನ್‌ರಿಯ ಸುಟಕ್ಕೆ

ನಿರುತ್ಸಾಹಕ್ಕೆ ಮದ್ದು!

ಉತ್ಸಾಹವೆಂದರೆ ಕಾರ್ಯಶಕ್ತಿ. ಅದಿಲ್ಲದೆ ಮಾನವನು ಯಾವ ಕಾರ್ಯವನ್ನೂ ಮಾಡಲಾರನು. ಕೆಲವೊಮ್ಮೆ ಸ್ಪಷ್ಟಾಸ್ಪಷ್ಟ ಕಾರಣಗಳಿಂದ ದೈಹಿಕವಾಗಿ, ಅದಕ್ಕಿಂತಲೂ ಹೆಚ್ಚಾಗಿ ಮಾನಸಿಕವಾಗಿ, ನಿರುತ್ಸಾಹ, ಉದ್ವೇಗ, ಜಡತೆ ಸಂಭವಿಸುತ್ತದೆ. ಯಾವ ಕಾಹಿಲೆ ಹಿಡಿದಿದೆಯೆಂದರೆ ಹೇಳಬರುವಂತಿಲ್ಲ, ಆದರೆ ಆರೋಗ್ಯವಂತನ ಕಾರ್ಯಸ್ಫೂರ್ತಿ ಬರದು. ಕೇವಲ ತಂದ್ರೀಭೂತಸ್ಥಿತಿಯಲ್ಲಿ ಹಗಲುಗನಸು ಕಾಣುತ್ತ ಅಜೀರ್ಣಗ್ರಸ್ತನಂತೆ ಉರುಳುತ್ತ ಹೊರಳುತ್ತ ಚಿಂತೆಯೂ ಅಲ್ಲ ನಿಶ್ಚಿಂತೆಯೂ ಇಲ್ಲ ಎಂಬ "ನಶೂನ್ಯಂ ನಚಾಶೂನ್ಯಂ" ಎಂಬಂತಹ ಸ್ಥಿತಿ ಎಲ್ಲರ ಅನುಭವಕ್ಕೂ ಒಮ್ಮೆ ಯಾದರೂ ಬಾರದಿಲ್ಲ. ಅದಕ್ಕೊಂದು ಬ್ರಿಟಿಶ್ ಮೆಡಿಕಲ್ ಜರ್ನಲ್ಲಿನಲ್ಲಿ ಒಂದು ದಿವ್ಯವಾದ ಗುಳಿಗೆಯನ್ನು ಹೇಳಿದ್ದಾರೆ.

ಮಾನಸಶಾಸ್ತ್ರೀಯ ಚಿಕಿತ್ಸಕರಲ್ಲಿ ಪ್ರಸಿದ್ಧರಾದ ಡಾ. ಹ್ಯಾಕಿಂಗ್ಸರು ಅನೇಕ ಪ್ರಯೋಗಗಳನ್ನು ಮಾಡಿ ಸದ್ಯಕ್ಕೆ ಲಭಿಸುವ ಔಷಧಗಳಲ್ಲೆಲ್ಲ Synhoxyl— ಸಿನ್ ಹೆಕ್ಸಿಲ್ ಗುಳಿಗೆಗಳು ಆಶ್ಚರ್ಯಕರ ಪರಿಣಾಮವನ್ನುಂಟುಮಾಡುವವೆಂದು ಸಂಶೋಧಿಸಿದ್ದಾರೆ. ಅದರ ಸೇವನೆಯಿಂದ ಮನಸ್ಸು ಹಗುರವಾಗಿ, ಸುಖವೃತ್ತಿ ತಲೆದೋರಿ, ಜೀವನದಲ್ಲಿ ಹುರುಪುಹುಟ್ಟಿ, ಕಾರ್ಯಶಕ್ತಿ ಉದ್ಬುದ್ಧವಾಗಿ ತೃಪ್ತಿಯುಂಟಾಗುತ್ತದೆಂದು ನಿರುತ್ಸಾಹ ಗ್ರಸ್ತರಾದ ಅನೇಕ ರೋಗಿಗಳೆಂದು ಒಪ್ಪುತ್ತಾರೆ. ಇದರ ಪರಿಣಾಮ ಮನೋವೇಗಗಳ ಮೇಲಾಗಲು ಸುಮಾರು ೩ ಗಂಟೆಗಳ ಕಾಲ ಬೇಕಾಗುತ್ತದೆ. ಇದರಿಂದ ವಿಚಾರಶಕ್ತಿ, ಜ್ಞಾಪಕಶಕ್ತಿಗಳು ಎಂದೂ ಕುಂಠಿತವಾಗುವುದಿಲ್ಲ. ಹಾಗಲ್ಲದೆ ಅವು ಹೆಚ್ಚಿ, ಬುದ್ಧಿ ಚುರುಕಾಗಿ, ಭಾವನೆ ಸ್ಫೂರ್ತಿಗೊಂಡು ತೆಗೆದುಕೊಂಡ ೮-೧೦ ಗಂಟೆಗಳ ಕಾಲದಲ್ಲಿ ಕೈಗೆ ತೆಗೆದುಕೊಂಡ ಸಮಸ್ಯಾ ಪರಿಹಾರ ಕಾರ್ಯವನ್ನು ಅತಿಸುಲಭವಾಗಿ ಮಾಡಲು ಅಂತಃಶಕ್ತಿ ಉದಯಿಸುತ್ತದೆಂದು ಹೇಳಲಾಗುತ್ತದೆ. ಮಾದಕಪದಾರ್ಥಗಳಿಂದುಂಟಾಗುವ ಯಾವ ದುಷ್ಪರಿಣಾಮವೂ ಇದರಿಂದಾಗದು. ಏನಾದರೂ ಆದರೆ, ಕೆಲಕಾಲದ ನಂತರ ಒಂದು ವಿಧದ ಸ್ವಪ್ನ ಸದೃಶವಾದ ತೃಪ್ತಿ, ಅನಾಸಕ್ತ ಭಾವ ಉಂಟಾಗಬಹುದು— ಅಷ್ಟೆ.

ನಿರುತ್ಸಾಹಿಗಳಿಗಿದು ಸಂಜೀವನಿಯಲ್ಲವೆ? ನಾನಾ ಕಾರಣಗಳಿಂದ ಜಡತ್ವ ಹೊಂದಿದವರು ಇದನ್ನು ಬಳಸಲು ಆಸಕ್ತರಾಗುವುದು ಸಹಜವಿದೆ. ಏಕೆಂದರೆ— ಉತ್ಸಾಹವು ಆಶಾವಾದದ ಬೀಜ. ಆಶಾವಾದ ಜೀವನದ ಧ್ರುವತಾರೆ. ಜೀವನವೆಂದರೆ ಆನಂದ; ಆನಂದವೇ ಸರ್ವರ ಗುರಿ!

ಮಾತಾಡುವುದರಲ್ಲಿ ಕುಂದು ಕೊರತೆಗಳು

"ನನಗೆ ಕನ್ನಡ ಬರುತ್ತದೆ" ಎಂದು ನಿರಕ್ಷರ ಕುಕ್ಷಿಯೂ ಅಸಂಸ್ಕೃತನೂ ಹೇಳುವುದರಲ್ಲಿ ಎಷ್ಟಂಶ ಸತ್ಯವಿದೆಯೋ ಹಾಗೇ "ನನಗೆ ಮಾತಾಡಲು ಬರುತ್ತದೆ ಎಂದು ಒಬ್ಬಾತ ಇಲ್ಲವೆ ಒಬ್ಬಾಕೆ ಹೇಳುವುದರಲ್ಲಿಯೂ ಅಷ್ಟೇ ಸತ್ಯಾಂಶವಿದೆ "ವಸ್ತ್ರೇಣ ವಪುಷಾ ವಾಚಾ" ಎಂಬ ಮಾತಿನಂತೆ ಒಬ್ಬನ ವ್ಯಕ್ತಿತ್ವ ಪ್ರದರ್ಶನದಲ್ಲಿ ವಸ್ತ್ರ ಮೊದಲು. ಆದರೆ ಅದಕ್ಕೂ ಹೆಚ್ಚಿನದು ಅಂಗಸೌಷ್ಠವ, ಅದನ್ನು ಮೀರಿ ಪ್ರಭಾವಿಯಾಗಿ ನಿಲ್ಲುವುದೆಂದರೆ ಮಾತಿನ ಮಟ್ಟು. ಇದು ಕೇವಲಲೋಕೋಕ್ತಿಯಕೋಸ್ಟೇ ಅಲ್ಲ ಮಾನಸಶಾಸ್ತ್ರದ ಪ್ರಕಾರವೂ ಸಾಧಾರ ಸಿದ್ಧಾಂತ ಮನುಷ್ಯನ ವ್ಯಕ್ತಿತ್ವವನ್ನು ತುಂಬಿಕೊಡುವ ಮಾತುಗಾರಿಕೆಯ ಪ್ರಾಧಾನ್ಯ ಜೀವನದಲ್ಲೆಷ್ಟಿದೆ ಎಂಬುದನ್ನು ಲಕ್ಷ್ಯದಲ್ಲಿಟ್ಟುಕೊಂಡು ವಾಗ್ದೋಷಗಳನ್ನೂ ಅವುಗಳ ಪರಿಹಾರೋಪಾಯಗಳನ್ನೂ ಪ್ರತಿಯೊಬ್ಬನೂ ಗಮನಿಸಬೇಕಾಗಿದೆ.

ವೇದದಲ್ಲಿ ಮೇಲಿನ ಮಾತಿಗೆ ಪುಷ್ಟಿದೊರೆವಂತೆ "ವಾಗ್ವೈ ಸಮ್ರಾಟ್ ಪರಮಂ ಬ್ರಹ್ಮ- ಮಾತೆಂಬುದು ಸರ್ವೇಶ್ವರನೆನಿಸಿದ ಬ್ರಹ್ಮ" ಎಂದು ಹೇಳಿದೆ. ಮಾತಿನ ದೋಷಗಳಲ್ಲಿ ಮೂಲಭೂತವೆನಿಸಿದವು ನಾಲ್ಕು: (೧) ಕೇಂದ್ರ ನರಮಂಡಲಕ್ಕೆ ಅಪಾಯ ಒದಗುವುದು—ಇದರಿಂದ ಔತ್ಪಾತಿಕ ಉಚ್ಚಾರಣೆ ಸಂಭವಿಸುವುದು, (೨) ತಾಂತ್ರಿಕ ನ್ಯೂನತೆ— ತಾಲು ಭಿನ್ನವಾಗಿರುವುದು, ಗಂಟಲೊಡೆದಿರುವುದು ಇತ್ಯಾದಿಗಳಿಂದ ಉಚ್ಚಾರಣೆಗೆ ತಡೆಯುಂಟಾಗುವುದು, (೩) ಆಹಾರದ ಪೌಷ್ಟಿಕಾಂಶ ಕಡಿಮೆಯಾಗುವುದು— ಇದರಿಂದ ನಿಂಗಡವಾಗಿ ಉಚ್ಚರಿಸಲು ತಡೆಯುಂಟಾಗುವುದು, (೪) ಮಾನಸಿಕ ದೋಷಗಳು— ನಾನಾವಿಧದ ಅಸ್ತವ್ಯಸ್ತತೆ.

ವಿವಿಧ ಪ್ರಪಂಚ

ವಿವರವಾಗಿ ಪರೀಕ್ಷಿಸಿದರೆ ಒಂದು ಮಗುವಿಗೆ ಜಂತಿನ ನ್ಯೂನತೆಗಳಿರಬಹುದು. ಇದರ ಪರಿಹಾರಕ್ಕೆ ವೈದ್ಯನು ಕೋಣೆಯೊಂದರಲ್ಲಿ ಕನ್ನಡಿಯೆದುರು ಮಗುವನ್ನು ನಿಲ್ಲಿಸಿ ಶಾಸ್ತ್ರೋಕ್ತವಾಗಿ ನಾಲಿಗೆಯಾಡಿಸುವುದನ್ನು ಕಲಿಸಬೇಕಾಗುವುದು. ಇದರಿಂದ ಹೊಸ ಮಾತು ರಚಿತವಾಗುವುದಲ್ಲದೆ, ಮಗುವಿಗೆ ಹೊಸ ವ್ಯಕ್ತಿತ್ವ ತಲೆದೋರುವುದೆಂದು ಶ್ರೀ ಜೆ. ಡಿ. ರಾಬ್ಸ್‌ಕ್ಲಿಫರು ಅಭಿಪ್ರಾಯಪಡುತ್ತಾರೆ. ತೊದಲು (ಉಗ್ಗು)ವುದಕ್ಕೆ ಹಿಂದೆ ಹೇಳಿದ ನಾಲ್ಕರಲ್ಲಿಯಾವುದಾದರೊಂದು ಕಾರಣವಾಗಬಹುದು. ಅದರಲ್ಲಿ ೨ ವಿಧ: ಶಬ್ದ ಪುನರುಚ್ಚಾರಣ, ಉಚ್ಚಾರಣಾಭಾವ ಎಂದು; ಮೊದಲನೆಯದಕ್ಕೆ ವಾಗುಪಕರಣಗಳಲ್ಲಿಯ ನರಮಂಡಲದ ನ್ಯೂನತೆಯೂ ೨ ನೆಯದಕ್ಕೆ ಶ್ವಾಸೋಚ್ಛ್ವಾಸಕರಣಗಳಲ್ಲಿಯ ನರಮಂಡಲದ ದೌರ್ಬಲ್ಯವೂ ಕಾರಣಗಳು. ತೊದಲನ್ನು ಕೂಡ ಯುಕ್ತಕ್ರಮದ ಸಾಧನ ಬೋಧನಗಳಿಂದ ತಿದ್ದಬಹುದು. ಕಿಮೊಗ್ರಾಫ್ ಅಂಥ ಸಾಧನಗಳಲ್ಲೊಂದು.

ಪ್ರಾಯ ಬಂದೊಡನೆ ಸ್ವರಭೇದ ಉಂಟಾಗಲು ಸ್ವರತಂತುಗಳು ವಿಸ್ತಾರವಾಗುವುದೇ ಕಾರಣ. ಹೆಚ್ಚಾಗಿ, ಮಾತಾಡುವಲ್ಲಿ ಆಗುವ ಅಡ್ಡಿಗಳಿಗೆ ಬಾಲ್ಯದಲ್ಲಿ ಮೂರ್ಛೆ, ಮೂಲರೋಗಾದಿಗಳು ಹಿಡಿದಿರುವುದು ಕಾರಣವಾಗುತ್ತದೆ.

ಅಮೇರಿಕದಲ್ಲಿ ಪ್ರೊ. ಮಾರ್ಟಿನ್, ಎಫ್. ಪಾಮರ್ ಮುಂತಾದವರು ವಾಗ್ದೋಷಗಳನ್ನು ವೈಜ್ಞಾನಿಕವಾಗಿ ಗುಣಪಡಿಸಿದ್ದಾರೆ. ಒಂದೊಂದು ವ್ಯಕ್ತಿಗೆ ೨೬ ಡಾಲರ್ ಖರ್ಚು ತಗುಲುವುದಂತೆ.

ಕುಮಾರಪಿತ !

ಕುಮಾರಪಿತ (ಮದುವೆಯಾಗದ ತಂದೆ) ಎಂದ ಕೂಡಲೆ ಯಾರೂ ಗಾಬರಿಯಾಗುವ ಕಾರಣವಿಲ್ಲ. ಜಗತ್ತಿನಲ್ಲಿ ಅವರದೂ ಒಂದು ಅಲ್ಪಸಂಖ್ಯಾಕ ಜನತೆ ಇದೆ. ಲೋಕದಲ್ಲಿ ಏನು ತಿಳಿದುಕೊಂಡಿದ್ದಾರೆಂದರೆ — ಒಬ್ಬ ಹುಡುಗನಿಂದ ಒಬ್ಬಳು ಪ್ರಾಪ್ತಗರ್ಭಳಾದರೆ ಹುಡುಗನೇ ಪಾಪಿ, ಚಂಡಾಲ, ಅಧಮಾಧಮ—ಎಂದು. ಕಾರಣವೇನೆಂದರೆ, ಅವನು ಅನೇಕ ವೇಳೆ ಸಿಕ್ಕಿ ಬೀಳದೆ (ಸಾಕ್ಷಿ ಇಲ್ಲದೆ) ತಪ್ಪಿಸಿಕೊಂಡಿರಬಹುದು; ಆದರೆ ಇವಳು (ಕೊಲೆಗಡಕಿಯಾಗಿ ಗರ್ಭ-ಶಿಶುಹತ್ಯೆ ಮಾಡದಿದ್ದರೆ) ಶಿಶು ಸಮೇತಳಾಗಿ ಜಗತ್ತಿಗೆ ಮುಖ ತೋರಿಸಬೇಕಾಗಿ ಬರುವುದರಿಂದ ಮತ್ತು ಸಾಮಾನ್ಯವಾಗಿ ಸ್ತ್ರೀಯೊಬ್ಬಳ (ಅದರಲ್ಲೂ ಸ್ವಲ್ಪ ಕರುಣಾಜನಕ ಸ್ಥಿತಿಯಲ್ಲಿದ್ದ ಸುಂದರಿಯಿದ್ದರೆ ಅವಳ)ಬಗ್ಗೆ ಗಂಡಸರಲ್ಲಿ ಸುಭಗರೆನಿಸಿಕೊಳ್ಳಬೇಕೆಂಬ ಸ್ಪರ್ಧಾಲುತ್ವದಿಂದ ಪಕ್ಷಪಾತವೇ ಹೆಚ್ಚು- ಅಪರಾಧಿಯಾಡ ಗಂಡನ್ನು ಕಡಿದು ಚೆಲ್ಲುವವರೆಗೂ ಸರದಿ!

ಎರಡನೆಯದಾಗಿ ಪಾಶ್ಚಾತ್ಯರಲ್ಲಿ ಹುಡುಗಿ ಎಷ್ಟೋ ಸಲ ಹುಡುಗನಿಗಿಂತ ಹಿರಿಯಳಿದ್ದರೂ— ಜಗತ್ತಿನಲ್ಲಿ ಬಹುಪಕ್ಷ ಹುಡುಗಿ ಕಿರಿಯಳಿರುತ್ತಾಳೆ ಹಾಗಲ್ಲದಿದ್ದರೂ ಅವಳು Innocent— ಏನೂ ಅರಿಯದವಳು, ಅದ್ದರಿಂದ ಅವಳ ತಲೆಕೆಡಿಸಿದನಿವ— ಎಂಬ ಆರೋಪಕ್ಕೆ [ಸಾಮಾನ್ಯವಾಗಿ ಪ್ರಕಟವಾಗಿ ಜಗತ್ತಿನ ವ್ಯವಹಾರದಲ್ಲಿ ಪ್ರತಿದಿನವೂ ನುಗ್ಗುತ್ತಿದ್ದ ತಪ್ಪಿಗಾಗಿ (?)] ಗಂಡು ಗುರಿಯಾಗುತ್ತಾನೆ.

ಆದರೆ ಸಾನ್‌ಫ್ರಾನ್ಸಿಸ್ಕೋದ ಪ್ರಸಿದ್ಧ ಮನೋವಿಜ್ಞಾನಿಗಳಾದ ಡಾ. ನಾರ್ಮನ್ ರೀಡರರನ್ನು ಕೇಳಿದರೆ ಬೇರೆಯ ಕತೆಯೇ ಕಂಡುಬರುತ್ತದೆ. ತಾತ್ಕಾಲಿಕವಾಗಿ ಕಾಯದೆ ಕಣ್ಣಿಗೆ ಧೂಳೆರಚಿ ಗಂಡು ಗೆದ್ದಂತೆಯೂ ಹೆಣ್ಣು ಸಮಾಜದ ಅವಹೇಲನಕ್ಕೆ ಗುರಿಯಾಗಿ ಸೋತಂತೆಯೂ ತೋರಿದರೂ ತಪ್ಪನ್ನು ಗಂಡಿನಮೇಲೆಹೊರಿಸಿ ಹೆಣ್ಣು ಒಂದು ಸಮಾಧಾನವನ್ನು (ಆತ್ಮವಂಚನೆಯಿಂದಾದರೂ) ತಂದುಕೊಳ್ಳಬಲ್ಲಳು. ಕ್ರಮೇಣ ಪಶ್ಚಾತ್ತಾಪ ಹುಟ್ಟಿ ಗಂಡು ತಂದೆ ಎಂದು ಪ್ರಕಟವಾಗಿ ಹೇಳಿಕೊಳ್ಳಲಾರದೆ, ಪ್ರಿಯತಮೆಯನ್ನು ಬಿಟ್ಟ ತಪ್ಪಿಗೆ ನೊಂದುಕೊಂಡು ಆತ್ಮಹತ್ಯೆ ಮಾಡಿಕೊಳ್ಳಬಹುದು ಇಲ್ಲವೆ ಹುಚ್ಚನಾಗಿ ಹೋಗುವುದೂ ಉಂಟು. ಒಂದು ವೇಳೆ ಅವರಿಬ್ಬರ ಮನಸ್ಸೂ ಅವರ ಹಿರಿಯರ ಮನಸ್ಸೂ ಒಂದಾಗಿ ಮದುವೆಯಾದರೂ ಕೆಲ ಸಲ ನಿರ್ವಾಹವಿಲ್ಲದೆ ಮದುವೆಯಾದನೆಂದು 'ಅವಳು ಅವನನ್ನು ತಾತ್ಸಾರದಿಂದ ನೋಡುವಂತೆಯೂ ಅವನು ಇವಳ ಮುಖ ಸಮಾಜದ ಕೈಯಲ್ಲಿ ಸಿಕ್ಕಿ ಬಿದ್ದೆನೆಂದು ಕ್ರೋಧದಿಂದಲೂ ಅಸುಖಿಗಳಾಗಿ ಬಾಳಬೇಕಾಗುತ್ತದೆ.

ಇದಕ್ಕೆಲ್ಲ ಕೆಳಗಿನ ಪರಿಸ್ಥಿತಿಗಳೇ ಕಾರಣ:

(೧) ಖರ್ಚಿಗೆ ಕಡಿಮೆಯಾಗಿದ್ದು ವಿದ್ಯೆ ಮುಂದುವರಿಸಬೇಕಾಗಿರುವ ಪ್ರಾಯದ ಕಾಲೇಜು ಹುಡುಗ ಹುಡುಗಿಯರು.

(೨) ಕಡಿಮೆ ಸಂಬಳ ಪಡೆಯುತ್ತಿದ್ದು ಮದುವೆಯಾದರೆ ಸಂಸಾರ ಭಾರ ಹೊರಲಾರೆನೆಂಬ ಅಧೈರ್ಯವುಳ್ಳವರು.

(೩) ಆಕಸ್ಮಾತ್ ಸಂದರ್ಭಗಳು.

ಅಕಸ್ಮಾತ್ತಿಗೊಂದು ಉದಾಹರಣೆ: ಒಮ್ಮೆ ಒಬ್ಬಾಕೆ ತನ್ನವರ ಮನೆಗೆ ಹೋಗಲು ರಸ್ತೆಯಲ್ಲಿದ್ದ ಒಬ್ಬನ ಹತ್ತಿರ ಮಾರ್ಗದರ್ಶನ ಮಾಡಿಕೊಡ ಹೇಳಿದಳು. ಕಾಮದೇವನ ಕೃಪೆ ಅರ್ಧಕ್ಷಣಾರ್ಧದಲ್ಲಿ ಅವರಿಗುಂಟಾಗಿ ಅವರಿಬ್ಬರೂ ಜಗತ್ತೂ ಆಶ್ಚರ್ಯಪಡುವಂತಾಯಿತು.

ಇಂಥ ಸನ್ನಿವೇಶಗಳಿಗೆ ಗುಣಪಡಿಸುವ ಕಾಯದೆ ಮಾಡುವುದಕ್ಕಿಂತ ಪ್ರತಿಬಂಧಕೋಪಾಯವಾಗಿ ತರುಣ-ತರುಣಿಯರಿಗೆ ಲಿಂಗವಿಜ್ಞಾನವನ್ನು ಸೂಕ್ತ ಕಾಲದಲ್ಲಿ, ಸೂಕ್ತ ರೀತಿಯಲ್ಲಿ ಸೂಕ್ತ ವ್ಯಕ್ತಿಗಳು ಉಪದೇಶಿಸುವುದೇ ಮದ್ದೆಂದು ಮನಃಶಾಸ್ತ್ರಜ್ಞರ ಮತ. ಇದರಿಂದ ಇಂತಹ ಸಂದರ್ಭಗಳು ಕಡಿಮೆಯಾಗುವುದಷ್ಟೇ ಅಲ್ಲ; ವೈಜ್ಞಾನಿಕವಾಗಿಅವಶ್ಯಕ ಜ್ಞಾನವನ್ನು ಯುಕ್ತವಾಗಿ ಕೊಡುವುದರಿಂದ ಅರ್ಧ ನಾಗರಿಕ— ಅನಾಗರಿಕ ಪದ್ಧತಿಗಳಿಂದ ಅನೇಕ ಹಿಂದೀಯರು ಸ್ವಪರ ದುಃಖ ಕಾರಣರಾಗಿ ಬಾಳುವುದನ್ನು ತಪ್ಪಿಸಿ ವಿವಾಹ ಜೀವನವನ್ನು ಆರೋಗ್ಯ ದೃಢ ಪ್ರೀತಿಬಂಧ ಪೂರ್ಣವಾದುದನ್ನಾಗಿ ಮಾಡಬಹುದು. ಅಜ್ಞಾನ, ಅರ್ಧಜ್ಞಾನ, ಕುಜ್ಞಾನಗಳಿಂದ ಹಾಳಾದಷ್ಟು ಯುವ-ಯುವತಿಯರು (ಪರಸ್ಪರ ಸಂಬಂಧದಲ್ಲಿ) ಮತ್ತಾವುದರಿಂದಲೂ ಹಾಳಾಗಿಲ್ಲವೆಂದು ಧಾರಾಳವಾಗಿ ಹೇಳಬಹುದು. ಆದುದರಿಂದ ಕುಮಾರಪಿತತ್ವ, ಕುಮಾರೀ ಮಾತೃತ್ವ ಸಂಭವಿಸದಂತೆಯೂ ಹುಡುಗ ಹುಡುಗಿಯರು ನಾಗರಿಕ ಜೀವನ ನಡೆಸಲು ಅನುವಾಗುವಂತೆಯೂ ಅವರಿಗೂ ಇಂದಿನ ಚಿಕ್ಕಮಕ್ಕಳ ತಂದೆ ತಾಯಂದಿರಿಗೂ ಯುಕ್ತೋಪದೇಶದ ವ್ಯವಸ್ಥೆ ಮಾಡುವುದು ಅಗತ್ಯವಲ್ಲವೆ?

ಸಂಭಾಷಣಕಲೆ

ಹಿಂದೆ ಇಂಗ್ಲೆಂಡಿನಲ್ಲಿ ಡಾ. ಜಾನ್ಸನ್ ಎಂಬೊಬ್ಬ ವಾಕ್ಯವಿಶಾರದನಿದ್ದನು. ಅವನ ಮಾತನ್ನು ಕೇಳಲು ಸ್ತ್ರೀಪುರುಷ ಆಬಲವೃದ್ಧರೆಲ್ಲ ಆತುರಪಡುತ್ತಿದ್ದರು. ಆದರೆ ಸಂಭಾಷಣೆಯೆಂಬುದೊಂದು ಕಲೆಯೆಂದು ಬಹಳ ಜನ ತಿಳಿದುಕೊಂಡಂತಿಲ್ಲ. ಅದರಿಂದಲೇ ಎಷ್ಟೋಸಲ ಅತ್ಯಂತ ಆಪ್ತರು, ಮಿತ್ರರು, ಬಂಧುಗಳು ಮಾತಾಡಲು ಕುಳಿತಿರುವಾಗಲೂ ವಿರಸಪ್ರಸಂಗಗಳುಂಟಾಗುತ್ತವೆ. ಇದು ಮಾನವನ ನಾಗರಿಕತೆಗೆ ಭೂಷಣವಲ್ಲ. ಸಂಭಾಷಣೆಯ ದೋಷಗಳನ್ನು ಪ್ರತಿಯೊಬ್ಬನೂ ತಿದ್ದಿಕೊಂಡರೆ ಸಹಜೀವಿಗಳಲ್ಲಿ ಪರಸ್ಪರ ಪ್ರೇಮಾದರ ಬೆಳೆದು ಜೀವನವು ಉಲ್ಲಾಸಮಯವಾಗುತ್ತದೆ. ಈ ದೃಷ್ಟಿಯಿಂದ ಕೆಳಗೆ ಕೆಲವು ನಿಯಮಗಳನ್ನು ಕೊಟ್ಟಿದೆ:

೧ ವೈಯಕ್ತಿಕ ಮಾತುಗಳನ್ನು ಬಿಡು. ನಿನ್ನ ಗಂಡನ (ಹೆಂಡತಿಯ) ಗುಣ ನಡತೆಯನ್ನು ವಿಮರ್ಶಿಸುವುದು, ಗೃಹಚ್ಛಿದ್ರ ಪ್ರಕಟನ ಇವು ತಾಜ್ಯ.

೨ ನೀನೊಬ್ಬನೇ ಕಡೆತನಕ ಮಾತಾಡುತ್ತಿರಬೇಡ. ಮಾತಿನಲ್ಲಿ ಕೊಡುಕೊಳು ಇರಬೇಕು

೩ ಅಲ್ಲಗಳೆಯಬೇಡ— ಎದುರಿನಾತ ಅಂದದ್ದೆಲ್ಲ ಖಂಡನೀಯವೆಂದು ಖಂಡಿತೋಕ್ತಿಯಿಂದ ಹೇಳಬೇಡ; ಇದ್ದರೂ ಇರಬಹುದೆಂದು ಹೇಳುವುದು ರೂಢಿ. ಯಾವಾಗಲೂ ಒಪ್ಪುವ ಸಂಗತಿಗಳನ್ನೇ ಆಡಬೇಕು,ಆಡಿದ್ದರಲ್ಲಿ ತೆಗೆದುಕೊಳ್ಳಬೇಕು.

೪ ನಡುವೆ ಬಾಯಿಹಾಕಬೇಡ-ಎದುರಿನಾತನ ಮಾತಿನ ಮಧ್ಯೆ ಬೇರೆ ಮಾತನಾಡಕೂಡದು. ಒಂದು ಕೂಟದಲ್ಲಿ ೬ ಕ್ಕಿಂತ ಹೆಚ್ಚು ಜನರಿದ್ದರೆ ಒಕ್ಕೂಟದಿಂದ ಮಾತಾಡಲಸಾಧ್ಯ; ವಿಘ್ನ, ವಿರೋಧ, ವಿಕಥಾರೆಗಳಿಂದವಿರಸ ಹುಟ್ಟುತ್ತದೆ.

೫ ಒಮ್ಮಿಂದೊಮ್ಮೆ ಬೇರೆ ವಿಷಯವನ್ನೆತ್ತಬೇಡ. ಒಂದು ವಿಷಯ ಮುಗಿದಬಳಿಕ ಅದರ ಸವಿ ಸವಿಯಲು ಒಂದೆರಡು ನಿಮಿಷಗಳ ಮೌನವಿದ್ದರೆ ಬಹಳ ಹಿತಕರ ವೆನಿಸುವುದು; ಇಲ್ಲದಿದ್ದರೆ ರುಚಿ ಕೆಡಬಹುದು.

೬ ಅವನು ಹೇಳುತ್ತಿರುವುದರಲ್ಲಿ ಆಸಕ್ತಿ ವಹಿಸಿದಿದ್ದಲ್ಲಿ ಮಾತು ಕಳೆಗೆಡುವುದು. ಆದುದರಿಂದ ವಿಮುಖ ಕುಳಿತ [illegible] ಆಸಕ್ತಿ [illegible] ಛಂಗಿ ತೋರುವುದು ತಪ್ಪತಕ್ಕ [illegible] ಕುಗಾರರಿಗೆ ಪ್ರೋತ್ಸಾಹ [illegible] ರಣ ರಸವತ್ತಾಗುತ್ತದೆ.

೭ ಉಪಕಥೆಯಾದ [illegible] ಪತ್ತ ಗಮನ ಕೆಡಿಸು. [illegible] ಲ್ಲದೆ ಕೇಳುಗರು ಅಸಕ್ತಿಗೊಂಡು [illegible] ಸುತ್ತದೆ.

ನೀನು ಹೇಳಬೇಕೆಂದಿರುವುದನ್ನು [illegible] ಜವಾಬೀ ಚಪಲಾಪದಲ್ಲಿ [illegible] ಇತ್ಯಾದಿಗಳ ಅಭಾವ ಅತ್ಯಾವಶ್ಯಕ [illegible] ಅದರಿಂದ ಫಲವುಂಟಾದರೆ [illegible] ವನ್ನು ಹಗುರವಾಗಿ [illegible] 'ಬಹುದು' ಪದಪ್ರಯೋಗ [illegible]

೯ ವಿರಳವಾಗಿ ಮಾತಾಡು. [illegible] ಮತ್ತು ನಿಧಾನವಾಗಿ ಮಾತಾಡುವುದು ಪರಿ[illegible] ಕಾರಿಯಾಗುತ್ತದೆ.

೧೦ ನಿಂದಾತ್ಮಕ ಮಾತುಗಳನ್ನು [illegible] ಕೆಟ್ಟದ್ದನ್ನಾದರೂ ಪ್ರಹಾಸ್ಯ ಮಾಡಿ [illegible] ತ್ತಿರಬಾರದು. ಅದರಿಂದ ಜೀವನದಲ್ಲಿ ದೋ[illegible] ಕತ್ತ ಲಕ್ಷ್ಯ ಹೆಚ್ಚಾಗಿ ಗುಣಗ್ರಾಹಿತ್ವ [illegible] ದುತ್ತದೆ.

ಯುಕ್ತವಾದ, ಹಿತಕರವಾದ ಮಾತುಗಾರಿ[illegible] ಪೂರ್ವಭಾವಿಯಾದ ವಿಷಯವಿಚಾರ [illegible] ಶ್ಯಕ. ಬಂಡವಿಲ್ಲದೆ ವ್ಯಾಪಾರ [illegible] ಬಹಳಕಾಲ ನಡೆಸಲಾಗದು; [illegible] ಬೆಳಗಾದೊಡನೆ ತಿಳಿದುಹೋಗುತ್ತದೆ. ಮಾತ[illegible] ಬಂದವರು ತಾವು ಕಂಡ, ಕೇಳಿದ [illegible] ವಿಷಯಗಳ ಬಗ್ಗೆ ವಿಚಾರಮಾಡಬೇಕು. [illegible] ಮಾತು ತಾನೇ ತಾನಾಗಿ ಹೊರಡುತ್ತದೆ.

ಅಂಗಡಿ, ಕಚೇರಿ ಇತ್ಯಾದಿ ವ್ಯಾಪಾರ ವ್ಯವ[illegible] ರದ ಮಾತು ಬಹಳವಾಗಕೂಡದು. ಅದ[illegible] ಬೇಸರ ಉಂಟಾಗುತ್ತದೆ. ಬೇರೆ ಬೇರೆ ವಿಷ[illegible] ಬಲ್ಲವರೊಡನೆ ಗೆಳೆತನಮಾಡಿದರೆ ಹೆಚ್ಚಿನ [illegible] ಯುಗಳ ಬಗ್ಗೆ ಜ್ಞಾನವನ್ನು ಸಂಪಾದಿಸಬ[illegible] ಒಂದೇಮಾತಿನಲ್ಲಿ ಹೇಳುವುದಾದರೆ, [illegible] ತೆಯೇ ಮಾತುಗಾರಿಕೆಯ ಮೂಲ ಎಂದು ಗೆ[illegible] ಬರ್ಗೆಸ್ ಎಂಬ ತಜ್ಞ ಬರೆಯುತ್ತಾನೆ. [illegible] ವಿದ್ಯಾರ್ಥಿನಿಯರು ಚಿಕ್ಕಂದಿನಿಂದಲೇ [illegible] ನಿಯಮಗಳನ್ನು ಸಾಧಿಸಿಕೊಂಡರೆ ಸಮಾಜ [illegible] ಹಾರದಲ್ಲಿ ಯಶಸ್ವಿಗಳಾಗದಿರರು, [illegible] ಳಾಗಿ ಸರ್ವಾದರಣೀಯರೆನಿಸದಿರರು.

ವಿವಿಧ ವ್ಯವಹಾರ ಪರರೊಡನೆ [illegible] ಮಾತಾಡುವುದರಿಂದ ಜಗತ್ತಿನ ವಿವಿಧ [illegible] ಗಳ ಪರಿಜ್ಞಾನ ಉಂಟಾಗಿ ರಸಿಕತೆ [illegible] ತ್ತದೆ, ಅನುಭವ ಆಳವಾಗುತ್ತದೆ. [illegible] ತನ್ನ ನಡೆನುಡಿಗಳನ್ನು ತಿದ್ದಿಕೊಳ್ಳಲೂ [illegible] ದೋಷಗಳನ್ನು ತಾಳ್ಮೆಯಿಂದ ನೋಡಲೂ [illegible] ತ್ತದೆ.

ಘಜನಿ ಮುಹಮ್ಮದನ ಚರಿತ್ರೆಯ ಮೇಲೆ ಬೆಳಕು

(೨ನೆಯ ಪುಟದಿಂದ ಮುಂದುವರಿದುದು)

ಕೆಯು ನಿಯುಕ್ತವಿರುತ್ತದೆ. ಕುರಾನವು ಅಸಂದಿಗ್ಧವಾಗಿ ಹೀಗೆ ಹೇಳುವದು: "ಧಾರ್ಮಿಕ ವಿಷಯದಲ್ಲಿ ಒತ್ತಾಯವಿರಕೂಡದು" (೨-೨೫೬).

ಒಬ್ಬನೇ ದೇವರೆನ್ನದೆ ಅನೇಕರು ವಿವಿಧ ದೇವತೆಗಳನ್ನು ಪೂಜಿಸಿದ್ದಾದರೆ ಆ ದೇವತೆಗಳ ಬಗ್ಗೆ ಕುರಾನವು ಕೆಳಗಿನಂತೆ ಹೇಳಿ ಮುಸಲ್ಮಾನರಿಗೆ ದಾರಿ ತೋರಿಸುತ್ತದೆ.

"ದೇವರು ಒಬ್ಬನೆನ್ನದೆ ಯಾರಾದರೂ ಅನ್ಯ ದೇವತೆಗಳನ್ನು ಪೂಜಿಸಿದರೆ ಆ ದೇವತೆಗಳ ಅಥವಾ ವಿಗ್ರಹಗಳ ನಿಂದೆ ಮಾಡಕೂಡದು." (೬-೧೦೯) ಹೀಗೆ ವಸ್ತುಗಳ ನಿಂದೆ ಕೂಡ ಮಾಡಬಾರದೆಂದು ವಿಧಿಸುವ ಕುರಾನವು ಇಂಥಹ ವಸ್ತುಗಳನ್ನು ಭಗ್ನಗೊಳಿಸಬೇಕೆಂದು ಎಂದಾದರೂ ಹೇಳಬಹುದೇ?

ಕುರಾನದ ಒಂದು ಸಾಲೂ ಸಹ ಇದಕ್ಕೆ ಹೊರತಾಗಿ ಉಪದೇಶಿಸಿದುದು ಸಿಕ್ಕಲಾರದು. ಕುರಾನವು ತನ್ನ ಅನುಯಾಯಿಗಳಿಗೆ ತನ್ನ ಧರ್ಮಪ್ರಸಾರವು ಕರ್ತವ್ಯವೆಂದು ಹೇಳುತ್ತಿದ್ದರೂ ಈ ಪ್ರಸಾರದ ಪದ್ಧತಿಯ ಬಗ್ಗೆ ಹೀಗೆ ಸುಸ್ಪಷ್ಟವಾಗಿ ವಿಧಿಸುತ್ತದೆ. "ಎಲ್ಲರನ್ನೂ ಧರ್ಮದವರಿಗೆ ಸದ್ಭಾವದಿಂದ ಮಧುರವಾದ ರೀತಿಯಲ್ಲಿ ತಿಳಿಸಿ ಹೇಳಿರಿ ಮತ್ತು ಅವರೊಡನೆ ವಾದಮಾಡಬೇಕಾದಾಗ ಒಳ್ಳೆ ಸಭ್ಯತೆಯಿಂದಲೇ" (೧೬-೧೨೫) ಪೈಗಂಬರರ ಇಡೀ ಜೀವನವೇ ಇಸ್ಲಾಂ ಧರ್ಮದ ತತ್ವವನ್ನು ಅರ್ಥಮಾಡಿಕೊಳ್ಳುವವರಿಗೆ ಮಾದರಿಯಾಗಿದೆ. ಅವರ ಮೊದಲಿನ ೧೩ ವರ್ಷಗಳು ಇಸ್ಲಾಂ ಧರ್ಮದ ಪ್ರಸಾರಕ್ಕಾಗಿ ಕಳೆದವು. ಪೈಗಂಬರರು ಮಕ್ಕಾದಲ್ಲಿದ್ದರು. ಆ ಕಾಲದಲ್ಲಿ ಸಾಧ್ಯವಾದಾಗೆಲ್ಲ ಕಾಬಾದ ಸೀಮೆಯಲ್ಲಿ ತಮ್ಮ ಪ್ರಾರ್ಥನೆ ಹೇಳುತ್ತಿದ್ದರು. ಆಗ ಕಾಬಾದ ತುಂಬೆಲ್ಲ ವಿಗ್ರಹಗಳೇ ಇದ್ದವು. ಪೈಗಂಬರರು ಮೂರ್ತಿ ಪೂಜೆಯ ವಿರುದ್ಧವಿದ್ದರು ಮತ್ತು ಅದರಂತೆ ಅವರು ಉಪದೇಶಿಸಿದರು; ಆದರೂ ಅವರು ಆ ೧೩ ವರ್ಷಗಳಲ್ಲಿ ಒಂದಾದರೂ ಮೂರ್ತಿಗೆ ಅವಮಾನಮಾಡಲಿಲ್ಲ ಅಥವಾ ಒಂದನ್ನಾದರೂ ಭಗ್ನಗೊಳಿಸಲಿಲ್ಲ. ಅಷ್ಟೇ ಅಲ್ಲ, ಒಬ್ಬ ಮುಸಲ್ಮಾನನಿಗೂ ಹಾಗೆ ಮಾಡಲು ಅಪ್ಪಣೆಕೊಡಲಿಲ್ಲ. ಈ ೧೩ ವರ್ಷಗಳ ನಂತರವೂ ಎಷ್ಟೋ ಕಾಲದವರೆಗೆ ಮಕ್ಕಾಕ್ಕೆ ಅವರು ಎರಡನೆಯ ಯಾತ್ರೆ ಮಾಡಿದಾಗ ಕಾಬಾದಲ್ಲಿ ೩೬೦ ಮೂರ್ತಿಗಳು ಹಾಗೇ ಇದ್ದವು. ಪೈಗಂಬರರಾಗಲೀ ಅವರ ೨ ಸಾವಿರ ಅನುಯಾಯಿಗಳಾಗಲೀ ಈ ಮೂರ್ತಿಗಳಿಗೆ ಯಾವದೇ ಪ್ರಕಾರದ ಅಪಮಾನ ಮಾಡಿರಲಿಲ್ಲ ಹಾಗೂ ಈ ಮೂರ್ತಿ ಪೂಜಕರ ಭಾವನೆಗೆ ಬಾಧೆಬರುವಂತೆ ವರ್ತಿಸಿರಲಿಲ್ಲ. ಪರಕೀಯರ ಬಗೆಗಿದ್ದ ಈ ಬಗೆಯ ಸದ್ಭಾವ ಮತ್ತು ಸಹನಶೀಲತೆಯೇ ಮುಂದಿನ ಕೆಲವೇ ವರ್ಷಗಳಲ್ಲಿ ಇಸ್ಲಾಮ ಧರ್ಮಕ್ಕೆ ಮಕ್ಕಾದಲ್ಲಿದ್ದವರನ್ನೆಲ್ಲ ಆಕರ್ಷಿಸಿತು. ಇಸ್ಲಾಂ ಧರ್ಮವು ಮೂರ್ತಿಗಳನ್ನು ಒಡೆಯಲು ಅನುಮತಿಸುವದೆಂಬುದರಲ್ಲಿ ಸಂಶಯವಿಲ್ಲ. ಪೈಗಂಬರರೇ ಕಾಬಾದಲ್ಲಿದ್ದ ಎಲ್ಲ ಮೂರ್ತಿಗಳನ್ನೂ ತೆಗೆಸಿ ಒಗೆಸಿಬಿಟ್ಟರು; ನಿಜ, ಆದರೆ ಹೀಗೆ ಮಾಡಿದ್ದು ಆ ಮೂರ್ತಿಗಳ ಪೂಜಕರು ಒಬ್ಬರೂ ಇಲ್ಲವೆಂದು ತಿಳಿದುಬಂದಾಗ ಮಾತ್ರ. ಇಸ್ಲಾಂ ಧರ್ಮಕ್ಕೆ ಬಂದು ಸೇರಿದವರೇ ಎಷ್ಟೋ ವರ್ಷಗಳವರೆಗೆ ಪೂಜಿಸುತ್ತ ಬಂದ ತಮ್ಮ ಮೂರ್ತಿಗಳನ್ನು ಆಮೇಲೆ ಬಿಸುಡಿದರು. ಪೈಗಂಬರರು ಧರ್ಮ ಪ್ರಸಾರಕರನ್ನು ಬೇರೆ ಕಡೆಗೆ ಕಳಿಸಿದಾಗ ಅವರಿಗೂ ಆಯಾ ಜನರ ಪೂಜ್ಯ ಮೂರ್ತಿಗಳ ಮಾನರಕ್ಷಣೆಯ ವಿಷಯಕ್ಕೆ ಇದೇ ಬಗೆಯ ಉಪದೇಶ ಕೊಟ್ಟಿದ್ದರು. ಇದರಂತೆ ಯಮನ ದೇಶಕ್ಕೆ ಇಸ್ಲಾಂ ಧರ್ಮ ಪ್ರಸಾರಕ್ಕೆ ಹೊರಡುವಾಗ ಅಬೂಮೂಸನೆಂಬವನಿಗೂ ಇದೇ ಬಗೆಯ ಉಪದೇಶಕೊಡಲಾಗಿತ್ತು. ಇನ್ನು ಇಂಥ ಉದಾಹರಣೆಗಳನ್ನು ನಾವು ಇಲ್ಲಿ ನೀಡುವ ಅವಶ್ಯಕತೆಯಿಲ್ಲ.

ಮುಹಮ್ಮದನಲ್ಲಿ ಇತರ ಎಷ್ಟೇ ಸದ್ಗುಣಗಳಿದ್ದರೂ ಇನ್ನೊಬ್ಬರ ಧಾರ್ಮಿಕ ವಿಷಯದಲ್ಲಿದ್ದ ಅವನ ಬಲಾತ್ಕಾರವು ಇಸ್ಲಾಂ ಧರ್ಮದ ಉಪದೇಶದ ದೃಷ್ಟಿಯಿಂದಾಗಲೀ ಸರ್ವ ಸಾಮಾನ್ಯ ನೈತಿಕ ನಿಯಮಗಳ ದೃಷ್ಟಿಯಿಂದೇ ಆಗಲಿ ಒಳ್ಳೆಯದೂ ಸಮಂಜಸವೂ ಅಲ್ಲ ಸಮರ್ಥನೀಯವೂ ಅಲ್ಲ. ಗಜನವಿ ಕುಲದ ವಿಖ್ಯಾತ ಸುಲ್ತಾನನಲ್ಲಿದ್ದ ಸದ್ಗುಣಗಳನ್ನಷ್ಟೇ ನಾವು ವಿಶೇಷವಾಗಿ ಗಮನಿಸತಕ್ಕದ್ದು. ಅವನು ಯಾವದೇ ದೇಶಕ್ಕೆ ಅಥವಾ ಕಾಲಕ್ಕೆ ಒಳಪಟ್ಟಿದ್ದರೂ ಪರವಿಲ್ಲ. ಅವನಲ್ಲಿದ್ದ [illegible] ದೋಷಗಳನ್ನು [illegible] ಹೊರಹಿಡಿದರೂ ನಮ್ಮ ಒಳಿತಾಗಿ ನಮ್ಮ [illegible] ಬಿಡುವದು ಯುಕ್ತವಾಗಿದೆ. ಆ ಉರ್ದು ಪತ್ರಿಕೆಯ ಸಂಪಾದಕರ ಮೇಲ್ಕಾಣಿಸಿದ ಪದ್ಯವನ್ನು ಮುದ್ರಿಸುವಾಗ ಪತ್ರಿಕಾ ಕರ್ತರ ಮೇಲಿದ್ದ ಹೊಣೆಗಾರಿಕೆಯನ್ನೂ ದೇಶದ ಈಗಿನ ವಾತಾವರಣವನ್ನೂ ಗಮನಿಸಿದಂತೆ ತೋರಲಿಲ್ಲ. ನಾವು ನಮ್ಮ ದೇಶದ ಜಟಿಲ ಸಮಸ್ಯೆಗಳನ್ನು ಸಮಾಧಾನಕರವಾಗಿ ಬಿಡಿಸಬೇಕಿದ್ದರೆ ತುಂಬ ಎಚ್ಚರಿಕೆಯಿಂದ, ಸಾರಾಸಾರ ವಿಚಾರದಿಂದ ಪರಸ್ಪರ ಭಾವನೆಗಳಿಗೆ ನೋವುಂಟಾಗದಂತೆ ವರ್ತಿಸುವದು ಅನಿವಾರ್ಯವಾಗಿದೆ.

ಹೊಸದಿಲ್ಲಿ
೨೯-೧೨-೪೭ } ಸುಂದರಲಾಲ

ತಪ್ಪೊಪ್ಪಿಗೆ

'ಘಜನಿ ಮಹಮ್ಮದ' ಎಂಬ ತಲೆಬರೆಹದ ಕೆಳಗೆ ಮೇಲೆ ಮುದ್ರಿಸಿದ ಲೇಖದಲ್ಲಿ ಅಲ್ಲಿಗಡ ಉರ್ದು ಪತ್ರಿಕೆಯೊಂದರಲ್ಲಿ ಬಂದ ಒಂದು ದ್ವಿಪದಿಯ ಬಗ್ಗೆ ಕೆಲ ಮಾತು ಹೇಳಿದ್ದೇವೆ. ಗಾಂಧೀಜಿಯ ಹೇಳಿಕೆಯಂತೆ, ಅಲ್ಲಿಗಡದ ಉಪಕುಲಪತಿಗಳಾದ ನವಾಬ ಮಹಮ್ಮದ ಇಸ್ಮಾಯಿಲ ಖಾನರ ಲಕ್ಷ್ಯವನ್ನು ಈ ದ್ವಿಪದಿಯತ್ತ ಸೆಳೆಯಲಾಗಿತ್ತು. ಈ ಬಗ್ಗೆ ನವಾಬ ಸಾಹೇಬರಿಂದ ಬಂದ ಉತ್ತರದ ಸೂಕ್ತ ಭಾಗವನ್ನಿತ್ತ ಇಲ್ಲಿ ಕೊಡಲಾಗಿದೆ. ಅವರು ಬರೆದಿದ್ದಾರೆ:—

"ಮಹಾತ್ಮಾಜಿಗೂ ತಮ್ಮಂತಹ ದೇಶನಿಷ್ಠರಿಗೂ ನೋವನ್ನುಂಟುಮಾಡುವಂತಹ ಪದ್ಯವು ನಮ್ಮ ಆ ಪತ್ರಿಕೆಯಲ್ಲಿ ಪ್ರಕಟವಾದುದಕ್ಕೆ ನನಗೆ ತುಂಬಾ ವಿಷಾದವಾಗುತ್ತಿದೆ. ದೇವರ ದಯದಿಂದ ಮುಂದೆ ನಾವು ಎಚ್ಚರ ವಹಿಸುತ್ತೇವೆ. ನನಗುಂಟಾದ ವಿಷಾದವನ್ನು ಗಾಂಧೀಜಿಗೆ ದಯವಿಟ್ಟು ಅರುಹಬೇಕು ಹಾಗೂ ನನ್ನ ಪರವಾಗಿ ಈ ಬಗೆಯ ವಿಚಾರವನ್ನು ನಾವು ಸ್ವಲ್ಪ ಕೂಡ ಸಮರ್ಥಿಸುವದಿಲ್ಲವೆಂದು ಅವರಿಗೆ ದಯಮಾಡಿ ಅಭಿವಚನಕೊಡಬೇಕು. ರಶೀದ ಅಹಮ್ಮದ ಸಿದ್ದಿಕಿ ಸಾಹೇಬರು ಸ್ವತಃ ಅತ್ಯಂತ ರಾಷ್ಟ್ರೀಯ ವೃತ್ತಿಯುವರೆಂಬುದನ್ನು ನೀವು ಬಲ್ಲಿರಿ. ಈ ಬಗೆಯ ಮಾತುಗಳನ್ನು ಅವರೆಂದೂ ಸಹಿಸಲಾರರು. ದೃಷ್ಟಿದೋಷದಿಂದ ಇಲ್ಲವೆ ಪ್ರಮಾದದಿಂದ ಬಹುತರವಾಗಿ ಈ ಪ್ರಮಾದ ಘಟಿಸಿರಬೇಕು."

ನವಾಬ ಮಹಮ್ಮದ ಸಾಹೇಬರ ಉತ್ತರದಿಂದ ಮಹಾತ್ಮಾಜಿಗೆ ಸಂತೋಷವಾಯಿತು. ದೃಷ್ಟಿದೋಷವಾಗಲೀ ಅಜ್ಞಾತ ಪ್ರಮಾದವಾಗಲೀ ಎಲ್ಲರಿಂದಲೂ ಘಟಿಸತಕ್ಕದ್ದೇ. ಅದರಲ್ಲಿಯೂ ಇಂದಿನ ವಾತಾವರಣದಲ್ಲಿ ಇದು ಸ್ವಾಭಾವಿಕ. ಅಲ್ಲಿಗಡ ಉರ್ದು ಪತ್ರಿಕೆಯು ಇನ್ನು ಹೆಚ್ಚಿನ ಎಚ್ಚರಿಕೆ ವಹಿಸಿ ದೇಶಕಲ್ಯಾಣವನ್ನೂ ಸೇವೆಯನ್ನೂ ಮಾಡಲು ಸಮರ್ಥವಾಗುವದೆಂದು ನಾವು ನಂಬಿದ್ದೇವೆ. ಇಂದಿನ ವಾತಾವರಣದಲ್ಲಿ ಈ ಬಗೆಯ ಪ್ರಮಾದಗಳು ಅಕ್ಷಮ್ಯವಾಗಿವೆ.

ಹೊಸದಿಲ್ಲಿ
೪-೧-೪೮ } ಸುಂದರಲಾಲ

(ಹರಿಜನದಿಂದ)

ಮುಂಬಯಿ ವಿದ್ಯಾಖಾತೆಯ ಪ್ರಗತಿ

ಮುಂಬಯಿ ಸರಕಾರವು ಸಾರ್ವಜನಿಕ ಶಿಕ್ಷಣದ ಸಲುವಾಗಿ ೧೯೪೫-೪೬ನೇ ವರ್ಷದಲ್ಲಿ ಒಟ್ಟು ೬,೨೪,೫೬,೨೪೪ ರೂ. ಗಳನ್ನು ವೆಚ್ಚ ಮಾಡಿರುವದಾಗಿ ಶಿಕ್ಷಣ ಖಾತೆಯ ವಾರ್ಷಿಕ ವರದಿಯಲ್ಲಿ ಕಾಣಿಸಿದೆ.

ಆ ವರ್ಷದಲ್ಲಿ ಶಿಕ್ಷಣ ಸಂಸ್ಥೆಗಳ ಸಂಖ್ಯೆಯು ೪೪೫ರಿಂದ ಹೆಚ್ಚಿ ೨೧,೫೯೪ಕ್ಕೆ ಮತ್ತು ವಿದ್ಯಾರ್ಥಿಗಳ ಸಂಖ್ಯೆಯು ೯೨,೯೪೬ರಿಂದ ಹೆಚ್ಚಿ ೧,೯೯೧,೪೨೫ಕ್ಕೆ ಮುಟ್ಟಿದ್ದಿತು. ಪ್ರಾಂತದಲ್ಲಿಯ ೨೧,೬೫೭ ಹಳ್ಳಿ ಮತ್ತು ಪಟ್ಟಣಗಳ ಪೈಕಿ ೧೨,೯೦೦ ಸ್ಥಳಗಳಲ್ಲಿ ಶಾಲೆಗಳಿವೆ. ಅಂದರೆ ಸರಾಸರಿ ೫.೯ ಚ. ಮೈಲು ಕ್ಷೇತ್ರಕ್ಕೆ ಒಂದು ಶಾಲೆ ಇದೆ. ಒಟ್ಟು ಗಂಡು ಜನಸಂಖ್ಯೆಯಲ್ಲಿ ಓದುತ್ತಲಿದ್ದ ವಿದ್ಯಾರ್ಥಿಗಳ ಪ್ರಮಾಣವು ಶೇಕಡ ೧೩.೨೨ ಇದ್ದಿತು. ಅದರ ಹಿಂದಿನ ವರ್ಷ ಈ ಪ್ರಮಾಣವು ಶೇಕಡ ೧೨.೫೫ ಇದ್ದಿತು. ಹೆಣ್ಣುಮಕ್ಕಳ ಜನಸಂಖ್ಯೆಯೊಡನೆ ತುಲನೆಮಾಡಿ ನೋಡಲಾಗಿ ಶೇಕಡ ೫.೪೯ ರಷ್ಟು ವಿದ್ಯಾರ್ಥಿನಿಯರು ಶಿಕ್ಷಣ ಹೊಂದಲಿದ್ದರೆಂದೂ ಅದರ ಹಿಂದಿನ ವರ್ಷ ಈ ಪ್ರಮಾಣವು ಶೇಕಡ ೫.೩೬ ಇದ್ದಿತೆಂದೂ ತಿಳಿಯುವದು.

ಸರಕಾರದಿಂದ ಮನ್ನಣೆ ಹೊಂದಿದ ಶಿಕ್ಷಣ ಸಂಸ್ಥೆಗಳಲ್ಲಿ ಆ ವರ್ಷ ವಿದ್ಯಾರ್ಥಿಗಳ ಸಂಖ್ಯೆಯು ೯೪,೪೭೪ರಿಂದ ಬೆಳೆದು, ೧,೯೬೪,೭೦೯ ಆಯಿತು.

ಸಾರ್ವಜನಿಕ ಶಿಕ್ಷಣದ ಸಂಬಂಧ ನೇರವಾಗಿ ತಟ್ಟಿದ ವೆಚ್ಚವು ೯೩.೦ ಲಕ್ಷ ರೂ. ಗಳಿಂದ ಹೆಚ್ಚಿ ೬೩೭.೭ ಲಕ್ಷ ರೂ. ಗಳಿಗೇರಿತು. ಅಪ್ರತ್ಯಕ್ಷ ರೀತಿಯಿಂದ ತಟ್ಟಿದ ವೆಚ್ಚವು ೧೪.೧೬ ಲಕ್ಷ ರೂ. ಗಳಿಂದ ೯೧.೨ ಲಕ್ಷ ರೂ. ಆಯಿತು. ಒಟ್ಟು ತಗಲಿದ ವೆಚ್ಚವು ೬,೨೪,೫೬,೨೪೪ ರೂ.

ಮೆಟ್ರಿಕ್ಯುಲೇಶನ್ ಪರೀಕ್ಷೆಗೆ ಕುಳಿತ ೨೪,೩೧೨ ಉಮೇದವಾರರಲ್ಲಿ ೧೩,೬೯೬ ಉಮೇದವಾರರು, ಇಂಟರಮೀಡಿಯೇಟ (ಸೈನ್ಸ ಮತ್ತು ಆರ್ಟ್ಸ) ಪರೀಕ್ಷೆಗಳಿಗೆ ಕುಳಿತ ೭,೯೬೬ ಉಮೇದವಾರರಲ್ಲಿ ೪,೦೯೧ ಉಮೇದವಾರರು ತೇರ್ಗಡೆ ಹೊಂದಿದರು. ಅಕ್ಟೋಬರ ೧೯೪೫ ಮತ್ತು ಎಪ್ರೀಲ ೧೯೪೬ರಲ್ಲಿ ನಡೆದ ಬಿ. ಎ. ಹಾಗೂ ಬಿ. ಎಸ್. ಸಿ. ಪರೀಕ್ಷೆಗಳಲ್ಲಿ ೨,೨೩೪ ವಿದ್ಯಾರ್ಥಿಗಳು ತೇರ್ಗಡೆ ಹೊಂದಿದರು. ಅದರ ಹಿಂದಿನ ವರ್ಷ ಪಾಸಾದವರ ಸಂಖ್ಯೆಯು ೨,೦೯೫ ಇದ್ದಿತು. ಡಾಕ್ಟರಿ, ವಕೀಲಿ ಮುಂತಾದ ವೃತ್ತಿ-ವಿಶೇಷ ಪರೀಕ್ಷೆಗಳಲ್ಲಿ ೧,೨೯೭ ಉಮೇದವಾರರು ಉತ್ತೀರ್ಣರಾದರು. ವೈಯಕ್ತಿಕ ಕಾಲೇಜುಗಳನ್ನು ಬಿಡು ವಿಶ್ವವಿದ್ಯಾಲಯಕ್ಕಾಗಿ ಟೆಕ್ನಾಲಜಿ ಸಂಸ್ಥೆ ಮತ್ತು ಅರ್ಥ ಮತ್ತು ಸಮಾಜ ಶಾಸ್ತ್ರದ ಶಾಲೆ ಸಹಿತ ೨೯ ಲಕ್ಷ ರೂ. ಗಿಂತ ಹೆಚ್ಚು ವೆಚ್ಚವಾಗಿದೆ.

ಆರ್ಟ್ಸ ಮತ್ತು ಸೈನ್ಸಿನ ೨೮ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ೨೦,೮೮೯ ಇದ್ದಿತು. ಇದರಲ್ಲಿ ೪,೧೧೮ ವಿದ್ಯಾರ್ಥಿನಿಯರಿದ್ದರು. ಅದರ ಹಿಂದಿನ ವರ್ಷ ವಿದ್ಯಾರ್ಥಿನಿಯರ ಸಂಖ್ಯೆಯು ೩,೮೬೦ ಇದ್ದಿತು. ಯಾವತ್ತು ಆರ್ಟ್ಸ ಕಾಲೇಜುಗಳ ಸಲುವಾಗಿ ಒಟ್ಟು ೪೬.೭ ಲಕ್ಷ ರೂ. ವೆಚ್ಚ ಬಂದಿದೆ.

ವೃತ್ತಿ ಶಿಕ್ಷಣದಲ್ಲಿ ೧೯ ಕಾಲೇಜುಗಳಲ್ಲಿದ್ದ ೬,೮೬೯ ವಿದ್ಯಾರ್ಥಿಗಳಲ್ಲಿ ೧,೫೯೭ ವಿದ್ಯಾರ್ಥಿಗಳು ವಕೀಲಿ, ೧,೩೫೯ ವಿದ್ಯಾರ್ಥಿಗಳು ಡಾಕ್ಟರಿ, ೪೭೯ ವಿದ್ಯಾರ್ಥಿಗಳು ಎಂಜಿನಿಯರಿಂಗ, ೪೩೯ ವಿದ್ಯಾರ್ಥಿಗಳು ಒಕ್ಕಲತನ, ೨೯೪೦ ವಿದ್ಯಾರ್ಥಿಗಳು ವಾಣಿಜ್ಯ, ೧೬೯ ವಿದ್ಯಾರ್ಥಿಗಳು ರಾಸಾಯನಿಕ ವಿಜ್ಞಾನ (ಕೆಮಿಕಲ್ ಟೆಕ್ನಾಲಜಿ), ೨೧೩ ವಿದ್ಯಾರ್ಥಿಗಳು ಶಿಕ್ಷಕ ವೃತ್ತಿ ಮತ್ತು ೩೯ ವಿದ್ಯಾರ್ಥಿಗಳು ಪಶುಚಿಕಿತ್ಸೆ (ವೆಟರ್ನರಿ) ವಿಷಯಗಳಲ್ಲಿ ಓದುತ್ತಿದ್ದರು.

ಮುಂಬಯಿಯಲ್ಲಿರುವ ಜೆ. ಜೆ. ಕಲಾ ಶಾಲೆ (ಸ್ಕೂಲ ಆಫ್ ಆರ್ಟ್ಸ) ಯಲ್ಲಿ ೭೬೯ ವಿದ್ಯಾರ್ಥಿಗಳಿದ್ದರು. ಅದರಲ್ಲಿ ೧೪೭ ವಿದ್ಯಾರ್ಥಿಗಳು ರೇ ಆರ್ಟ ವರ್ಕಶಾಪ್‌ದಲ್ಲಿ ಕಲಿಯುತ್ತಿದ್ದರು. ಅಹಮದಾಬಾದದಲ್ಲಿರುವ ಡ್ರಾಯಿಂಗ್ ಮತ್ತು ಡಿಝಾಯಿನ ಶಾಲೆಯಲ್ಲಿ ೪೮ ಮತ್ತು ಧಾರವಾಡದ ಕಲಾ ಶಾಲೆಯಲ್ಲಿ ೨೯ ವಿದ್ಯಾರ್ಥಿಗಳಿದ್ದರು.

ತಾಂತ್ರಿಕ ಶಿಕ್ಷಣ

ತಾಂತ್ರಿಕ ಮತ್ತು ಔದ್ಯೋಗಿಕ ಶಾಲೆಗಳು ಹಾಗು ವಿದ್ಯಾರ್ಥಿಗಳ ಸಂಖ್ಯೆಯು ಅನುಕ್ರಮವಾಗಿ ೧೦೬ ಮತ್ತು ೭,೬೮೫ ಇದ್ದವುಗಳಿಗಾಗಿ ಮತ್ತು ೧೩.೦೨ ಲಕ್ಷರೂ. ವೆಚ್ಚವಾದವು.

ಹಾಯಸ್ಕೂಲ ಮತ್ತು ಮಿಡಲ್ (ಮಾಧ್ಯಮಿಕ) ಸ್ಕೂಲಗಳ ವಿವರಗಳು ಇಂತಿವೆ:—

	ಶಾಲೆಗಳು	ವಿದ್ಯಾರ್ಥಿಗಳು
ಹೈಸ್ಕೂಲುಗಳು		
ವಿದ್ಯಾರ್ಥಿಗಳಿಗೆ	೪೧೭	೧,೮೮,೫೬೦
ವಿದ್ಯಾರ್ಥಿನಿಯರಿಗೆ	೧೨೬	೩೧,೭೫೫
ಮಿಡ್ಲ ಸ್ಕೂಲ		
ವಿದ್ಯಾರ್ಥಿಗಳಿಗೆ	೫೦೨	೩೭,೩೬೮
ವಿದ್ಯಾರ್ಥಿನಿಯರಿಗೆ	೭೨	೫,೮೩೧
ಒಟ್ಟು	೧,೧೦೦	೨,೬೩,೫೧೪

ಮಾಧ್ಯಮಿಕ ಶಾಲೆಗಳಿಗೆ ಒಟ್ಟು ೧೩೫.೯ ಲಕ್ಷ ರೂ. ವೆಚ್ಚ ಮಾಡಬೇಕಾಯಿತು.

ಆ ವರ್ಷ ಒಟ್ಟು ೧೮,೨೬೩ ಪ್ರಾಥಮಿಕ ಶಾಲೆಗಳೂ ಹಾಗೂ ಅವುಗಳಲ್ಲಿ ೧,೬೦೮,೨೩೮ ವಿದ್ಯಾರ್ಥಿಗಳೂ ಇದ್ದರು. ಅದರ ಹಿಂದಿನ ವರ್ಷದ ಸಂಖ್ಯೆಯೊಂದಿಗೆ ತುಲನೆ ಮಾಡಿದರೆ ಶಾಲೆಗಳ ಸಂಖ್ಯೆಯು ೨೬೩ ರಿಂದ ಕಡಿಮೆಯಾದದ್ದೂ ಮತ್ತು ವಿದ್ಯಾರ್ಥಿಗಳ ಸಂಖ್ಯೆಯು ೪೪,೦೪೩ ರಿಂದ ಬೆಳೆದದ್ದೂ ವ್ಯಕ್ತವಾಗುವದು. ವಿದ್ಯಾರ್ಥಿನಿಯರ ಸಂಖ್ಯೆಯು ೧೫೦೦೦ ದಿಂದ ಹೆಚ್ಚಾಗಿದೆ.

ಪ್ರಾಥಮಿಕ ಶಾಲೆಗಳ ವಿವರಗಳು ಇಂತಿವೆ.

	ಶಾಲೆಗಳು	ವಿದ್ಯಾರ್ಥಿಗಳು
ಸರಕಾರಿ	೩೬	೫,೨೨೨
ಜಿ. ಲೋ. ಬೋರ್ಡ	೧೦,೦೬೬	೮೨೧,೨೬೩
ಮುನಸಿಪಲ್	೧,೮೬೫	೪೪೫,೪೨೭
ಏಡೆಡ್ ಶಾಲೆಗಳು	೬,೧೨೩	೩೨೧,೧೩೫
ಖಾಸಗಿ	೧೬೨	೧೫,೧೮೧
ಒಟ್ಟು	೧೮,೨೬೩	೧,೬೦೮,೨೩೮

ಪ್ರಾಥಮಿಕ ಶಾಲೆಗಳ ಸಲುವಾಗಿ ಒಟ್ಟು ೩೧೬.೫ ಲಕ್ಷ ಗಿಂತ ಹೆಚ್ಚು ಹಣ ಬಳಸಲಾಗಿದೆ. ೧೯೪೪-೪೫ ನೇ ವರ್ಷದಲ್ಲಿ ಈ ವೆಚ್ಚವು ೨೭೬ ಲಕ್ಷ ರೂ. ಇದ್ದಿತು. ಈ ವೆಚ್ಚವನ್ನು ೧೭೧.೨ ಲಕ್ಷ ರೂ. ಸರಕಾರೀ ಹಣದಿಂದ ೨೦.೭ ಲಕ್ಷ ರೂ. ಲೋಕಲ್ ಬೋರ್ಡುಗಳಿಂದ ೮೩.೩ ಲಕ್ಷ ರೂ. ಮುನಿಸಿಪಾಲಟಿಗಳಿಂದ, ೨೨.೭ ಲಕ್ಷ ರೂ. ಮತ್ತು ಇತರ ಮಾರ್ಗಗಳಿಂದ ೧೮.೬ ಲಕ್ಷ ರೂ.ಗಳನ್ನು ಬಳಸಿ ವಹಿಸಲಾಯಿತು.

ಪ್ರೌಢ ಶಿಕ್ಷಣ

ಪ್ರೌಢರಿಗಾಗಿ ೧,೪೭೨ ಶಾಲೆ ಮತ್ತು ವರ್ಗಗಳಿದ್ದವು. ಅವುಗಳಲ್ಲಿ ೩೯,೨೮೭ ಪ್ರೌಢರು ಶಿಕ್ಷಣ ಪಡೆಯುತ್ತಿದ್ದರು.

ಗಂಡಸರಿಗೆ ಮತ್ತು ಹೆಂಗಸರಿಗೆ ಟ್ರೇನಿಂಗ (ತರಬೇತುಗೊಳಿಸುವ) ಸಂಸ್ಥೆಗಳು ಅನುಕ್ರಮವಾಗಿ ೩೪ ಮತ್ತು ೩೦ ಇದ್ದವು. ಇವುಗಳಲ್ಲಿ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರ ಸಂಖ್ಯೆಯು ಅನುಕ್ರಮವಾಗಿ ೩,೪೭೬ ಮತ್ತು ೧೭೦೯ ಇದ್ದಿತು. ಈ ೬೪ ಸಂಸ್ಥೆಗಳಲ್ಲಿ ೨,೪೮೭ ವಿದ್ಯಾರ್ಥಿಗಳುಳ್ಳ ೨೩ ಸಂಸ್ಥೆಗಳು ಸಾರ್ವಜನಿಕ ಮತ್ತು ೨,೬೯೮ ವಿದ್ಯಾರ್ಥಿಗಳುಳ್ಳ ೪೧ ಸಂಸ್ಥೆಗಳು ಖಾಸಗಿ ಆಡಳಿತಗಳಲ್ಲಿದ್ದವು.

ಎಳೆವಯಸ್ಸಿನ ಅಪರಾಧಿಗಳ ಸಲುವಾಗಿ ಯರೋಡಾ, ಮಾಟುಂಗಾ (ಮುಂಬಯಿ) ಮತ್ತು ಚೆಂಬೂರಿನಲ್ಲಿ ಮೂರು ಸರ್ಟಿಫೈಡ ಶಾಲೆಗಳಿವೆ. ಧಾರವಾಡದಲ್ಲಿ ಒಂದು ಬೋರ್ಸ್ಟಲ್ ಸ್ಕೂಲು ಇದೆ.

ರಾಷ್ಟ್ರಪತಿ ರಾಜೇಂದ್ರ ಬಾಬುಗಳಿಗೆ ಅಸ್ವಸ್ಥತೆಯಾದುದರಿಂದ ಇದೇ ೧೭ಕ್ಕೆ ಪ್ರಾರಂಭವಾಗಬೇಕಾಗಿದ್ದ ಅವರ ಮಹಾರಾಷ್ಟ್ರ ಸಂಚಾರವು ತಾತ್ಪೂರ್ತಿಕವಾಗಿ ಮುಂದುವರಿಸಲ್ಪಟ್ಟಿದೆ. ಉತ್ತರ ಭಾಗದಲ್ಲಿಯ ಬಹುದೇಶ ಅಹಮ್ಮದನಗರ ಮೊದಲಾದ ಜಿಲ್ಹೆಗಳ ಕಾರ್ಯಕ್ರಮ ರದ್ದುಗೊಳಿಸಿಲ್ಲ. ಅದು ೩೦ ಕ್ಕೆ ಪ್ರಾರಂಭವಾಗುವದು. ದಕ್ಷಿಣ ಭಾಗದ ಪ್ರವಾಸ ರದ್ದಾಗಿದ್ದರೂ ನಿಧಿ ಸಂಗ್ರಹದ ಕಾರ್ಯವನ್ನು ನಿಲ್ಲಿಸಬಾರದೆಂದು ಕಾರ್ಯದರ್ಶಿಗಳು ವಿನ್ನವಿಸುತ್ತಾರೆ.

ಸಂಪಾದಕೀಯ ಟೀಕಾಟಿಪ್ಪಣಿಗಳು

ಮಹತ್ವದ ನಿರ್ಣಯ

ಕರ್ನಾಟಕ ಪ್ರಾಂತೀಯ ಕಾಂಗ್ರೆಸ ಸಮಿತಿಯ ವಿಶೇಷ ಸಾಧಾರಣ ಸಭೆಯು ಇದೇ ೧೪ನೇ ತಾರೀಕು ಹುಬ್ಬಳ್ಳಿಯಲ್ಲಿ ಪ್ರಾಂತಾಧ್ಯಕ್ಷ ಶ್ರೀ ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಕೂಡಿತ್ತು. ಕರ್ನಾಟಕ ಪ್ರಾಂತ ನಿರ್ಮಾಣಕ್ಕಾಗಿ ಕೂಡಲೆ ಕೈಕೊಳ್ಳಬೇಕಾದ ಕ್ರಮವನ್ನು ನಿರ್ಣಯಿಸುವುದಕ್ಕಾಗಿ ಈ ಮಹತ್ವದ ಸಭೆಯನ್ನು ಕರೆಯಲಾಗಿತ್ತು. ಸದ್ಯದ ಪರಿಸ್ಥಿತಿ ವಿಶೇಷತಃ ಹಿಂದುಸ್ತಾನ ಸರಕಾರದ ಮುಖ್ಯ ಮಂತ್ರಿಗಳು ಪ್ರಾಂತೀಕರಣದ ಸಂಬಂಧದಲ್ಲಿ ಕೊಟ್ಟ ಹೇಳಿಕೆಯಿಂದ ಉದ್ಭೂತವಾದ ಪರಿಸ್ಥಿತಿಯನ್ನು ಕೂಲಂಕಷವಾಗಿ ಚರ್ಚಿಸಿ ಕೊನೆಗೆ ಎರಡು ಮಹತ್ವದ ಗೊತ್ತುವಳಿಗಳು ಸ್ವೀಕೃತವಾದವು. ಈ ಗೊತ್ತುಗಳನ್ನು ಬೇರೆ ಕಡೆಗೆ ಕೊಟ್ಟಿದ್ದೇವೆ. ಆಂಧ್ರದೊಡನೆಯೆ ಕರ್ನಾಟಕ ಪ್ರಾಂತ ರಚಿಸಬೇಕೆಂದು ಕೇಳಿಕೊಳ್ಳುವುದಕ್ಕಾಗಿ ಒಕ್ಕೂಟ ಸರಕಾರ, ಕಾಂಗ್ರೆಸ ವರಿಷ್ಠರು ಮತ್ತು ಘಟನಾ ಸಮಿತಿಯ ಮುಂದೆ ಪ್ರಾಂತಾಧ್ಯಕ್ಷರು ಒಂದು ಶಿಷ್ಟಮಂಡಳ ತೆಗೆದುಕೊಂಡು ಹೋಗಬೇಕು ಅವರಿಂದ ಆಶಾಸನ ದೊರೆಯದೆ ಹೋದರೆ ಘಟನಾ ಸಮಿತಿ ಮೊದಲಾದವುಗಳಿಂದ ಕರ್ನಾಟಕದ ಪ್ರತಿನಿಧಿಗಳು ಹೊರಬೀಳಬೇಕಾಗುವುದೆಂದು ಹೇಳಬೇಕೆಂಬುದು ಮುಖ್ಯ ನಿರ್ಣಯವಾಗಿತ್ತು. ಇದರಲ್ಲಿ ಕಾಲಾವಧಿ ಕೊಟ್ಟಿಲ್ಲ, ರಾಜೀನಾಮೆಗೆ ಪ್ರಥಮ ಸ್ಥಾನವಿರಬೇಕು ನಂತರ ಶಿಷ್ಟಮಂಡಳ ಒಯ್ಯಬೇಕು ಮೊದಲಾಗಿ ಕೆಲವರು ವಾದಿಸಿ ಉಪಸೂಚನೆಯನ್ನು ತಂದಿದ್ದರು. ಆದರೆ ಸದ್ಯದ ಪ್ರಸಂಗದಲ್ಲಿ ಹೀಗೆ ದುಡುಕುವುದು ಸರಿಯಲ್ಲ, ಸೌಮ್ಯ ಉಪಾಯಗಳಿಂದಲೆ ಧ್ಯೇಯವನ್ನು ಸಾಧಿಸಿಕೊಳ್ಳುವುದು ವಿಹಿತವೆಂದು ಭಾವಿಸಿ ಪ್ರಾಂತೀಯ ಸದಸ್ಯರು ಮೂಲ ನಿರ್ಣಯವನ್ನೇ ಸ್ವೀಕರಿಸಿದರು. ಇದು ಸಮಂಜಸ ಮತ್ತು ಮುತ್ಸದ್ದಿತನದ್ದೆಂದು ಹೇಳಬೇಕಾಗುವುದು. ಇದರಿಂದ ಸ್ವತಂತ್ರ ಪ್ರಾಂತ ಕೂಡಲೆ ನಿರ್ಮಿತವಾಗುವದಕ್ಕೆ ಅನಾಸ್ಥೆಯಾಗಲಿ, ರಾಜೀನಾಮೆ ಕೊಡುವುದಕ್ಕೆ ಅಸಮ್ಮತಿಯಾಗಲಿ ವ್ಯಕ್ತವಾಗುವುದಿಲ್ಲ. ತದ್ವಿರುದ್ಧವಾಗಿ ಇದಕ್ಕೆಲ್ಲ ಪ್ರಾಂತೀಯ ಕಾಂಗ್ರೆಸ್ಸು ಸದಾ ಸಿದ್ಧವೆಂಬುದು ಸ್ಪಷ್ಟವಾಗುವುದು. ಆದರೆ ಹಿಂದುಸ್ತಾನ ಸರಕಾರವೀಗ ಕಾಶ್ಮೀರ, ಹೈದರಾಬಾದ ಮೊದಲಾದ ಮಹತ್ವದ ಪ್ರಶ್ನೆಗಳನ್ನು ಬಿಡಿಸಬೇಕಾಗಿರುವುದರಿಂದ ಪ್ರಾಂತೀಕರಣದ ಬಗ್ಗೆ ರಾಜೀನಾಮೆ ಮೊದಲಾದ ಮಾರ್ಗವನ್ನವಲಂಬಿಸಿ ಅವರಿಗೆ ಮತ್ತಷ್ಟು ತೊಂದರೆಯುಂಟು ಮಾಡುವದು ಸರಿಯಲ್ಲೆಂದು ಕೆಲವರು ವಾದಿಸಿದ್ದು ಅತ್ಯಂತಸಮಂಜಸವಾದುದು ಆಂಧ್ರ ಪ್ರಾಂತದೊಡನೆಯೆ ಕರ್ನಾಟಕ, ಮಹಾರಾಷ್ಟ್ರ, ಕೇರಳ ಪ್ರಾಂತಗಳನ್ನೂ ರಚಿಸಿಬಿಟ್ಟರೆ ಎಲ್ಲವೂ ಸರಳವಾಗುವುದೆಂಬುದನ್ನು ನೆನೆದು ಹಿಂದುಸ್ತಾನ ಸರಕಾರದವರು ಆ ಕ್ರಮವನ್ನು ಕೈಕೊಳ್ಳಬೇಕಾಗಿ ಸೂಚಿಸದಿರಲಾರೆವು ಯಾವದೇ ಕಾರಣದಿಂದ ಸದ್ಯಕ್ಕೆ ಭಾಷಾನ್ವಯ ಪ್ರಾಂತರಚನೆ ಶಕ್ಯವಿಲ್ಲದಿದ್ದರೆ ಆ ವಿಷಯವನ್ನೆ ಮುಂದಕ್ಕೆ ಹಾಕಬೇಕಲ್ಲದೆ ಆಂಧ್ರರಿಗೊಬ್ಬರಿಗೇ ಸ್ವತಂತ್ರ ಪ್ರಾಂತ ಕೊಟ್ಟು ಉಳಿದವರ ನ್ಯಾಯ್ಯವಾದ ಬೇಡಿಕೆಯನ್ನು ಅಲಕ್ಷಿಸುವದು ಮುತ್ಸದ್ದಿತನದ್ದಾಗದು; ಇಷ್ಟೇ ಅಲ್ಲ, ಉಳಿದ ಪ್ರಾಂತಗಳಿಗೆ ಅನ್ಯಾಯವನ್ನೂ ಮಾಡಿದಂತಾಗುವುದೆಂಬುದು ಸುಸ್ಪಷ್ಟವಾಗಿದೆ.

ಏಕತಂತ್ರ ಕರ್ನಾಟಕ

ಈ ಕರ್ನಾಟಕ ಸ್ವತಂತ್ರ ಪ್ರಾಂತದಲ್ಲಿ ಮೈಸೂರನ್ನೊಳಗೊಂಡು ಎಲ್ಲ ಕನ್ನಡ ಸಂಸ್ಥಾನಗಳೂ ಸೇರಬೇಕಾದುದು ನ್ಯಾಯ್ಯವು ಮತ್ತು ಆವಶ್ಯಕವು ಆಗಿದೆ. ಇಡೀ ಕನ್ನಡನಾಡು ಒಂದಾಗದಿದ್ದರೆ ಅದರ ಪೂರ್ಣ ಬೆಳವಣಿಗೆಗೆ ತಡೆಯುಂಟಾಗುವುದು. ಉಳಿದ ಸಣ್ಣ ಸಣ್ಣ ಸಂಸ್ಥಾನಗಳು ಈಗ ಒಕ್ಕೂಟ ಹಿಂದುಸ್ತಾನದಲ್ಲಿ ಲೀನವಾಗಲು ಸಿದ್ಧವಾಗಿದ್ದರಿಂದ ಅವನ್ನು ಸಹಜವಾಗಿ ಕರ್ನಾಟಕ ಪ್ರಾಂತದಲ್ಲಿ ಸೇರಿಸಿಕೊಳ್ಳಬಹುದಾಗಿದೆ. ಇಡೀ ಮೈಸೂರು ಸಂಸ್ಥಾನ ಮತ್ತು ಹೈದರಾಬಾದ ಸಂಸ್ಥಾನದಲ್ಲಿಯ ಕನ್ನಡ ಭಾಗ ಇವುಗಳನ್ನು ಸ್ವತಂತ್ರ ಕರ್ನಾಟಕ ಪ್ರಾಂತದಲ್ಲಿ ಸೇರ್ಪಡೆ ಮಾಡಿಕೊಳ್ಳುವದು ಸಮಸ್ಯೆಯಾಗಿದೆ. ಈ ಬಗ್ಗೆ ವಿಶೇಷ ಪ್ರಯತ್ನಪಟ್ಟು ಉದ್ದೇಶ ಸಾಧ್ಯ ಮಾಡಿಕೊಳ್ಳಬೇಕಾಗಿದೆ. ಬೆಂಗಳೂರಿನಲ್ಲಿ ಇದೇ ಅನೇ ತಾರೀಕಿನಿಂದ ಮೂರುದಿನ ಕರ್ನಾಟಕದ ಧುರೀಣರು ಮೈಸೂರು ಮಹಾಜನಗಳನ್ನು ಭೆಟ್ಟಿಯಾಗಿ ವಿಚಾರವಿನಿಮಯ ಮಾಡಿದ್ದುಂಟು. ಪ್ರಾಂತೀಯ ಕಾಂಗ್ರೆಸ ಸಮಿತಿಯು ಈ ಸಂಬಂಧದಲ್ಲಿಗೊತ್ತುವಳಿಯನ್ನು ಸ್ವೀಕರಿಸಿ ಮುನ್ನಡೆಯಿಟ್ಟದ್ದು ಅಭಿನಂದನೀಯವಾಗಿದೆ. ಇದಕ್ಕಾಗಿ ಒಂದು ಸಂಧಾನ ಸಮಿತಿಯನ್ನು ನೇಮಿಸಲು ಪ್ರಾಂತಾಧ್ಯಕ್ಷರಿಗೆ ಅಧಿಕಾರ ಕೊಡಲಾಯಿತು. ಈ ಸಮಿತಿ ಪೂರ್ಣ ವಿಚಾರ ಮಾಡಿ ವರದಿಯನ್ನೊಪ್ಪಿಸಬೇಕೆಂದು ಗೊತ್ತಾಗಿದೆ. ಇದು ಬೇಗ ಕಾರ್ಯಪ್ರವೃತ್ತವಾಗಿ ಧ್ಯೇಯವನ್ನು ಸಾಧಿಸಿಕೊಳ್ಳುವಂತಾಗಲಿ.

ಮಹಾತ್ಮರ ಉಪವಾಸ

ಮಹಾತ್ಮಾ ಗಾಂಧಿಯವರು ಕಳೆದ ಮಂಗಳವಾರದಿಂದ ಉಪವಾಸವನ್ನು ಪ್ರಾರಂಭಿಸಿರುವರು. ಈ ಸಂಬಂಧದ ವಿವರಗಳನ್ನು ಬೇರೆ ಕಡೆಗೆ ಕೊಟ್ಟಿರುವವು ಮಹಾತ್ಮರ ಸದ್ಯದ ವಯಸ್ಸು ಆರೋಗ್ಯ ಮುಂತಾದವುಗಳನ್ನು ನೋಡಿದರೆ ಅವರು ಉಪವಾಸವನ್ನು ಪ್ರಾರಂಭಿಸಿದ್ದು ಅತ್ಯಂತ ದುರ್ದೈವದ ಸಂಗತಿಯೆಂದು ಹೇಳದಿರಲಾರೆವು. ಇಡೀ ದೇಶದಲ್ಲಿ ಈ ಬಗ್ಗೆ ಕಳವಳವುಂಟಾಗಿದೆ. ಅವರ ನಿಕಟವರ್ತಿಗಳೆಲ್ಲ ಸದ್ಯದ ಪರಿಸ್ಥಿತಿಯಲ್ಲಿ ಉಪವಾಸ ಬೇಡ ಎಂದು ಎಷ್ಟೇ ಅಲ್ಪರಿದರೂ ಗಾಂಧೀಜಿ ಉಪೋಷಣದ ನಿರ್ಧಾರ ಮಾಡಿ ಅದನ್ನು ಪ್ರಾರಂಭಿಸಿರುವರು. ಹೊರಗಿನ ಒತ್ತಾಯವಿಲ್ಲದೆ ಹಿಂದು ಮುಸಲ್ಮಾನ ಶೀಖರಲ್ಲಿ ಹೃದಯಸಮ್ಮಿಳನವಾದಾಗಲೆ ಉಪವಾಸ ಬಿಡುವದಾಗಿ ಅವರು ಸಾರಿರುವರು. ಇಡೀ ದೇಶದಲ್ಲಿ, ಇದು ಕೂಡಲೆ ಶಕ್ಯವಾಗದಿದ್ದರೂ ದಿಲ್ಲಿಯಲ್ಲಾದರೂ ಈ ಹೃದಯಸಮ್ಮಿಳನ ಕೂಡಲೆ ಆಗತಕ್ಕದ್ದೆಂದು ಅವರು ಹೇಳಿರುವರು. ಹಿಂದುಸ್ತಾನ ಒಡೆದು ಇಬ್ಭಾಗವಾದಂದಿನಿಂದ ದೇಶದಲ್ಲಿ ಅತ್ಯಾಚಾರಗಳು ವಿಪರೀತ ನಡೆದಿವೆ. ವಿಶೇಷತಃ ನಿರ್ವಾಸಿತರ ಮೇಲೆ, ಹೆಂಗಸರು ಮತ್ತು ಮಕ್ಕಳ ಮೇಲೆ ನಡೆದ ಅನನ್ವಿತ ಅತ್ಯಾಚಾರಗಳು ಯಾವ ನಾಗರಿಕ ರಾಷ್ಟ್ರಕ್ಕೂ ಭೂಷಣಪ್ರದವಾಗದಂತಹವು. ಆಯಾ ಜಾತೀಯ ಧುರೀಣರು ಸರಕಾರಗಳು ಮನಸಾ ಪ್ರಯತ್ನಿಸಿದರೆ ಮಾತ್ರ ಈ ಜಾತೀಯ ಐಕ್ಯ ಸಾಧ್ಯವಾಗಬಹುದು. ಕಾಯಾ ವಾಚಾ ಮನಸಾ ಯಾವ ಬಗೆಯಿಂದಲೂ ಜಾತೀಯತೆಗೆ ಎಳ್ಳಷ್ಟೂ ಪ್ರೋತ್ಸಾಹ ದೊರೆಯದಂತೆ ನೋಡಿಕೊಳ್ಳುವದು ಅವಶ್ಯವಾಗಿದೆ. ಈ ಬಗೆಯ ಪ್ರಯತ್ನದಿಂದಲೆ ಜಾತೀಯ ಐಕ್ಯ ಸಾಧ್ಯವಾಗಬಲ್ಲುದಲ್ಲದೆ ಮಹಾತ್ಮರಂಥವರ ಉಪವಾಸದಿಂದ ಅದು ಸಾಧ್ಯವಾಗಲಾರದೆಂದು ಹಿಂದಿನ ಅನುಭವದಿಂದ ಹೇಳಬೇಕಾಗಿದೆ. ಮನುಷ್ಯತ್ವವನ್ನು ಬಿಟ್ಟುಗೊಟ್ಟು ಪಾಶವೀ ಕೃತ್ಯಕ್ಕೆಳಸಿದವರನ್ನು ಅದರಿಂದ ಮುಕ್ತ ಮಾಡಲು ಉಪವಾಸ ಸಮರ್ಥವಾಗಲಾರದೆಂಬದು ಅನುಭವ. ಅದರಲ್ಲಿಯೂ ಜಾತ್ಯಂಧರಾಗಿ ಕುಣಿಯುವವರನ್ನು ಆ ಪಾಶವೀಕೃತ್ಯದಿಂದ ಪರಾವೃತ್ತ ಮಾಡಲು ತಕ್ಕ ಉಪಾಯವಿದಲ್ಲ. ನಾವು ಮೇಲೆ ಹೇಳಿದಂತೆ ಜಾತೀಯ ಧುರೀಣರ ಮತ್ತು ಸರಕಾರಗಳ ಅತ್ಯಂತಿಕ ಪ್ರಯತ್ನವೇ ಹಾಗೆ ಮಾಡಲು ಶಕ್ತವಾಗಬಲ್ಲುದು. ಈ ಪರಿಸ್ಥಿತಿಯಲ್ಲಿ ಮಹಾತ್ಮರು ಉಪೋಷಣದ ನಿರ್ಧಾರವನ್ನು ಮಾಡದಿದ್ದರೆ ಒಳಿತಾಗುತಿತ್ತು; ಆದರೆ ಈಗ ಅವರು ಉಪವಾಸವನ್ನು ಕೈಕೊಂಡಿರುವರೆಂದ ಬಳಿಕ ಅದನ್ನು ಬಿಡಿಸುವ ಹೊಣೆ ಈಗ ಜನತೆಯ ಮೇಲೆ ಬಿದ್ದಿದೆ. ಇಡೀ ದೇಶದಲ್ಲಿ ಕನಿಷ್ಠ ದಿಲ್ಲಿಯಲ್ಲಿಯಾದರೂ ಜಾತೀಯ ದೊಂಬಿಗಳಿಗೆ ಎಳ್ಳಷ್ಟೂ ಅವಕಾಶ ಸಿಕ್ಕದೆಂದು ಕಾರ್ಯತಃ ಜನರು ಸಿದ್ಧಮಾಡಿಕೊಡಬೇಕು. ಅಂದರೇನೇ ಮಹಾತ್ಮರು ಉಪವಾಸದ ಪಾರಣೆ ಮಾಡಬಹುದು. ಸದ್ಯದ ಈ ಹತ್ಯಾಕಾಂಡವನ್ನು ನೋಡಿ ಬಾಳುವುದಕ್ಕಿಂತ ಸಾಯುವದೇ ಲೇಸೆಂದು ಮಹಾತ್ಮರು ಹಲವಾರು ಸಲ ಹೇಳಿದ್ದುಂಟು. ಆದರೆ ಈ ರೀತಿ ನಿರಾಶರಾಗಿ ದೇಹತ್ಯಾಗ ಮಾಡುವದಕ್ಕಿಂತ ಜೀವಂತ ಇದ್ದುಕೊಂಡೇ ಜನತೆಯನ್ನು ಸನ್ಮಾರ್ಗಕ್ಕೆ ಹಚ್ಚುವದು ಪುರುಷಾರ್ಥ, ಮಹಾತ್ಮರಂಥವರು ಮಾಡತಕ್ಕ ಕರ್ತವ್ಯ. ಇದನ್ನು ನೆನೆದು ಮಹಾತ್ಮರು ದೇಹತ್ಯಾಗದತ್ತ ಧಾವಿಸದೆ ಇನ್ನೂ ಅನೇಕ ವರ್ಷ ಬಾಳಿ ಜನತಾ ಸೇವೆಯನ್ನು ಮಾಡಿ ಅದನ್ನು ಸನ್ಮಾರ್ಗಕ್ಕೆ ಮುಟ್ಟಿಸುವ ಮಹತ್ಕಾರ್ಯವನ್ನು ಮಾಡಲಿ. ಪರಮಾತ್ಮನು ಆ ಬಗೆಯ ಧೈರ್ಯ, ಸ್ಥೈರ್ಯ, ಸಾಮರ್ಥ್ಯವನ್ನು ಕೊಟ್ಟು ಸದ್ಯದ ಉಪವಾಸದಿಂದ ಅವರನ್ನು ರಕ್ಷಿಸಲೆಂದು ಅನನ್ಯಭಾವದಿಂದ ಅವನನ್ನು ಪ್ರಾರ್ಥಿಸುತ್ತೇವೆ.

ಹೈದರಾಬಾದ ಎತ್ತ ಸಾಗಿದೆ ?

ಹೈದರಾಬಾದ ಸರಕಾರವು ಪಾಕಿಸ್ತಾನ ಸರಕಾರಕ್ಕೆ ೨೦ ಕೋಟಿ ರೂಪಾಯಿ ಸಾಲ ಕೊಟ್ಟು ಭಾರತದೊಡನೆ ಮಾಡಿಕೊಂಡಿದ್ದ ಸಂಧಾನವನ್ನು ಮುರಿದಿರುವದು. ಹೈದರಾಬಾದ ಹಿಂದುಸ್ತಾನ ಸರಕಾರದ ಗೂಡ ಯಥಾಸ್ಥಿತಿ ಒಪ್ಪಂದ ಮಾಡಿಕೊಂಡು ಪರರಾಷ್ಟ್ರ, ವಾಹನ ಸಂಪರ್ಕ ಮತ್ತು ಸಂರಕ್ಷಣೆಯ ಸಂಬಂಧದಲ್ಲಿ ಹಿಂದುಸ್ತಾನ ಸರಕಾರಕ್ಕೆ ಅಧೀನವಾಗಿದೆ. ಹೀಗಿರುವಾಗ ಅದು ಪಾಕಿಸ್ತಾನ ಸರಕಾರಕ್ಕೆ ಸಾಲ ಕೊಟ್ಟು ಮಹತ್ವದ ಕರಾರ ಭಂಗ ಮಾಡಿರುವದು. ಹೈದರಾಬಾದ ಯಥಾಸ್ಥಿತಿ ಒಪ್ಪಂದ ಮಾಡಿಕೊಂಡಾಗಿನಿಂದ ಅದನ್ನು ಪಾಲಿಸುತ್ತಿಲ್ಲವೆಂದು ಹಿಂದುಸ್ತಾನ ಸರಕಾರ ಒಂದೇ ಸವನೆ ದೂರುತ್ತದೆ. ಹೈದರಾಬಾದದ ಅರ್ಥಸಚಿವರು ಸಾಲ ಕೊಟ್ಟದ್ದನ್ನು ಒಪ್ಪಿಕೊಂಡು ಹಿಂದುಸ್ತಾನ ಮತ್ತು ಪಾಕಿಸ್ತಾನಗಳಲ್ಲಿ ಸದ್ಯದ ಬಿಕ್ಕಟ್ಟು ಪ್ರಾಪ್ತವಾಗುವ ಮೊದಲೆ ಈ ಸಾಲ ಕೊಡುವದು ಗೊತ್ತಾಗಿತ್ತೆಂದೂ ಇದರಲ್ಲಿ ಮಿತ್ರದ್ರೋಹವಾವುದೂ ಇರುವದಿಲ್ಲೆಂದೂ ಸಮರ್ಥಿಸಿಕೊಂಡಿದ್ದಾರೆ. ಆದರೆ ಈ ಸಮರ್ಥನೆಯು ಎಷ್ಟು ಜೊಳ್ಳು ಪೊಳ್ಳಾಗಿದೆಯೆಂಬುದು ವಿಚಾರ ಮಾಡುವವರಿಗೆ ಹೊಳೆಯದಿರದು. ಹಿಂದುಸ್ತಾನದಿಂದ ಪಾಕಿಸ್ತಾನ ಬೇರೆಯಾದಂದಿನಿಂದ ಅದು ಪರರಾಷ್ಟ್ರವಾಯಿತು. ಹಿಂದುಸ್ತಾನ ಮತ್ತು ಪಾಕಿಸ್ತಾನಗಳಲ್ಲಿ ಸದ್ಯದ ಬಿಕ್ಕಟ್ಟು ಪ್ರಾಪ್ತವಾಗಲಿ ಇಲ್ಲವೆ ಅವೆರಡೂ ಒಳ್ಳೆ ಮಿತ್ರಭಾವದಿಂದ ಇರಲಿ, ಪಾಕಿಸ್ತಾನದೊಡನೆ ಯಾವದೇ ಬಗೆಯ ಒಡಂಬಡಿಕೆ ಮಾಡಿಕೊಳ್ಳಬೇಕಾದರೆ ಹೈದರಾಬಾದ ಸರಕಾರ ಹಿಂದುಸ್ತಾನ ಸರಕಾರದ ಗೂಡ ಮೊದಲು ವಿಚಾರ ಮಾಡಬೇಕಾಗುವದು. ಏಕೆಂದರೆ ಯಥಾಸ್ಥಿತಿ ಒಪ್ಪಂದದ ಮುಖ್ಯ ಆಶಯ ಅಂತಿರುವುದು. ಸದ್ಯದ ಬಿಕ್ಕಟ್ಟು ಇರಲಿಲ್ಲ ಎಂಬ ನೆವ ಮುಂದೆ ಮಾಡಿ ಹೈದರಾಬಾದ ಸರಕಾರವು ಪಾರಾಗಲಾರದು. ಅಂತೆಯೆ ಹಿಂದುಸ್ತಾನ ಸರಕಾರವು ಹೈದರಾಬಾದದ ಈ ಕೃತಿಯನ್ನು ಮಿತ್ರದ್ರೋಹವೆಂದು ಬಗೆದು ಅದರ ಪ್ರತೀಕಾರಕ್ಕಾಗಿ ತಕ್ಕ ಕ್ರಮ ಕೈಕೊಳ್ಳಬೇಕೆಂದು ನಿರ್ಧರಿಸಿದೆಯೆಂದು ತಿಳಿಯುತ್ತದೆ ಈ ಬಗೆಯ ಕ್ರಮ ಕೈಕೊಳ್ಳುವ ಮೊದಲೆ ಹೈದರಾಬಾದ ಸರಕಾರ ಹಿಂದುಸ್ತಾನ ಸರಕಾರದ ವರಿಷ್ಠರನ್ನು ಕಂಡು ಎಲ್ಲವನ್ನು ಸರಿಪಡಿಸಿಕೊಳ್ಳುವದು ಕ್ರಮಪ್ರಾಪ್ತವಾಗಿದೆ. ಈ ಬಗೆಯ ಸಮಂಜಸ ಮಾರ್ಗವನ್ನು ಬಿಟ್ಟುಗೊಟ್ಟು ತಪ್ಪನ್ನೂ ಸಮರ್ಥಿಸಿಕೊಳ್ಳುವ ಹವ್ಯಾಸಕ್ಕೆ ಹೈದರಾಬಾದ ಸರಕಾರ ಬಿದ್ದರೆ ಆತ್ಮಘಾತ ಮಾಡಿಕೊಂಡಂತೆಯೆ ಆಗುವದು. ಇಡೀ ಸಂಸ್ಥಾನದ ಜನತೆಯ ಆಗುಹೋಗುಗಳೆಲ್ಲ ತನ್ನ ಧೋರಣವನ್ನೇ ಅವಲಂಬಿಸಿದೆಯೆಂಬದನ್ನು ನೆನೆದು ಹೈದರಾಬಾದ ಸರಕಾರವು ಕೂಡಲೆ ಹಿಂದುಸ್ತಾನ ಸರಕಾರದ ಧುರೀಣರನ್ನು ಕಂಡು ತಪ್ಪನ್ನೊಪ್ಪಿ ಯೋಗ್ಯ ಪರಿಮಾರ್ಜನೋಪಾಯಗಳನ್ನು ಕೈಕೊಳ್ಳಬೇಕೆಂದು ಒತ್ತಾಯ ಪಡಿಸುತ್ತೇವೆ.

ಪಾಕಿಸ್ತಾನದ ತಿರುಬೊಬ್ಬೆ

ಪಾಕಿಸ್ತಾನ ಸರಕಾರವು ಹಿಂದುಸ್ತಾನದ ಗೂಡ ಮಾಡಿಕೊಂಡ ಒಡಂಬಡಿಕೆಯನ್ನು ಪಾಲಿಸದೆ ಕಾಶ್ಮೀರ ಹೈದರಾಬಾದ ಮೊದಲಾದ ಸಮಸ್ಯೆಗಳಲ್ಲಿ ಕೈವಾಡ ನಡೆಸುತಿರುವಾಗ ಹಿಂದುಸ್ತಾನದ ಮೇಲೆ ಒಪ್ಪಂದ ಭಂಗದ ಆರೋಪ ಮಾಡುತಿರುವದು ಆಶ್ಚರ್ಯಕಾರಕವಾಗಿದೆ. ಹಿಂದುಸ್ತಾನದೊಡನೆ ಯಥಾಸ್ಥಿತಿ ಒಡಂಬಡಿಕೆ ಮಾಡಿಕೊಂಡ ಹೈದರಾಬಾದದಿಂದ ಪಾಕಿಸ್ತಾನ ೨೦ ಕೋಟಿ ರೂಪಾಯಿ ಸಾಲಪತ್ರಗಳನ್ನು ನಿಸಿಮಯವಾಗಿ ಪಡೆದು ಹೈದರಾಬಾದಕ್ಕೂ ಒಪ್ಪಂದ ಭಂಗಕ್ಕೆ ಪ್ರೋತ್ಸಾಹ ಇತ್ತಿತು. ಹೀಗಿದ್ದರೂ ಪಾಕಿಸ್ತಾನದ ಅರ್ಥಸಚಿವರಾದ ಗುಲಾಮ ಮಹಮ್ಮದರು ಹಿಂದುಸ್ತಾನದ ಮೇಲೆ ನಿರರ್ಥಕ ಆರೋಪ ಹೊರಿಸಿರುವರು. ವಿಭಜನೆಯ ಕಾಲಕ್ಕೆ ಒಪ್ಪಿಕೊಂಡ ೫೫ ಕೋಟಿ ರೂಪಾಯಿಗಳನ್ನು ಹಿಂದುಸ್ತಾನ ಸರಕಾರ ಕೊಡಕೂಡದೆಂದು ರಿಜರ್ವ ಬ್ಯಾಂಕಿಗೆ ವಿಧಿಸಿದ್ದೇ ಈ ಆರೋಪಕ್ಕೆ ಕಾರಣ. ಕಾಶ್ಮೀರ ಸಮಸ್ಯೆಯಲ್ಲಿ ಪಾಕಿಸ್ತಾನ ಸರಕಾರ ನಡೆಸಿದ ಕೈವಾಡಕ್ಕಾಗಿಯೆ ಹಿಂದುಸ್ತಾನ ಸರಕಾರ ಈ ಹಣ ಕೊಡುವದನ್ನು ತಡೆ ಹಿಡಿದದೆ; ಕಾಶ್ಮೀರ ಸಮಸ್ಯೆಗೂ ಇದಕ್ಕೂ ಏನೂ ಸಂಬಂಧವಿಲ್ಲೆಂದು ಹೇಳಿ ಈ ೫೫ ಕೋಟಿ ರೂಪಾಯಿಗಳಿಗೆ ಕಾಶ್ಮೀರ ಮಾರಿಕೊಳ್ಳುವುದಾಗಿ ಹಿಂದುಸ್ತಾನ ಸರಕಾರ ತಿಳಿದಿದ್ದರೆ ಶುದ್ಧ ತಪ್ಪು ಎಂದು ಅವರು ಅಭಿಪ್ರಾಯ ಪಟ್ಟಿರುವರು. ಕಾಶ್ಮೀರ ತಮ್ಮದೆಂದೇ ಭಾವಿಸಿ ಗುಲಾಮ ಮಹಮ್ಮದ ಸಾಹೇಬರು ಹೀಗೆ ಹೇಳಿರಲು ಸಾಕು. ಆದರೆ ವಸ್ತುಸ್ಥಿತಿ ಇದಕ್ಕೆ ತೀರ ವಿರುದ್ಧವಾಗಿದೆ. ಇವೆಲ್ಲ ಆರೋಪಗಳಿಗೆ ಹಿಂದುಸ್ತಾನ ಸರಕಾರದ ಉಪಮುಖ್ಯ ಮಂತ್ರಿಗಳೂ ಅರ್ಥಸಚಿವರೂ ಸಮರ್ಪಕ ಉತ್ತರ ಕೊಟ್ಟು ಅವನ್ನೆಲ್ಲ ಖಂಡಿಸಿದ್ದಾರೆ. ಲೆಕ್ಕದಂತೆ ೨೦—೨೫ ಕೋಟಿ ರೂಪಾಯಿ ಪಾಕಿಸ್ತಾನಕ್ಕೆ ಸಲ್ಲಬೇಕಾಗಿದ್ದರೂ ಹಿಂದುಸ್ತಾನ ಸರಕಾರವು ಔದಾರ್ಯದಿಂದ ೭೫ ಕೋಟಿ ರೂಪಾಯಿ ಕೊಡಮಾಡಿದ್ದರು. ಆದರೆ ಕಾಶ್ಮೀರ ಮೊದಲಾದ ಎಲ್ಲ ಪ್ರಶ್ನೆಗಳೂ ಸಮಾಧಾನಕರವಾಗಿ ಬಗೆಹರಿಯಬೇಕೆಂದು ಗೊತ್ತಾಗಿದ್ದಿತು. ಸರದಾರ ವಲ್ಲಭಭಾಯರು ಹಿಂಯೋಲಗದಲ್ಲಿ ಹಾಗೆ ಹೇಳಿದ್ದೂ ಉಂಟು. ಈ ಕರಾರುಗಳನ್ವಯ ರಿಝರ್ವ ಬ್ಯಾಂಕು ೨೦ ಕೋಟಿ ರೂಪಾಯಿಗಳನ್ನು ಈಗಾಗಲೆ ಪಾಕಿಸ್ತಾನ ಸರಕಾರಕ್ಕೆ ಕೊಟ್ಟು ಬಿಟ್ಟದೆ. ಉಳಿದ ರೂಪಾಯಿಗಳನ್ನೂ ಕೊಡಲು ಹಿಂದುಸ್ತಾನ ಸರಕಾರವೇನು ಹಿಂಜರಿಯುತಿರಲಿಲ್ಲ. ಆದರೆ ಮೇಲೆ ಹೇಳಿದಂತೆ ಪಾಕಿಸ್ತಾನ ಸರಕಾರ ಮನಬಂದಂತೆ ವರ್ತಿಸಹತ್ತಿದ್ದರಿಂದ ಈ ೫೫ ಕೋಟಿ ರೂಪಾಯಿ ತಡೆಹಿಡಿದಿದ್ದು ನ್ಯಾಯ್ಯವೇ ಆಗಿದೆ. ಪಾಕಿಸ್ತಾನವನ್ನು ಆರ್ಥಿಕ ವಿಪತ್ತಿನಲ್ಲಿ ದೂಡಬೇಕೆಂದು ರಿಝರ್ವ ಬ್ಯಾಂಕಿನ ಇಲ್ಲವೆ ಹಿಂದುಸ್ತಾನ ಸರಕಾರದ ಉದ್ದೇಶವಾಗಿದ್ದರೆ ಮೊದಲಿನ ೨೦ ಕೋಟಿ ರೂಪಾಯಿಗಳನ್ನಾಗಲಿ ಹಿಂದುಗಡೆ ಔದಾರ್ಯದಿಂದ ಕೊಟ್ಟ ೧೦ ಕೋಟಿ ತಾತ್ಪೂರ್ತಿಕ ಸಾಲವನ್ನಾಗಲಿ ಕೊಡುತಿರಲಿಲ್ಲ. ಪರಿಸ್ಥಿತಿ ಹೀಗಿರುವಾಗ ಪಾಕಿಸ್ತಾನ ಸರಕಾರದವರು ನಿರರ್ಥಕವಾಗಿ ಹಿಂದುಸ್ತಾನ ಸರಕಾರದ ವಿರುದ್ಧ ಬೊಬ್ಬೆಯಿಡುವದು ಸಮಂಜಸವಾಗಲಾರದು. ಹೀಗೆಲ್ಲ ಇದ್ದರೂ ಗಾಂಧೀಜಿಯ ಉದಾತ್ತ ಧ್ಯೇಯಕ್ಕೆ ಸಹಾಯವಾಗಲು ಹಿಂದುಸ್ತಾನ ಸರಕಾರ ಈ ೫೫ ಕೋಟಿ ರೂಪಾಯಿಗಳನ್ನೂ ಕೊಟ್ಟು ಬಿಡಲು ನಿರ್ಧರಿಸಿದೆಂದು ಮುಖ್ಯಮಂತ್ರಿಗಳು ಇದೀಗ ಸಾರಿದ್ದಾರೆ ಇನ್ನು ಮೇಲಾದರೂ ಪಾಕಿಸ್ತಾನ ಸರಕಾರ ಹಿಂದುಸ್ತಾನ ಸರಕಾರದ ಗೂಡ ಮಿತ್ರತ್ವದಿಂದ ಇರಲು ನಿರ್ಧರಿಸಿದರೆ ಅನೇಕ ಸಮಸ್ಯೆಗಳು ತಾವಾಗಿಯೇ ಬಗೆಹರಿದು ಹಿಂದುಸ್ತಾನ ಪಾಕಿಸ್ತಾನಗಳಲ್ಲಿ ಸುಖ-ಶಾಂತಿ-ಸಮೃದ್ಧಿ ನಲೆಯುವದ್ದಲ್ಲಿ ಸಂದೇಹವಿಲ್ಲ.

ಸೂಕ್ತ ಸಲಹೆ

ಕೂಲಿಕಾರರ ಕೆಲಸದ ನಿಯಮಗಳನ್ನು ಸುಧಾರಿಸಿ ಅವರ ಜೀವನವನ್ನು ಸುಖಕರ ಮಾಡಿ ದೇಶದಲ್ಲಿ ನೂಲು ಮತ್ತು ಬಟ್ಟೆಯ ಉತ್ಪಾದನೆಯನ್ನು ಹೆಚ್ಚಿಸಬೇಕೆಂದು ಹಿಂದುಸ್ತಾನ ಸರಕಾರದ ಕೂಲಿಕಾರ ಮಂತ್ರಿಗಳಾದ ಶ್ರೀ ಜಗಜೀವನರಾಮರು ಹೊಸದಿಲ್ಲಿಯಲ್ಲಿ ಜವಳಿ ಉದ್ದಿಮೆಯ ಔದ್ಯೋಗಿಕ ಸಮಿತಿಯ ಪ್ರಥಮ ಸಭೆಯಲ್ಲಿ ಭಾಷಣ ಮಾಡುತ್ತ ಹೇಳಿದರು. ಜೀವನಕ್ಕೆ ಅವಶ್ಯಕವಾದ ಸರಕು ಸಾಮುಗ್ರಿಗಳು ಎಲ್ಲರಿಗೆ ಸಾಕಷ್ಟು ಸಿಕ್ಕುವಂತೆ ಮಾಡುವದು ಬಡವರ ಕಲ್ಯಾಣದ ದೃಷ್ಟಿಯಿಂದ ಅತ್ಯಾವಶ್ಯಕವಾಗಿದೆ. ಜವಳಿ ಉತ್ಪಾದನೆ ಹೆಚ್ಚಬೇಕಾದರೆ ಒಡೆಯರು ಮತ್ತು ಕೂಲಿಕಾರರಲ್ಲಿ ಸ್ನೇಹಸಂಬಂಧ ಹೆಚ್ಚಿ ಸಹಕಾರ ಬೆಳೆಯಬೇಕು. ಹೀಗಾಗಬೇಕಾದರೆ ಕೂಲಿಕಾರರು ಒಡೆಯರಿಂದ ಸವಲತ್ತು ಸೌಕರ್ಯಗಳನ್ನು ಪಡೆಯುವಾಗಲೆ ಕಾರ್ಯಕ್ಷಮತೆಯತ್ತ ಹೆಚ್ಚು ಲಕ್ಷ್ಯ ಪೂರೈಸಬೇಕು. ಎಂದು ಮಂತ್ರಿಗಳು ಸಲಹೆ ಕೊಟ್ಟಿರುವರು. ಕೂಲಿಕಾರಧುರೀಣರ ಸದ್ಯದ ಧೋರಣವನ್ನು ನೋಡಿದರೆ ಕೇವಲ ಹಕ್ಕು ಬಾಧ್ಯತೆಗಳ ಕಡೆಗೆ ಕಯೇ ಅವರು ಹೆಚ್ಚು ಲಕ್ಷ್ಯಕೊಡುವರಲ್ಲದೆ ಅವರ ಕಾರ್ಯಕ್ಷಮತೆ ಹೆಚ್ಚಬೇಕು ತದ್ವಾರಾ ಉತ್ಪಾದನೆ ಹೆಚ್ಚಬೇಕೆಂಬುದರ ಕಡೆಗೆ ಕೂಲಿಕಾರರು ಹೆಚ್ಚು ಗಮನ ಕೊಡುವಂತೆ ನೋಡಿಕೊಳ್ಳುವದಿಲ್ಲ. ಇದರಿಂದ ಉತ್ಪಾದನೆ ಹೆಚ್ಚಲಿಕ್ಕೆ ವ್ಯತ್ಯಯವುಂಟಾಗುವದು. ಆದುದರಿಂದ ಕೂಲಿಕಾರ ಧುರೀಣರು ಕೂಲಿಕಾರರ ಕಾರ್ಯಕ್ಷಮತೆ ಹೆಚ್ಚುವಂತೆ ನೋಡಿಕೊಳ್ಳಬೇಕು. ಅದೇ ರೀತಿಯಾಗಿ ಒಡೆಯರಾದರೂ ಕೂಲಿಕಾರರೆಂದರೆ ಕೇವಲ ತಮ್ಮ ಗುಲಾಮರೆಂದು ತಿಳಿಯದೆ ಉತ್ಪಾದನೆಯಲ್ಲಿ ಅವರದೂ ಪಾಲು ಇದೆ ಎಂಬವಾಗಿ ಭಾವಿಸಿ ಅವರಿಗೆ ತಕ್ಕ ಸವಲತ್ತು ಸೌಕರ್ಯಗಳನ್ನೊದಗಿಸಬೇಕು.

ಅಂತರ್ರಾಷ್ಟ್ರೀಯ

ಅಮೇರಿಕದ ಯುದ್ಧ ಸಿದ್ಧತೆ

ಜಗತ್ತಿನ ಇತರ ರಾಷ್ಟ್ರಗಳು ೧೯೫೩ ಜನವರಿ ೧ ನೆಯ ತಾರೀಕಿನ ಹೊತ್ತಿಗೆ ಸಾಕಷ್ಟು ಅಣು ಬಾಂಬುಗಳನ್ನೂ, ಒಳ್ಳೆಯ ಪರಿಣಾಮಕಾರಿಗಳಾದ ಆಕಾಶ ಬಾಣಗಳನ್ನೂ ಸಂಗ್ರಹಿಸಿದ ಪರಿಸ್ಥಿತಿಯನ್ನು ಅಮೇರಿಕೆಯು ಎದುರಿಸಬೇಕಾದೀತೆಂದು ಟ್ರೂಮನ್ನರ ವೈಮಾನಿಕ ಧೋರಣ ಸಮಿತಿಯು ಸಾರಿದೆ. ಅದ್ದರಿಂದ ಇದನ್ನು ಎದುರಿಸಬೇಕಾದರೆ ವಿಮಾನ ಸಂರಕ್ಷಣ ಮತ್ತು ದೂರದ ಗುರಿ ಹೊಡೆಯುವ ಬಾಂಬುಗಳುಳ್ಳ ಒಂದು ಸುಸಜ್ಜಿತ ನೌಕಾಬಲನಿರ್ಮಾಣ ಅವಶ್ಯವೆಂದು ಅದು ವರದಿಮಾಡಿದೆ. ಇದರಿಂದ ಯಾವದಾದರೂ ರಾಷ್ಟ್ರವು ಅಮೇರಿಕದ ಮೇಲೆ ದಾಳಿಮಾಡಬಯಸಿದರೆ ಆ ರಾಷ್ಟ್ರದ ಕಾರಖಾನೆ, ಪಟ್ಟಣ ಮತ್ತು ಯುದ್ಧ ಸಾಮಗ್ರಿ ಈ ಎಲ್ಲವೂ ನಾಶವಾಗುವವೆಂದೂ ಅದು ಎಚ್ಚರಿಕೆ ಕೊಟ್ಟಿದೆ.

ಸಮಿತಿಯ ಅಭಿಪ್ರಾಯದ ಪ್ರಕಾರ ೫ ಸಾವಿರ ಮೈಲು ದೂರದ ಒಂದು ಚಿಕ್ಕ ಪಟ್ಟಣವನ್ನು ಸಹ ಗುರಿತಪ್ಪದೆ ಹೊಡೆವಂಥ ಆಕಾಶಬಾಣಗಳನ್ನು ೫ ವರುಷದಲ್ಲಿ ದೊಡ್ಡ ಪ್ರಮಾಣದಲ್ಲಿ ಉತ್ಪಾದಿಸಬಹುದಲ್ಲದೆ ೧೯೫೩ ರಷ್ಟರಲ್ಲಿ ಇತರ ಯಾವದಾದರೂ ರಾಷ್ಟ್ರವು ಇಂತಹ ಶಸ್ತ್ರಗಳನ್ನು ಸಂಗ್ರಹಿಸ ಬಹುದಾಗಿ ವಿಷಕ್ರಿಮಿ ಬಾಣವನ್ನು ತಡೆವ ವಸ್ತು ಪ್ರತಿಭಟಿಸುವ ಯೋಜನೆಗಳು ಸಿದ್ಧನಾಗಬಹುದು.

ಇದಕ್ಕಾಗಿ ಈ ವರ್ಷ ೧೧೯೫ ಕೋಟಿ ಡಾಲರುಗಳನ್ನು ಮತ್ತು ಮುಂದಿನ ವರ್ಷ ೧೩೨೦ ಕೋಟಿ ಡಾಲರುಗಳನ್ನು ವೆಚ್ಚ ಮಾಡಲಾಗುವದು.

ಮೇಲಿನ ಸುದ್ದಿಯಿಂದ ಅಮೇರಿಕವು ಜಗತ್ತನ್ನು ಬಲಾತ್ಕರಿಸಲು ಹೇಗೆ ಹಟತೊಟ್ಟಿದೆಯೆಂಬುದು ಸ್ಪಷ್ಟವಾಗುವುದು. ಅದು ಎಷ್ಟೇ ಬಲ ಸಂಗ್ರಹಿಸಲಿ ಹತ್ತು ರಾಷ್ಟ್ರಗಳು ಸೇರಿದಾಗ ಅದರ ಆಟ ನಡೆಯದೆಂಬುದನ್ನು ಅದು ಮರೆಯದಿರಲಿ.

“ಲಾರ್ಡ್ಸ” ಸಭೆಯ ಸುಧಾರಣೆ

ಬ್ರಿಟಿಶ “ಲಾರ್ಡ್ಸ” ಸಭೆಯಲ್ಲಿ ಸರಕಾರೀ ಪಕ್ಷದ ಕಾನ್ಸರವೇಟೀವ ಮತ್ತು ಪ್ರಾಗತಿಕರಿಗೆ ಪ್ರಾತಿನಿಧ್ಯ ಕೊಡುವ ವಿಷಯವನ್ನು ಚರ್ಚಿಸುವುದಕ್ಕಾಗಿ ದುಂಡುಮೇಜಿನ ಪರಿಷತ್ತನ್ನು ಕರೆಯುವುದು ನಿರ್ಧರಿಸಲ್ಪಟ್ಟಿದೆ. ಈ ಬಗ್ಗೆ ವಿರೋಧಿ ಮುಖಂಡರೊಡನೆ ಔಪಚಾರಿಕವಾಗಿ ಚರ್ಚೆ ನಡೆದಿಲ್ಲವಾದರೂ ಸರಕಾರವು ಸುಧಾರಣೆಯನ್ನೂ ಅದಕ್ಕೆ ತಕ್ಕ ಯೋಜನೆಯನ್ನೂ ರಚಿಸುತ್ತಿದೆ.

“ಲಾರ್ಡ್ಸ” ಸಭೆ (ಶಾಸನ ಸಭೆಯಲ್ಲಿಯ ಮೇಲ್ಮನೆ)ಯನ್ನು ವಿಸರ್ಜಿಸಿ ಬಿಡಬೇಕು ಎಂಬ ಅಭಿಪ್ರಾಯವನ್ನು ಬ್ರಿಟಿಶ ಸಾಮ್ಯವಾದಿ ಪಕ್ಷವು ಬದಲಿಸಿದೆ. “ಲಾರ್ಡ್ಸ” ಸಭೆಯ ಅನುವಂಶಿಕ ಸದಸ್ಯತ್ವವನ್ನು ಸುಧಾರಿಸಿದ ರೀತಿಯಲ್ಲಿ ಉಳಿಸಿಕೊಳ್ಳಲಾಗುವುದು. ಆದರೆ ಸದಸ್ಯರಾಗಲು ಕುಲವೊಂದೇ ಅರ್ಹತೆಯಲ್ಲ. ಹೊಸ “ಲಾರ್ಡ್ಸ” ಸಭೆಯಲ್ಲಿ ಸದಸ್ಯರಾಗತಕ್ಕವರೆಲ್ಲ ಸಮಾಜ ಸೇವಕರಾಗಿರಬೇಕು. ಈ ಸಭೆಯಲ್ಲಿ ಈಗಿದ್ದ ಸುಮಾರು ೮೦೦ ಲಾರ್ಡರ ಸಂಖ್ಯೆಯನ್ನು ೩೦೦ಕ್ಕೆ ಇಳಿಸಬಹುದೆಂದು ತಿಳಿಯುತ್ತದೆ. ಈ ವಿಷಯದಲ್ಲಿ ಸರಕಾರ ಮತ್ತು ವಿರೋಧಿ ಪಕ್ಷಗಳಲ್ಲಿ ಸಮಾಧಾನಕರವಾದ ಒಡಂಬಡಿಕೆಯಾದಲ್ಲಿ ಆ ಬಗ್ಗೆ ಮಸೂದೆಯೊಂದನ್ನು ಕಾಮನ್ಸ ಸಭೆಯಲ್ಲಿ ಮಂಡಿಸಲಾಗುವುದು. ಇದಕ್ಕೂ ಈಗ ಸಭೆಯ ಮುಂದಿರುವ ಪ್ರತಿಷೇಧಾಧಿಕಾರದ ಮಸೂದೆಗೂ ಸಂಬಂಧವೇ ಇಲ್ಲ. ಈ ಪ್ರತಿಷೇಧಾಧಿಕಾರದ ಮಸೂದೆಯನ್ನು ಲಾರ್ಡರು ಜನವರಿ ೨೦ ನೆಯ ತಾರೀಕಿನಲ್ಲಿ ಚರ್ಚಿಸುವರು.

● ಮೇಲಿನದು ಹಿಂದೀ ಶಾಸನ ಸಭೆಗಳಿಗೊಂದು ಮೇಲ್ಪಂಕ್ತಿಯಾದಂತಿದೆ. ಸಮಾಜ ಸೇವಕರು ಮಾತ್ರ ಚುನಾವಣೆಯಲ್ಲಿ ಹುರಿಯಾಳುಗಳಾಗಲು ಅರ್ಹರೆಂಬುದು ಅತ್ಯುತ್ತಮ ಮತ್ತು ನಾಗರಿಕ ಮಾರ್ಗ. ಭಾರತದ ಜನತೆ ಇತ್ತ ಗಮನಿಸಿ ಆತ್ಮಹಿತವನ್ನು ಸಾಧಿಸಿಕೊಳ್ಳುವುದೇ ?

ಆಂಗ್ಲ-ಯೆಹೂದಿಗಳಲ್ಲಿ ತುಮುಲ

ಜೆರೂಸಲೇಮಿನ ಮ್ಯೂಮಿಲಾನ ಮಸೀದೆಯ ಬಳಿ ಯೆಹೂದಿಗಳು ಬಾಂಬನ್ನು ಎಸೆದುದರಿಂದ ಎಂಟು ಜನ ಅರಬರು ಮೃತರಾದರು ಮತ್ತು ೪೫ ಜನರು ಗಾಯಗೊಂಡರು. ಈ ಸುದ್ದಿ ಕೇಳಿದ ಕೂಡಲೆ ಬ್ರಿಟಿಶ ಸೈನಿಕರು ಆ ಪ್ರದೇಶಕ್ಕೆ ಧಾವಿಸಿ ಯೆಹೂದಿ ಕ್ರಾಂತಿಕಾರರನ್ನು ತಡೆಗಟ್ಟಿದರು. ಕೂಡಲೆ ಅನಂತರ ತುಮುಲ ಸುರುವಾಯಿತು. ಮುಸಲ್ಮಾನರ ಗೋರಿಗಳ ಹಿಂದೆ ನಿಂತು ಅವರು ಗುಂಡು ಹಾರಿಸಿದರು.

● ಇದೇ ಪ್ರದೇಶದಲ್ಲಿ ಬಾಂಬೆಸೆದ ಯೆಹೂದಿ ಲಾರಿಯನ್ನು ಬ್ರಿಟಿಶ ಲಾರಿಗಳು ಓಡಿಸಿಕೊಂಡು ಹೋಗಿದ್ದವು. ಎರಡು ಲಾರಿಗಳಿಂದಲೂ ಗುಂಡು ಹಾರುತ್ತಿದ್ದವು. ಈ ಗುಂಡಿನ ಹೊಡೆತಕ್ಕೆ ಇಬ್ಬರು ಯೆಹೂದಿಗಳು ಸತ್ತರು. ಮತ್ತು ಒಬ್ಬ ಬ್ರಿಟಿಶ ಸಿಪಾಯಿಯು ಗಾಯಗೊಂಡನು. ಆ ಯೆಹೂದಿಗಳ ಲಾರಿಯು ಕೊನೆಗೆ ಒಂದು ತಂತಿ ಬೇಲಿಗೆ ಹಾಯ್ದು ಬಿದ್ದುದರಿಂದ ಇಬ್ಬರು ಯೆಹೂದಿಗಳು ಗಾಯಗೊಂಡರು. ಇನ್ನೊಬ್ಬನು ಓಡಿಹೋದನು. ಈ ಲಾರಿಯನ್ನು ಯೆಹೂದಿಗಳು ಕದ್ದಿದ್ದರಂತೆ. ಜಾಫಾ ಮಹಾದ್ವಾರದ ಬಳಿ ಯೆಹೂದಿ ಕ್ರಾಂತಿಕಾರರು ಮಾಡಿದ ದಾಳಿಯ ಪರಿಣಾಮವಾಗಿ ೧೦ ಜನ ಅರಬರಿಗೆ ಮರಣ ೪೧ ಜನರಿಗೆ ಗಾಯ ಸಂಭವಿಸಿತು.

● ಪಾಲಿಸ್ತಾನದ ವಿಮೋಚನೆಗಾಗಿ ೨ ಸೈನ್ಯ ಪಡೆಗಳು ಹೊರಟಿವೆಯೆಂದು ಸುದ್ದಿ.

● ಪಾಲಿಸ್ತಾನದ ವಿಭಜನೆಯ ನಿರ್ಣಯವನ್ನು ಕಾರ್ಯರೂಪಕ್ಕೆ ತರಲು ಭದ್ರತಾಮಂಡಳವು ಅವಶ್ಯವೆನಿಸಿದ ಎಲ್ಲ ಹೊಣೆಯನ್ನು ಹೊರಲು ಸಿದ್ಧವಿದೆಯೆಂದು ವಿಶ್ವಾಸವಿಡಬೇಕೆಂದೂ ಅವಶ್ಯವೆನಿಸಿದಾಗ ಅದು ತಾಮ್ರಪಟದಿಂದ ತನಗೆ ದೊರೆತ ಎಲ್ಲ ಅಧಿಕಾರವನ್ನು ಪ್ರಯೋಗಿಸಿ ಪಾಲಿಸ್ತಾನ ಸಮಿತಿಗೆ ಅದರ ಕೆಲಸವನ್ನು ಸಾಗಿಸಲು ಅನುಕೂಲ ಮಾಡಿಕೊಡುವದೆಂದೂ ಸಂ. ರಾ. ಸಂಘದ ಪ್ರಧಾನ ಕಾರ್ಯದರ್ಶಿಗಳು ಸಾರಿದ್ದಾಗಿ ತಿಳಿಯುತ್ತದೆ. ಇದು ಹೊಣೆಗಾರಿಕೆಯ ಮಾತೆಂಬುದನ್ನು ಯಾರೂ ಅಲ್ಲಗಳೆಯಲಾರರು.

ಅಲ್ಬೇನಿಯದ ವಿರುದ್ಧ ದೂರು

ಗ್ರೀಕ ಪ್ರದೇಶದ ಚಟುವಟಿಕೆಗಳಲ್ಲಿ ಅಲ್ಬೇನಿಯವು ತಲೆಹಾಕಿದೆಯೆಂದೂ ಅಲ್ಲಿಯ ಕೂಟಯೋಧರಿಗೆ ಅದು ಬೆಂಬಲವಾಗಿ ನಿಂತಿದೆಯೆಂದೂ ಸಂ. ರಾ. ಸಂಘದ ಪ್ರಧಾನ ಕಾರ್ಯದರ್ಶಿಯಾದ ಎಂ. ಟ್ರಿಗ್ರಿವ್ ಲೈಯವರು ಅಭಿಪ್ರಾಯಪಟ್ಟರು. “ಸಾಮಾನ್ಯ ಸಭೆಯ ಶಿಫಾರಸಿನ ಮೇರೆಗೆ ಪರಿಶೀಲನ ಕಾರ್ಯದಲ್ಲಿ ತೊಡಗಿರುವ ಸಮಿತಿಯು ಸಂಬಂಧಪಟ್ಟ ಪ್ರದೇಶಗಳಲ್ಲಿಯ ಪರಿಸ್ಥಿತಿಯನ್ನು ಕಂಡು ಹೌಹಾರಿದೆ” ಎಂದೂ ಹೇಳಿದರು. ವರದಿಯ ಪ್ರಕಾರ ಸಮಿತಿಯು ಪ್ರತಿಯೊಂದು ಸಂಗತಿಯನ್ನೂ ಕಾದು ನೋಡುತ್ತಿದೆಯೆಂದೂ ಗ್ರೀಕ್ ಕೂಟಯೋಧರು ಧನಧಾನ್ಯ ಶಸ್ತ್ರಾಸ್ತ್ರಗಳನ್ನು ಅಲ್ಬೇನಿಯದಿಂದ ಪಡೆಯುತ್ತಿದ್ದುದಕ್ಕೆ ಆಧಾರ ದೊರೆತಿವೆಯೆಂದೂ ಹೇಳಲಾಗಿದೆ. ಈ ಪ್ರಶ್ನೆಯನ್ನು ಸಮಯಬಿದ್ದರೆ ಸಾಮಾನ್ಯಸಭೆಯನ್ನು ವಿಶೇಷ ಸಂದರ್ಭವೆಂದು ಕೂಡಿಸಿ ಅದರಮುಂದಿಡಲೂ ಬಹುದೆಂದು ಪ್ರ. ಕಾರ್ಯದರ್ಶಿ ಅಭಿಪ್ರಾಯಪಡುತ್ತಾರೆ.

ಸಾಮಾನ್ಯ ಸಭೆಯಲ್ಲಿ ತೀರ್ಮಾನದಂತೆ ಪೋಲೆಂಡ್ ಮತ್ತು ರಶಿಯಗಳ ಪ್ರತಿನಿಧಿಗಳು ಸಮಿತಿಯೊಡನೆ ಸಹಕರಿಸಿದ್ದರೆ ಅದರ ಕಾರ್ಯ ಸಂಪೂರ್ಣವಾಗುತ್ತಿತ್ತೆಂದು ಅಭಿಪ್ರಾಯ ಪಡಲಾಗಿದೆ.

● ಕಮ್ಯುನಿಸ್ಟರ ಹಾವಳಿ ಹೆಚ್ಚಾಗಿದೆಯೆಂದು ಅವರ ವರ್ಚಸ್ಸನ್ನು ತಡೆಬಡಿಯಲು ಪಣತೊಟ್ಟ ಅಮೇರಿಕ ಮುಂತಾದ “ಪಾಶ್ಚಾತ್ಯ ಪ್ರಜಾಪ್ರಭುತ್ವ”ಗಳಿಗೆ ರಶಿಯದ ವಿರುದ್ಧ ದೂರುಹೇಳಲು ಇದೊಂದು ಅನುಕೂಲ ಸಂದರ್ಭ ಸಿಕ್ಕಂತಾಯಿತು. ಅಲ್ಬೇನಿಯ ಮುಂತಾದ ರಶಿಯದ ಗಡಿಯಲ್ಲಿಯ ರಾಷ್ಟ್ರಗಳಲ್ಲಿ ರಶಿಯದ ವರ್ಚಸ್ಸಿದೆಯೆಂದೂ ಅದರಿಂದ ಅಂತಹ ರಾಷ್ಟ್ರಗಳನ್ನು ಮುಕ್ತಗೊಳಿಸುವದೇ ಪರಮೋದ್ದೇಶವೆಂದೂ ಅಮೇರಿಕೆ ಮತ್ತು ಅದರ ಭಕ್ತರಾಷ್ಟ್ರಗಳ ವಿಚಾರ. ಇದಕ್ಕೆ ರಶಿಯದ ಪ್ರತಿಕ್ರಿಯೆ ಅಲ್ಬೇನಿಯದ ಮೂಲಕ ಏನೆಂಬುದನ್ನು ಕಾದು ನೋಡಬೇಕಾಗಿದೆ.

ಬ್ರಹ್ಮೀ ಕೃಷಿಕ್ರಾಂತಿ

ಒಕ್ಕಲುತನವನ್ನು ರಾಷ್ಟ್ರೀಕರಿಸುವುದರಲ್ಲಿ ಬ್ರಹ್ಮದೇಶವಿಂದು ಒಂದು ಕ್ರಾಂತಿಯನ್ನೇ ಮಾಡಿದೆಯೆನ್ನಬಹುದು. ಅದಕ್ಕಾಗಿಯೇ ಒಂದು ಹೊಸ ಕಾಯಿದೆಯನ್ನು ಪಾಸುಮಾಡಲಾಗಿದೆ. ಅದರ ಅನುಸಾರವಾಗಿ ವ್ಯಕ್ತಿಯ ಅಥವಾ ಗುಂಪಿನ ಒಡೆಯತನದಲ್ಲಿ ೫೦ ಎಕರೆಗಿಂತ ಹೆಚ್ಚಾಗಿರುವ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲು ಸರಕಾರಕ್ಕೆ ಅಧಿಕಾರ ಪ್ರಾಪ್ತವಾಗಿದೆ. ಹೀಗೆ ಭೂಮಿಯನ್ನು ಕಳೆದುಕೊಂಡ ಒಡೆಯರಿಗೆ ಸರಕಾರವು ಯೋಗ್ಯ ಬಾಪತಿ ಕೊಡುವ ವ್ಯವಸ್ಥೆ ಮಾಡುವದು. ಸ್ವತಃ ಸಾಗುಮಾಡುವ ರೈತರಿಗೆ ಈ ಕಾಯಿದೆಯ ಕಲಮುಗಳು (೫೦ ಎಕರೆ ಅಥವಾ ಕಡಿಮೆ ಇದ್ದರೆ) ಅನ್ವಯಿಸುವುದಿಲ್ಲ.

ಹಿಂದುಸ್ತಾನವಿಂದು ಜಮೀನುದಾರಿ ನಿರ್ಮೂಲನಕ್ಕಾಗಿ ಚಡಪಡಿಸುತ್ತಿದ್ದರೂ ಆ ದಿಶೆಯಲ್ಲಿ ಅದು ಹೇಳಿಕೊಳ್ಳುವಷ್ಟು ಮುನ್ನಡೆಯಿಟ್ಟಿಲ್ಲ. ಆದರೆ ರಾಜಕಾರಣವೇ ಅದಕ್ಕೆ ತಲೆಶೂಲೆ ಹಿಡಿಸಿದೆ. ಬ್ರಹ್ಮದೇಶ ನಿನ್ನೆ ಸ್ವತಂತ್ರವಾಯಿತು. ಇಂದು ಬೆಳಗ್ಗೆ ಅತಿ ಆಕಾಂಕ್ಷೆಗಳನ್ನು ಧ್ಯೇಯಧೋರಣಗಳನು ಅಮಲಿನಲ್ಲಿ ತರಲಾರಂಭಿಸಿತು. ಈ ಬಗ್ಗೆ ಬ್ರಹ್ಮದೇಶದ ಮುತ್ಸದ್ದಿಗಳು ಅಭಿನಂದನೀಯರೇ ಸರಿ.

● ಸಂಯುಕ್ತ ರಾಷ್ಟ್ರ ಸಂಘದ ಸದಸ್ಯತ್ವಕ್ಕೆ ಸ್ವತಂತ್ರ ಬ್ರಹ್ಮದೇಶವು ಬೇಗನೆ ಅರ್ಜಿಮಾಡಲಿದೆಯೆಂದು ಅಮೇರಿಕದಲ್ಲಿ ಬ್ರಹ್ಮದೇಶದ ಪ್ರಥಮ ರಾಯಭಾರಿಗಳಾದ ಯುಸಾನ್ಯೂನರು ಹೇಳಿದರು. ಬ್ರಹ್ಮದೇಶದ ವಿನಂತಿಯು ರಂಗೂನಿನಿಂದ ನೇರವಾಗಿ ಸಂ. ರಾ. ಸಂಘದ ಕಾರ್ಯದರ್ಶಿಗಳಾದ ಎಂ. ಟ್ರಿಗ್ರೀವಲೈಯವರಿಗೆ ಕಳುಹಲ್ಪಡುವುದು.

○ ○ ○

ಇಂಗ್ಲಂಡಿನಲ್ಲಿ ಹಿಂದೀ ಹೈಕಮಿಶನರಾದ ಶ್ರೀ ವಿ. ಕೆ. ಕೃಷ್ಣ ಮೆನನರ ಸತ್ಕಾರವನ್ನು ಹಿಂದೀ ಕೂಲಿಕಾರ ಸಂಘದ ಅಧ್ಯಕ್ಷ ಚೌಧರಿ ಅಕಬರ ಖಾನರು ಮೆನನ್ನರ ವಿಚಿತ್ರ ಸ್ವಭಾವವನ್ನು ಎತ್ತಿ ಹೇಳಿ ವಿರೋಧಿಸಿದರು. ಆ ಬಗ್ಗೆ ಸೇರಿದ್ದ ಹಿಂದೀ ಸಭೆ ಅದರಂತೆಯೇ ತೀರ್ಮಾನಿಸಿತು.

○ ○ ○ ○ ○

ಭಾರತ ಸರಕಾರದ ಪರವಾಗಿ ಕಾಶ್ಮೀರ ಸಮಸ್ಯೆಯ ಬಗ್ಗೆ ಭದ್ರತಾ ಮಂಡಲದಲ್ಲಿ ವಾದಿಸಲು ಸರ್. ಎನ್. ಗೋಪಾಲಸ್ವಾಮಿ ಅಯ್ಯಂಗಾರರು ಕಳುಹಲ್ಪಟ್ಟಿದ್ದಾರೆ.

○ ○ ○

ಸೇನಾಪತಿ ಸ್ಮಟ್ಸರು ದ. ಆಫ್ರಿಕದಿಂದ ಮುಸಲ್ಮಾನರನ್ನು ಹಿಂದಕ್ಕೆ ಕರೆಸಿಕೊಂಡರೆ ಪಾಕಿಸ್ತಾನಕ್ಕೆ ನೆರವಾಗುವುದಾಗಿ ಖಾಸಗಿಯಿಂದ ತಿಳಿಸಿದ ಸುದ್ದಿ ಬಂದಿದೆ.

○ ○ ○ ○ ○

ದೇಶಾಂತರ ಹೊಂದಿ ಸ್ವಿಜರ್ ಲ್ಯಾಂಡಿನಲ್ಲಿ ವಾಸಿಸುತ್ತಿದ್ದ ಬೆಲ್ಜಿಯಂ ಲಿಯೋ ಪೋಲ್ಡ ಅರಸರೊಡನೆ ಬೆಲ್ಜಿಯಮ್ಮಿನ ಮುಖ್ಯ ಮಂತ್ರಿ ಪಾಲಹೆನ್ರಿ ಸ್ಪಾಕರು ನೇರವಾಗಿ ಮಾತುಕತೆ ನಡೆಸಿ ೩ ವರ್ಷಗಳಿಂದ ತಲೆತಿನ್ನುತ್ತಿದ್ದ ಅರಸೊತ್ತಿಗೆಯ ಪ್ರಶ್ನೆಯನ್ನು ಬಗೆ ಹರಿಸಲು ಯತ್ನಿಸುವರೆಂದು ಅಧಿಕೃತವಾಗಿ ಸಾರಲಾಗಿದೆ.

○ ○ ○ ○ ○

ಸ್ವತಂತ್ರ ಬ್ರಹ್ಮದೇಶದ ಪಾರ್ಲಿಮೆಂಟು ಪ್ರಥಮ ಸಲ ಸೇರಿ ನ್ಯಾಯ ಖಾತೆಯ ಪುನರ್ಘಟನೆಯನ್ನೊಳಗೊಂಡು ಅನೇಕ ಮಸೂದೆಗಳನ್ನು ಚರ್ಚಿಸಿತೆಂದೂ ಅಧ್ಯಕ್ಷ ಮತ್ತು ಮಂತ್ರಿಗಳ ಸಂಬಳದಲ್ಲಿ ಬಹಳ ಕಡಿತ ಸಂಭವಿಸಿತೆಂದೂ ಸುದ್ದಿಯಿದೆ.

○ ○ ○ ○

ಜಪಾನ ಮತ್ತು ಚೀನದ ನಡುವೆ ವ್ಯಾಪಾರವನ್ನು ಪುನಃ ಪ್ರಾರಂಭಿಸುವ ಶಕ್ಯತೆಯನ್ನು ಅಭ್ಯಸಿಸಲು ಚೀನದ ವ್ಯಾಪಾರಿ ಪ್ರತಿನಿಧಿಗಳು ಜಪಾನಕ್ಕೆ ಹೋಗಲಿದ್ದಾರೆ.

○ ○ ○

“ ಅಫಗಾನಿಸ್ತಾನದ ಜನರು ಶೂರರೂ ಉದಾರಿಗಳೂ ಸೌಮ್ಯ ಸ್ವಭಾವದವರೂ ಇದ್ದಾರೆ. ಈ ಜನರು ಯಾವಾಗಲೂ ಶಾಂತತೆ ಮತ್ತು ಸೌಹಾರ್ದವನ್ನು ಬಯಸುವರು. ಅಂತೆಯೇ ಅಲ್ಲಿಯ ನನ್ನ ರಾಯಭಾರಿತನವು ಸುಗಮವಾಗಿ ಸಾಗುವುದೆಂದು ನನ್ನ ನಂಬಿಗೆ ಇದೆ ” ಎಂದು ಅಫಗಾನಿಸ್ತಾನದಲ್ಲಿ ಭಾರತದ ರಾಯಭಾರಿಗಳಾಗಿದ್ದ ಡಾ. ತಾರಾಚಂದರು ಒಂದು ಸಂದರ್ಶನದಲ್ಲಿ ಹೇಳಿದರು.

ಶೋಚನೀಯ ನಿಧನ

ಧಾರವಾಡದ ತಾರಾಬಾಯಿ ಗುರುರಾವ ಸಂಗಮ ಇವರು ಪುಣ್ಯ ಪಟ್ಟಣದಲ್ಲಿ ೧೭ ನೇ ತಾರೀಕಿನ ದಿವಸ ವೈಕುಂಠ ವಾಸಿಗಳಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮರಣ ಸಮಯದಲ್ಲಿ ಇವರಿಗೆ ೭೦ ವರುಷಗಳಾಗಿದ್ದವು. ಇವರು ದೇವರ ನಾಮಗಳನ್ನು ಹೇಳುವಲ್ಲಿ ಸದಾ ತತ್ಪರರಾಗಿದ್ದು ಬಂದವರಿಗೆಲ್ಲ ಅವನ್ನು ಹೇಳಿಕೊಡುತ್ತಿದ್ದರು. ಮಹಿಳೆಯರಲ್ಲಿ ಧರ್ಮ ಭಕ್ತಿ ಆಸ್ತಿಕ ಭಾವವನ್ನು ಜಾಗ್ರತಗೊಳಿಸುವಲ್ಲಿ ಇವರು ಪರಿಶ್ರಮಿಸಿದ್ದರು. ಪರಮಾತ್ಮನು ಇವರ ಆತ್ಮಕ್ಕೆ ಶಾಂತಿಯನ್ನೀಯಲಿ.

ಪಟೇಲರ ಸ್ಪಷ್ಟೋಕ್ತಿ

ಹಿಂದುಸ್ತಾನ ಪಾಕಿಸ್ತಾನಗಳ ನಡುವಾದ ಆರ್ಥಿಕ ಒಪ್ಪಂದದಂತೆ ಹಿಂದುಸ್ತಾನ ಸರಕಾರವು ನಡೆಯುತ್ತಿಲ್ಲವೆಂದೂ ಪಾಕಿಸ್ತಾನಕ್ಕೆ ಬರತಕ್ಕ ಉಳಿದ ೫೫ ಕೋಟಿ ರೂಪಾಯಿಗಳನ್ನು ರಿಝರ್ವ ಬ್ಯಾಂಕು ಕೊಡದಂತೆ ಹಿಂದುಸ್ತಾನ ಸರಕಾರವು ತಡೆದಿದೆಯೆಂದೂ ಪಾಕಿಸ್ತಾನದ ಆರ್ಥಿಕ ಮಂತ್ರಿಗಳಾದ ಗುಲಾಮ ಮಹಮ್ಮದರು ಆರೋಪ ಹೊರಿಸಿದ್ದಾರೆ. ಇದೆಲ್ಲ ಆಮೂಲಾಗ್ರ ನಿರಾಧಾರವೆಂದೂ ಅಪಲಾಪವೆಂದೂ ಹಿಂದುಸ್ತಾನ ಸರಕಾರದ ಉಪ ಮುಖ್ಯ ಮಂತ್ರಿಗಳಾದ ಸರದಾರ ವಲ್ಲಭಭಾಯಿ ಪಟೇಲರು ಉತ್ತರರೂಪವಾಗಿ ಅದನ್ನು ಖಂಡಿಸಿದ್ದಾರೆ. ಅವರ ಹೇಳಿಕೆಯ ಸಾರ ಹೀಗೆ:

ರಿಝರ್ವ ಬ್ಯಾಂಕನ್ನು ಬೆದರಿಸಿ ಪಾಕಿಸ್ತಾನದ ಅರ್ಥ ಸಚಿವರು ಹಣ ಉಚ್ಚಬೇಕೆಂದು ಮಾಡಿದ್ದರೇನೋ? ಅಲ್ಲದೆ ಅವರು ಹಿಂದುಸ್ತಾನದ ಮೇಲೆ ಅವಿಶ್ವಾಸದ ಆರೋಪ ಹೊರಿಸಿ ಅಂತರ್ರಾಷ್ಟ್ರೀಯ ಸಹಕಾರ ಪಡೆಯಬೇಕೆಂದು ಬಯಸಿದ್ದಂತೆಯೂ ತೋರುತ್ತದೆ. ಕಾಶ್ಮೀರ ತಮ್ಮದೇಶವೆನ್ನುವ ಹಾಗೆ ೫೫ ಕೋಟಿ ರೂಪಾಯಿಗಳಿಗಾಗಿ ಕಾಶ್ಮೀರವನ್ನು ತಾವು ಮಾರಿಕೊಳ್ಳಲಾರೆವೆಂದೂ ಪಾಕಿಸ್ತಾನದ ಅರ್ಥ ಸಚಿವರು ಬಂಟಗಾರಿಕೆಯ ಮಾತು ಸೂಚಿಸಿದ್ದಾರೆ. ಕಾಶ್ಮೀರದ ಸಮಸ್ಯೆಯನ್ನು ಇವರು ಹೀಗೆ ಎಳೆಯುವರಾಗಿ ನಾವಾರೂ ಊಹಿಸಿರಲಿಲ್ಲ. ಪಾಕಿಸ್ತಾನ ಹಿಂದುಸ್ತಾನ ಸರಕಾರಗಳ ಪ್ರತಿನಿಧಿಗಳಲ್ಲಿ ನಡೆದ ಮಾತುಕತೆಗಳಲ್ಲಿ, ಕಾಶ್ಮೀರದ ಪ್ರಶ್ನೆಯೊಳಗೊಂಡು ನಮ್ಮ ಎಲ್ಲ ಮತಭೇದಗಳನ್ನೂ ನಮ್ಮ ನಮ್ಮೊಳಗೆ ಹೋಗಲಾಡಿಸಿಕೊಳ್ಳುವದೆಂದೇ ಗೊತ್ತಾಗಿತ್ತು. ಈ ಮಾತುಗಳು ಕೇವಲ ವಿಭಜನೆಗೆ ಮಾತ್ರ ಸಂಬಂಧಿಸಿರಲಿಲ್ಲ. ಕಾಶ್ಮೀರದ ಪ್ರಶ್ನೆ ನಿರಾಶ್ರಿತರ ಪ್ರಶ್ನೆ ಹಾಗು ಗುಳೆ ಎತ್ತಿ ಹೋಗುವವರ ವಿಷಯ ಇವೇ ಮೊದಲಾದವುಗಳು ನಮ್ಮ ಒಡಂಬಡಿಕೆಗೆ ಸಂಬಂಧಪಟ್ಟವುಗಳೆಂಬುದನ್ನು ಸ್ಪಷ್ಟಪಡಿಸಲಾಗಿತ್ತು.

ಲಾಹೋರದಲ್ಲಿ ಡಿಸೆಂಬರ ೮ ನೆಯ ತಾ. ಗೆ ಮಾತುಕತೆ ನಡೆದವು. ಆದರೆ ಅಷ್ಟರಲ್ಲಿಯೇ ಪಾಕಿಸ್ತಾನ ಸರಕಾರದವರು ತಮ್ಮ ಪಾಲಿನ ೫೫ ಕೋಟಿ ರೂ. ಗಳನ್ನು ಪಡೆಯಲು ಪ್ರಯತ್ನ ನಡೆಸಿದ್ದು ಕಂಡು ಬಂದಿತು. ನಾವು ಅದನ್ನು ನಿರೋಧಿಸಿದೆವು. ಆದರೆ ನಮ್ಮ ಮೇಲೆ ಒಂದು ಬಗೆಯ ಒತ್ತಾಯ ತರಲೆಂದು ಪಾಕಿಸ್ತಾನ ಅಧಿಕಾರಿಗಳು ತಾ ೭ ನೇ ಡಿಸೆಂಬರದ ದಿನ ಆರ್ಥಿಕ ಒಡಂಬಡಿಕೆ ಆಗಿ ಹೋಯ್ತೆಂದು ಪ್ರಕಟಿಸಿದರು. ಆದರೆ ನಾವು ಹಿಂದಿನ ಧೋರಣಕ್ಕೆ ಅಂಟಿಕೊಂಡುದನ್ನು ಲಾಹೋರ ಚರ್ಚೆಯಲ್ಲಿ ಸ್ಪಷ್ಟಪಡಿಸಿದೆವಲ್ಲದೆ ೯ ನೆಯ ಡಿಸೆಂಬರ ದಿನ ಶಾಸನ ಸಭೆಯಲ್ಲಿ ಈ ಬಗ್ಗೆ ಹೇಳಿಕೆಯನ್ನೂ ಕೊಟ್ಟೆವು. ೭ ನೆಯ ಡಿಸೆಂಬರಕ್ಕೆ ಹೇಳಿಕೆ ಕೊಡಲು ತವಕಪಟ್ಟದ್ದೇ ಪಾಕಿಸ್ತಾನದ ತಂತ್ರವನ್ನು ವ್ಯಕ್ತಪಡಿಸುತ್ತದೆ. ಈ ತಮ್ಮ ಪ್ರಕಟನೆಯ ಬಲದಿಂದ ಕಾಶ್ಮೀರದ ತಮ್ಮ ಧೋರಣವನ್ನು ಇನ್ನಷ್ಟು ದೃಢಪಡಿಸಿಕೊಂಡರು. ಹೀಗಾಗಿ ಒಡಂಬಡಿಕೆಯ ಆಶೆ ಬಯಲಾಯ್ತು, ಎಂದೇ ‘ಕಾಶ್ಮೀರದ ಸಮಸ್ಯೆ ಬಗೆ ಹರಿದಾಗಲೇ ಈ ಒಡಂಬಡಿಕೆಯು ಕಾರ್ಯರೂಪಕ್ಕಿಳಿಯುವದು ಎಂಬುದಾಗಿ ನಾನು ಶಾಸನ ಸಭೆಯಲ್ಲಿ ಸಾರಬೇಕಾಯ್ತು. ಈ ನನ್ನ ಹೇಳಿಕೆಯನ್ನು ಪಾಕಿಸ್ತಾನ ಸರಕಾರ ಪ್ರತಿಭಟಿಸಲಿಲ್ಲ; ಪಾಕಿಸ್ತಾನ ಹಾಯಕಮಿಶನರರ ಸಮ್ಮುಖದಲ್ಲಿಯೂ ತಾ.೧೨ ಡಿಸೆಂಬರಕ್ಕೆ ನಾನು ಇದೇ ಪಲ್ಲವಿ ಹಾಡಿದ್ದೇನೆ. ಗುಪ್ತವಾಗಿ ನಮ್ಮೊಡನೆ ಯುದ್ಧರತವಾದ ಪಾಕಿಸ್ತಾನಕ್ಕೆ ಹಣ ಒದಗಿಸುವದು ಅದಾವ ರಾಜನೀತಿಗೆ ಸಮ್ಮತವಾದೀತು ?

ನಮ್ಮ ನೆರೆಯ ರಾಷ್ಟ್ರ ಅಭ್ಯುದಯ ಹೊಂದಿದರೆ ನಮಗೆ ಒಳಿತೇ ಅಲ್ಲವೆ? ಪಾಕಿಸ್ತಾನದ ಹಾಯಕಮಿಶನರ ಹಾಗೂ ಸರ ಆರ್ಚಿಬಾಲ್ಡ ರೋಲಂಡ್ಸ ಇವರು ಹೊರಡಿಸಿದ ಹೇಳಿಕೆಗಳಿಂದ ಈ ಆರ್ಥಿಕ ಒಪ್ಪಂದವು ಪಾಕಿಸ್ತಾನದ ಪ್ರಗತಿಗೆ ಒಳ್ಳೆಯ ಪೋಷಕವೆಂದು ಸ್ಪಷ್ಟವಾಗುತ್ತದೆ. ಒಪ್ಪಂದದಲ್ಲಿ ನಮ್ಮಿಂದ ಔದಾರ್ಯ ಪಡೆದ ಪಾಕಿಸ್ತಾನವು ಪ್ರತಿಯಾಗಿ ಉಳಿದ ವಿಷಯಗಳಲ್ಲಿ ಇದೇ ಬಗೆಯ ಔದಾರ್ಯ ತಾನೂ ತೋರುವದು ಉಚಿತವೆಂಬುದನ್ನು ಮರೆತಿತು. ಒಡಂಬಡಿಕೆಗೆ ಅನುಸರಿಸಿ ಪಾಕಿಸ್ತಾನ ನಡೆಯದಿದ್ದರೆ ನಮ್ಮ ಪ್ರಯತ್ನವೆಲ್ಲ ಹೊಳೆಯಲ್ಲಿ ಹುಣಿಸೆ ಹಣ್ಣು ತೊಳೆದಂತೆ ವ್ಯರ್ಥವೆಂದು ಮೊದಲೇ ನಾನು ಹೇಳಿದ್ದೆ. ಪಾಕಿಸ್ತಾನದವರ ಈ ವಂಚನೆ ಹೀಗೇ ಸಾಗಿದರೆ ಅವರಿಗೆಕೊಡಬೇಕೆಂದಿದ್ದ ಶಸ್ತ್ರಾಸ್ತ್ರಗಳನ್ನು ಕೊಡುವದು ದೂರವೇ ಉಳಿಯುವದು.

(೧೨ನೆಯ ಪುಟ ನೋಡಿರಿ)

ಕರ್ಮವೀರ ಹರಿಜನ ಪುರವಣಿ

ಪ್ರಜಾರಾಜ್ಯದ ಮಾರ್ಗ

[ಮೋ. ಕ. ಗಾಂಧಿ]

ಮಾನ್ಯ ಪತ್ರಲೇಖಕರೊಬ್ಬರು ನನಗೆ ಎರಡು ಪತ್ರಗಳನ್ನು ಬರೆದಿರುವರು. ಅವಸರದಿಂದ ವಿನಿಯಂತ್ರಣ ಧೋರಣ ಸ್ವೀಕರಿಸಿದ್ದರ ದುಷ್ಪರಿಣಾಮಗಳ ಬಗ್ಗೆ ಒಂದು ಪತ್ರದಲ್ಲಿ ಸಕಾಲಿಕ ಎಚ್ಚರಿಕೆ ಕೊಡಲಾಗಿದೆ; ಮತ್ತೊಂದರಲ್ಲಿ ಹಿಂದು ಮುಸಲ್ಮಾನರಲ್ಲಿನ ದೊಂಬಿಗಳ ಸಂಭಾವ್ಯತೆಯನ್ನು ವಿವರಿಸಲಾಗಿದೆ. ಇವೆರಡೂ ಪತ್ರಗಳಿಗೆ ಉತ್ತರವೆಂದು ನಾನು ಒಂದು ಪತ್ರವನ್ನು ಬರೆದಿದ್ದೇನೆ. ಅನಪೇಕ್ಷಿತವಾಗಿ ಅದು ತರ್ಕಬದ್ಧವಾಗಿದೆಯಲ್ಲದೆ ಪ್ರಜಾರಾಜ್ಯದ ಬಗ್ಗೆ ನನ್ನ ಅಭಿಪ್ರಾಯವೇನೆಂಬದನ್ನು ಸ್ಪಷ್ಟಪಡಿಸುತ್ತದೆ. ಪ್ರಜಾರಾಜ್ಯವು ಅಹಿಂಸಾತ್ಮಕ ಜನಸಾಮಾನ್ಯದ ಚಳವಳಿಂದ ಮಾತ್ರ ಸ್ಥಾಪಿತವಾಗಬಲ್ಲುದು. ಆದುದರಿಂದ ನಾನು ಆ ಪತ್ರವನ್ನು ಕೆಳಗೆ ಕೊಡುತ್ತೇನೆ. ಯಾವ ಪತ್ರಗಳಿಗೆ ಅದು ಉತ್ತರ ರೂಪವಾಗಿದೆಯೊ ಆ ಪತ್ರಗಳನ್ನು ಮಾತ್ರ ನಾನು ಕೊಡುವುದಿಲ್ಲ. ಅವೆರಡೂ ಪತ್ರಗಳಲ್ಲಿ ಇರುವದೇನು ಎಂಬದನ್ನು ತಿಳಿದುಕೊಳ್ಳಲು ಈ ಪತ್ರದಲ್ಲಿ ಬೇಕಾದಷ್ಟು ಸಾಮಗ್ರಿ ಇದೆ. ನನ್ನ ಪತ್ರಲೇಖಕನ ಹೆಸರನ್ನು ಮತ್ತು ಘಟನೆಯ ಸ್ಥಳವನ್ನು ಬೇಕೆಂತಲೆ ನಾನು ಪ್ರಸಿದ್ಧಿಸಿಲ್ಲ! ಆ ಪತ್ರಗಳು ಗುಪ್ತವಾಗಿದ್ದುವೆಂದು ಇದರ ಅರ್ಥವಲ್ಲ. ಅದರೆ ಅವನ್ನು ಪ್ರಸಿದ್ಧಿಸುವದರಿಂದ ಯಾವ ಪ್ರಯೋಜನವೂ ಆಗಲಾರದೆಂದು ನಾನು ಅವನ್ನು ಪ್ರಸಿದ್ಧಿಸುವದಿಲ್ಲ.

“ನಮ್ಮ ದಾಸ್ಯವು ದೂರಾಗಿದ್ದರೂ ನೀವಿನ್ನೂ ದಾಸಮನೋವೃತ್ತಿಯಿಂದಲೆ ಬರೆಯುತ್ತಿರುವಿರಿ. ವಿನಿಯಂತ್ರಣದಿಂದ ನೀವು ಹೇಳುತ್ತಿರುವ ಪರಿಣಾಮಗಳು ಉಂಟಾಗಿದ್ದರೆ ನೀವು ಅದರ ವಿರುದ್ಧ ಕೂಗನ್ನು ಎಬ್ಬಿಸಬೇಕು; ಹಾಗೆ ಮಾಡುವದು ನೀವೊಬ್ಬರೆ ಆಗಿದ್ದರೂ ನಿಮ್ಮ ಕೂಗು ಎಷ್ಟೇ ಅಶಕ್ತವಾಗಿದ್ದರೂ ನೀವು ಹಾಗೆ ಮಾಡಲಿಕ್ಕೆ ಬೇಕು. ವಸ್ತುಸ್ಥಿತಿಯೆಂದರೆ ನಿಮಗೆ ಇದರಲ್ಲಿ ಅನೇಕ ಸಹಕಾರಿಗಳು ಸಿಕ್ಕುವರು ಮತ್ತು ನಿಮ್ಮ ಕೂಗೂ ಕೇಳದಂತಹದಿಲ್ಲ, ಆದರೆ ಅಧಿಕಾರ ಮದೋನ್ಮತ್ತತೆಯಿಂದ ಮಾತ್ರ ಅದು ಹಾಗಾಗಿರಬಾರದು. ವೈಯಕ್ತಿಕವಾಗಿ ಹೇಳಬೇಕಾದರೆ ವಿನಿಯಂತ್ರಣದ ಮೂಲಕ ಧಾರಣೆಗಳು ಏರಿದವೆಂಬ ಕೂಗಿನಿಂದ ನಾನೇನು ಬೆದರುವದಿಲ್ಲ, ಜಲಚರ ಪ್ರಾಣಿಗಳ ಮಧ್ಯದಲ್ಲಿದ್ದು ಅವುಗಳೊಡನೆ ಹೋರಾಡುವ ಜ್ಞಾನ ನಮಗಿಲ್ಲದ್ದಿದೆ ಅವುಗಳಿಂದ ತಿನ್ನಲ್ಪಡಲು ನಾವು ಯೋಗ್ಯರೆ ಸೈ. ಅವಾಗಲೆ ವಿಪನ್ನ ಪರಿಸ್ಥಿತಿಯಲ್ಲಿ ಯಾವ ರೀತಿಯಿಂದ ತಲೆಯೆತ್ತಬೇಕೆಂಬುದು ನಮಗೆ ಗೊತ್ತಾಗುವದು. ನಿಜವಾದ ಪ್ರಜಾರಾಜ್ಯವನ್ನು ಜನರು ಪುಸ್ತಕಗಳಿಂದ ಕಲಿಯುವದಿಲ್ಲ. ಸರ್ಕಾರದಿಂದಲೂ ಕಲಿಯುವದಿಲ್ಲ! ಸರಕಾರವೆಂದರೆ ಕೇವಲ ಹೆಸರಿಗೆ, ವಸ್ತುತಃ ನೋಕರರೆ. ಕಠಿನ ಅನುಭವವೆ ಪ್ರಜಾರಾಜ್ಯದಲ್ಲಿ ಅತ್ಯಂತ ದಕ್ಷ ಶಿಕ್ಷಕ. ನನಗೆ ಬಿನ್ನವಿಸುವ ದಿನಗಳೀಗ ಸಂದುಹೋಗಿವೆ. ಬ್ರಿಟಿಶರಾಳಿಕೆಯ ಕಾಲಕ್ಕೆ ಇಟ್ಟುಕೊಂಡಿದ್ದ ತೋರಿಕೆಯ ಅಹಿಂಸೆಯನ್ನು ಮುಂದೆ ಅವಶ್ಯವಿಲ್ಲ. ಅದುದರಿಂದ ಆತ್ಯಂತಿಕ ಹಿಂಸೆಯು ನಮ್ಮನ್ನೀಗ ಎದುರಿಸುತ್ತಿದೆ. ನೀವೂ ಅದಕ್ಕೆ ಆಹುತಿ ಆಗಿರುವಿರೋ ಇಲ್ಲವೆ ನೀವು ಹಿಂದೆಂದೂ ಅಹಿಂಸಾವಾದಿಗಳಾಗಿರಲೇ ಇಲ್ಲವೆ? ನನಗೆ ಪತ್ರ ಬರೆದು ನಿಮ್ಮ ಅಭಿಪ್ರಾಯವನ್ನು ತಿಳಿಸಬಾರದೆಂದು ಎಚ್ಚರಿಕೆ ಕೊಡಲು ನಾನು ಈ ಪತ್ರವನ್ನು ಬರೆಯುತ್ತಿಲ್ಲ; ಆದರೆ ನಾನೊಬ್ಬನೇ ಉಳಿದರೂ ವಿನಿಯಂತ್ರಣ ಧೋರಣಕ್ಕೇ ಬದ್ಧನಾಗಿರುವದೇಕೆಂಬುದನ್ನು ನಿಮಗೆ ತಿಳಿಸುವದೇ ಇದರ ಉದ್ದೇಶವಾಗಿದೆ.

ಹಿಂದು ಮುಸಲ್ಮಾನರ ತಿಕ್ಕಾಟದ ಸಂಬಂಧದಲ್ಲಿ ಇದ್ದ ನಿಮ್ಮ ಎರಡನೆಯ ಪತ್ರವು ಮೊದಲನೆಯ ಪತ್ರಕ್ಕಿಂತ ಹೆಚ್ಚು ಸುಸಂಬದ್ಧವಾಗಿದೆ. ಪರಿಸ್ಥಿತಿಯನ್ನು ತೀರ ಹಗುರಾಗಿ ಎದುರಿಸುವುದರ ಮತ್ತು ಅಲ್ಪ ಸಂತುಷ್ಟಿಯ ವಿರುದ್ಧ ನಿಮ್ಮ ಕೂಗನ್ನು ಜೋರಾಗಿ ಬಹಿರಂಗವಾಗಿ ಎಬ್ಬಿಸಬೇಕು. ನನ್ನ ಮಟ್ಟಿನ ಕರ್ತವ್ಯವನ್ನು ನಾನು ಮಾಡುವೆನು, ಆದರೆ ನನ್ನ ಶಕ್ತಿ ಸಾಮರ್ಥ್ಯಗಳ ಅರಿವು ನನಗಿದೆಯೆಂದು ನಾನು ವಿಷಾದಪೂರ್ವಕ ಒಪ್ಪಿಕೊಳ್ಳುವೆ. ಮೊದಲು ಸುತ್ತಲಿನ ಪ್ರದೇಶಕ್ಕೆಲ್ಲ ಒಡೆಯನಾಗಲು ನನಗೆ ಶಕ್ಯವಿತ್ತು; ಆದರೆ ಈಗಲೂ ನಾನೊಬ್ಬ ಅರಸನೆಂದು ತಿಳಿದುಕೊಂಡದ್ದಾದರೆ ನನ್ನ ಸಹಕಾರೀ ಅರಸರೂ ಅನೇಕ ಜನರಿರುವರು. ಶಕ್ಯವಾದರೆ ಅವರಲ್ಲಿ ನಾನು ಕನಿಷ್ಠನು. ಪ್ರಜಾರಾಜ್ಯದ ಪ್ರಾರಂಭದ ದಿನಗಳು ಕಿವಿಗೆ ಇಂಪಾಗಿ ಕೇಳಿಸದಂತಹ ವಿಷಮಘಟನೆಗಳಿಂದ ತುಂಬಿದಂತಹವು, ತಲೆಶೂಲೆ ಎಬ್ಬಿಸುವಂತಹವು. ಈ ಎಲ್ಲ ವಿಷಮ ಪರಿಸ್ಥಿತಿಯನ್ನು ಹೋಗಲಾಡಿಸಿ ಪ್ರಜಾರಾಜ್ಯವು ಬಾಳಬೇಕಾದರೆ ತೋರಿಕೆಯ ಈ ಅನಿವಾರ್ಯ ವೈಮನಸ್ಯದೊಳಗಿಂದಲೆ ಮಧುರಸಾಮರಸ್ಯವನ್ನು ಹೊರಹೊಮ್ಮಿಸಬೇಕು. ಈ ಬಗೆಯ ವೈಮನಸ್ಯದೊಳಗಿಂದಲೆ ಸಾಮರಸ್ಯವನ್ನು ಹೊರಹೊಮ್ಮಿಸುವವರಲ್ಲಿ ನೀವೂ ಒಬ್ಬರು ಪ್ರಮುಖರಾಗಬಲ್ಲಿರೆಂದು ನಾನು ಆಶಿಸುತ್ತೇನೆ.

ನಿಮ್ಮ ಭಾಗದಲ್ಲಿಯ ಪರಿಸ್ಥಿತಿಯನ್ನು ನನಗೆ ತಿಳಿಸಿಬಿಟ್ಟರೆ ನಿಮ್ಮ ಕೆಲಸ ಮುಗಿಯಿತೆಂದು ತಿಳಿದುಕೊಳ್ಳುವ ತಪ್ಪನ್ನು ನೀವು ಮಾಡಲಾರಿರಿ.

ಹೊಸದಿಲ್ಲಿ
೧೧—೧—೧೯೪೮

ಲಖನೌ ಮುಸಲ್ಮಾನ ಪರಿಷತ್ತು

ದಿಸೆಂಬರ ೨೭ ಮತ್ತು ೨೮ ನೆಯ ತಾರೀಕು ಲಖನೌದಲ್ಲಿ ಹಿಂದೀ ಮುಸಲ್ಮಾನರ ಪರಿಷತ್ತು ಸೇರಿದ್ದು ಯೋಗ್ಯ ಮಾರ್ಗದಲ್ಲಿಯ ಸರಿಯಾದ ಹೆಜ್ಜೆ. ತಮ್ಮ ಅಧ್ಯಕ್ಷ ಭಾಷಣದಲ್ಲಿ ಮೌಲಾನಾ ಅಬುಲ್ ಕಲಂ ಅಝಾದರು ಮೊಟ್ಟ ಮೊದಲಾಗಿ ಒತ್ತಿ ಹೇಳಿದ್ದೆಂದರೆ ಜಾತೀಯ ತಳಹದಿಯಲ್ಲಿ ಸಂಸ್ಥಾಪಿತವಾದ ಎಲ್ಲ ರಾಜಕೀಯ ಸಂಸ್ಥೆಗಳನ್ನು ವಿಸರ್ಜಿಸಿಬಿಡಬೇಕೆಂದು. ಅವರ ಧುರೀಣತ್ವವನ್ನು ಅನುಸರಿಸಲು ಸಮ್ಮಿಲಿತರಾಗಿದ್ದ ೭೦ ಸಾವಿರ ಮುಸಲ್ಮಾನರನ್ನುದ್ದೇಶಿಸಿ ಮಾತ್ರ ಮೌಲಾನಾ ಸಾಹೇಬರು ಭಾಷಣ ಮಾಡುತ್ತಿದ್ದರು, ಆದರೆ ಅವರ ಆ ಅಭಿಪ್ರಾಯವು ಹಿಂದು ಮುಸಲ್ಮಾನ ಶೀಖ ಇಲ್ಲವೆ ಬೇರೆ ಯಾವದೇ ಜಾತೀಯ ಸಂಸ್ಥೆಗೂ ಅನ್ವಯಿಸುವದು. ಯಾವದೊಂದು ಜಾತೀಯ ಧಾರ್ಮಿಕ ಇಲ್ಲವೆ ಸಾಂಸ್ಕೃತಿಕ ಪ್ರಗತಿಗಾಗಿ ದುಡಿಯುತ್ತಿರುವ ಸಂಸ್ಥೆಗಳ ಬಗ್ಗೆ ಯಾರೂ ಆಕ್ಷೇಪಿಸಲಾರರೆಂದು ಮೌಲಾನಾ ಸಾಹೇಬರು ಹೇಳಿದ್ದು ಅತ್ಯಂತ ಸಮಂಜಸವಾಗಿದೆ. ಎಲ್ಲಿಯ ವರೆಗೆ ನಾವು ಧರ್ಮವನ್ನನುಲಕ್ಷಿಸದೆ ಎಲ್ಲ ವಿತ್ತ ಜೀವಿಕಗಳು ಅಷ್ಟೇ ಪವಿತ್ರವಾದವುಗಳೆಂದು ಭಾವಿಸುವೆವೋ ಅಲ್ಲಿಯ ವರೆಗೆ ಈ ದೇಶದಲ್ಲಿ ಶಾಂತಿಯೂ ನೆಲೆಸಲಾರದು. ನಮ್ಮ ನಮ್ಮ ಧರ್ಮಗಳ ವೈಭವ ಗೌರವಗಳನ್ನೂ ನಾವು ರಕ್ಷಿಸಿಕೊಳ್ಳಲಾರೆವು. ಎಲ್ಲಬಗೆಯ ಜಾತೀಯ ಭಿನ್ನಭಾವನೆಗಳು ಧರ್ಮದ ತಿರುಳನ್ನೇ ಹಾಳು ಮಾಡುವವಲ್ಲದೆ ಇಡೀ ಸಮಾಜವನ್ನೇ ರಸಾತಳಕ್ಕಿಳಿಸುವವು.

ದೇಶವಿಭಜನೆ ಮತ್ತು ದ್ವಿರಾಷ್ಟ್ರತತ್ವದ ಬಗ್ಗೆ ಪ್ರಖ್ಯಾತವಾಗಿರುವ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತ ಮತ್ತು ಹಿಂದುಸ್ತಾನದಲ್ಲಿಯ ಮುಸಲ್ಮಾನರೆಲ್ಲ ಹಿಂದೀ ರಾಷ್ಟ್ರೀಯ ಮಹಾಸಭೆಯ ಸದಸ್ಯರಾಗಬೇಕೆಂದು ಅವರಿಗೆ ಸಲಹೆ ಕೊಡುತ್ತ ಮೌಲಾನಾ ಸಾಹೇಬರು ವಿಶಿಷ್ಟ ಉದ್ದೇಶಕ್ಕಾಗಿ ಕೂಡಿದ ಸಭೆಯಲ್ಲಿ ಅನಿಷ್ಟ ಘಟನೆಗಳ ಉಲ್ಲೇಖ ಮಾಡುವುದನ್ನು ಬಿಟ್ಟದ್ದು ಮತ್ತು ವಿವಾದಾತ್ಮಕವಾದ ಕಾರಣವನ್ನು ಎತ್ತದಿದ್ದುದು ಜಾಣತನದ ಮಾತೇ ಆಗಿದೆ.

ಪರಿಷತ್ತು ಮೌಲಾನಾ ಸಾಹೇಬರ ಧುರೀಣತ್ವವನ್ನು ವಹಿಸಿ ಅವರು ತೋರಿಸಿಕೊಟ್ಟ ಹಾದಿಯಲ್ಲಿಯೆ ಒಮ್ಮತದ ನಿರ್ಣಯವನ್ನು ಸ್ವೀಕರಿಸಿತು. ಜಾತೀಯ ಸಂಸ್ಥೆಗಳ ಸಂಬಂಧದ ಗೊತ್ತುವಳಿ ಯಾವದೇ ರಾಷ್ಟ್ರೀಯ ಪರಿಷತ್ತಿನಲ್ಲಿ ಹಲಕೆಲವು ಶಾಬ್ದಿಕ ಬದಲಾವಣೆಗಳೊಡನೆ ಸ್ವೀಕೃತವಾಗಬಲ್ಲುದಾಗಿತ್ತು. ಮೌಲಾನಾ ಅಹಮ್ಮದ ಶಾಹೀದರು ಗೊತ್ತುವಳಿಯನ್ನು ಮಂಡಿಸುತ್ತ, ದ್ವಿರಾಷ್ಟ್ರ ತತ್ವದ ಪ್ರತಿಪಾದನೆಯಿಂದ ಉಂಟಾದ ಪರಿಣಾಮಗಳ ಬಗ್ಗೆ ವಿಷಾದ ಪ್ರದರ್ಶಿಸಿದರು. ಯಾವದೊಂದು ಜಾತಿಯ ಇತಿಶ್ರೀಯಾದರೆ ತತ್ಪರಿಣಾಮ ಉಳಿದ ಎಲ್ಲ ಜಾತಿಗಳ ನಾಶವೂ ಅವಶ್ಯವಾಗಿ ಆಗುವದೆಂಬ ಬಗ್ಗೆ ಡಾ. ಸಯ್ಯದ ಮಹಮ್ಮದರು ಎಚ್ಚರಿಕೆ ಕೊಟ್ಟಿದ್ದು ನ್ಯಾಯ್ಯವಾಗಿದೆ. ಸಯ್ಯದ ಅಬ್ದುಲ್ಲಾ ಬ್ರೆಲ್ವಿ, ಪ್ರೊ. ಹುಮಾಯೂನ ಕಬೀರ ಮತ್ತು ಮೌಲಾನಾ ಹಫೀಜರ ರಹಿಮಾನ ಮೊದಲಾದ ಅನೇಕ ಭಾಷಣಕಾರರು. ಮುಸಲ್ಮಾನರು ಸಾಮೂಹಿಕವಾಗಿ ಹಿಂದೀ ರಾಷ್ಟ್ರೀಯ ಮಹಾ ಸಭೆಯನ್ನು ಸೇರಬೇಕೆಂದೂ ಅದರ ನೈಜ ರಾಷ್ಟ್ರೀಯತ್ವದ ಶೀಲವನ್ನು ಸಂವರ್ಧಿಸಿಕೊಂಡು ಬರಬೇಕೆಂದೂ ಸೂಚಿಸಿದರು.

ಹೊಸದಿಲ್ಲಿ, ೧೧-೧-೧೯೪೮ ಸುಂದರಲಾಲ

ಅತ್ಯವಶ್ಯಕ ಸಲಹೆ

ಜನತೆಯ ಮತ್ತು ಸುತ್ತಲಿನ ಪರಿಸ್ಥಿತಿಯ ಸಂಪೂರ್ಣ ಜ್ಞಾನವಿರಬೇಕಾದ ಆರ್ಥಿಕ ವಿಷಯದಲ್ಲಿಯೂ ಪರಕೀಯರಿಗೆ ಶರಣು ಹೋಗುವಂಥ— ವಿವೇಕಹೀನ [illegible] ಬ್ರಿಟಿಶ ಸಾಮ್ರಾಜ್ಯತ್ವದಿಂದಬಂದ ಬಳುವಳಿ ಎಂದು ಹೇಳಬಹುದು. ಯಾವದೊಂದು ತಾಂತ್ರಿಕ ವಿಷಯದಲ್ಲಿ ಆಯಾ ಕಲೆ ಕೈಗಾರಿಕೆಗಳಲ್ಲಿ ತಜ್ಞರಾದವರ ಸಲಹೆ ಸಹಕಾರವನ್ನು ಪಡೆಯುವದು ಸಾಮ್ರಾಜ್ಯತ್ವದ ಹಸುಗೂಸಾದ ಈ ಹೀನಗುಣವನ್ನು ಬಿಟ್ಟುಗೊಡಲು ಕಾಲಾವಧಿ ಬೇಕಾಗಬಹುದು.

ನಮ್ಮ ದೇಶದಲ್ಲಿ ಔದ್ಯೋಗಿಕ ಯೋಜನೆಯ ಸಂಬಂಧದಲ್ಲಿ ಸಲಹೆ ಕೊಡಲು ಅಸ್ಟ್ರೇಲಿಯಾದ ಅರ್ಥವಿಶಾರದರಾದ ಶ್ರೀ ಕಾಲಿನ್ ಕ್ಲಾರ್ಕ ಎಂಬುವರನ್ನು ನೇಮಿಸಿಕೊಳ್ಳಲಾಯಿತು. “ನಾನು ಹಿಂದೀ ಮಂತ್ರಿಯಾಗಿದ್ದರೆ, ‘ತಕ್ಷಣದಲ್ಲಿ ಹಳ್ಳಿ ಕೈಗಾರಿಕೆ ಉದ್ಯೋಗಗಳನ್ನು ಅಭಿವರ್ಧಿಸಿಕೊಳ್ಳಿರಿ. ಕಾರಖಾನೆಗಳೆಂದರೆ ಅವಶ್ಯಕ ಅನಿಷ್ಟ ಎಂದು ತಿಳಿಯಿರಿ’ ಎಂದು ಹೇಳುತ್ತಿದ್ದೆ” ಎಂದು ಅವರು ಅಭಿಪ್ರಾಯ ಪಟ್ಟರು. ವಿಸ್ಮಯವಾಗಿ ಇದು ಇಷ್ಟವಾದ ಮಾತಾಗಿರಲಿಲ್ಲ. ಆದುದರಿಂದ ನಿಮ್ಮ ಉಪಕಾರ ಬಹಳವಾಯಿತು ಎಂದು ಅವರಿಗೆ ಹೇಳಿ ಅವರನ್ನು ಮನೆಗೆ ಕಳಿಸಲಾಯಿತು.

ಭಾರೀ ಉದ್ಯೋಗಗಳಿಗೆ ದುರಸ್ತಿ ಮೊದಲಾದ ಸಹಾಯಕ್ಕಾಗಿ ಅವಶ್ಯವಾಗಿರುವ ಮಟ್ಟಿಗೆ ಮನೆ ಕೈಗಾರಿಕೆ ಉದ್ಯೋಗಗಳಿಗೆ ಪ್ರೋತ್ಸಾಹನೆ ಕೊಡತಕ್ಕದ್ದೆಂದು ಹೊಸದಿಲ್ಲಿಯಲ್ಲಿ ಕೂಡಿದ ಔದ್ಯೋಗಿಕ ಪರಿಷತ್ತಿನಲ್ಲಿ ವಿಚಾರ ಮಾಡಲಾಯಿತು.

ಮನೆ ಕೈಗಾರಿಕೆಗಳು ನಷ್ಟಕ್ಕೊಳಗಾಗಿ ಬಾಳತಕ್ಕದ್ದು ಎಂದು ಇದರಿಂದ ಗೊತ್ತಾಗುವದು; ಆದರೆ ಪರಿಸ್ಥಿತಿ ಇದಕ್ಕೆ ತೀರ ವಿರುದ್ಧವಾಗಿರತಕ್ಕದ್ದು ಎಂಬದನ್ನು ನಾವು ಇನ್ನೂ ಕಲಿಯಬೇಕಾಗಿದೆ. ಹಳ್ಳಿ ಕೈಗಾರಿಕೆಗಳಿಗೆ ಅವಶ್ಯವೆಂದು ಎನಿಸಿದಾಗಲೆ ಭಾರೀ ಕೈಗಾರಿಕೆಗಳನ್ನು ನಾವು ಕೈಕೊಳ್ಳಬಹುದು. ಜನತೆಯ ಔದ್ಯೋಗಿಕ ಆವಶ್ಯಕತೆಗಳನ್ನು ಪೂರಯಿಸುವದಕ್ಕಾಗಿ ಆವಶ್ಯಕ ಅನಿಷ್ಟವೆಂದು ಅವುಗಳನ್ನು ಇರಗೊಡತಕ್ಕದ್ದು. ಕಮ್ಮಾರನಿಗೆ ಬಂಡಿಗಳ ಟಾಯರಗಳಿಗೆ ಉಕ್ಕು ಬೇಕಾದರೆ ಉಕ್ಕಿನಗಿರಣಿಗಳು ಅದನ್ನು ಒದಗಿಸತಕ್ಕದ್ದು. ಹಳ್ಳಿ ಕೈಗಾರಿಕೆಗಳು ಜನಸಾಮಾನ್ಯದ ಅತ್ಯಾವಶ್ಯಕ ಆಹಾರ ಪದಾರ್ಥಗಳಾಗಿವೆ; ಭಾರೀ ಉದ್ಯೋಗಗಳು ವಿಷದಂತಿದ್ದು ಕೆಲಸಲ ಔಷಧವೆಂದು ತೆಗೆದುಕೊಳ್ಳಲು ಉಪಯೋಗ ಬೀಳುವುವು. ನಾವು ಅಫು ಇಲ್ಲವೆ ಕ್ವಿನಾಯಿನ್‌ದಿಂದ ಬಾಳಲಾರೆವು; ಆದರೆ ರೋಗಿಗೆ ಅವಶ್ಯಕವಾಗಿರುವಾಗ ನಿರ್ದಿಷ್ಟ ಪ್ರಮಾಣದಲ್ಲಿ ಮಾತ್ರ ಅವನ್ನು ತೆಗೆದುಕೊಳ್ಳಬಹುದು.

ಯಾವ ಶಕ್ತಿಯನ್ನು?

ಹೆಚ್ಚು ಹೆಚ್ಚು ಉತ್ಪಾದನೆಯನ್ನು ಮಾಡುವದಕ್ಕಾಗಿ ಉದ್ದಿಮೆದಾರರು ಎಷ್ಟೆಷ್ಟೋ ಯೋಜನೆಗಳನ್ನು ಮಾಡುತ್ತಿರುವರು. ಇದಕ್ಕಾಗಿ ಯೋಗ್ಯ ಪರಿಸ್ಥಿತಿಯನ್ನು ನಿರ್ಮಿಸಲು ಅವರು ಸರಕಾರದ ಸಹಾಯವನ್ನು ಅಪೇಕ್ಷಿಸುತ್ತಾರೆ ಮತ್ತು ಪರದೇಶಗಳಿಂದ ಕೋಟ್ಯಾವಧಿ ರೂಪಾಯಿಗಳ ಯಂತ್ರಗಳನ್ನು ತರಿಸಿಕೊಳ್ಳುವುದಕ್ಕೂ ಅವರಿಗೆ ಸರಕಾರದ ಸಹಾಯ ಅವಶ್ಯ. ಕೋಟ್ಯವಧಿ ಯಂತ್ರಗಳು ನಮ್ಮ ಮನೆಗಳ ಮುಂದೆಯೆ ಉಪಯೋಗಿಸಲ್ಪಡದೆ ಬಿದ್ದುಕೊಂಡಿವೆ ಎಂಬಮಾತು ಅವರಿಗೆ ಸ್ವಲ್ಪ ತಿಳಿಯದಂತಾಗಿದೆ. ಅವುಗಳ ಉಪಯೋಗ ಮಾಡಿಕೊಳ್ಳಲಿ ಮಾಡಿಕೊಳ್ಳದಿರಲಿ ಅವುಗಳಿಗೆ ಆಹಾರ ಬೇಕೇ ಬೇಕಾಗುವದು. ಪ್ರತಿಯೊಬ್ಬ ಮಾನವಪ್ರಾಣಿಯೂ ಒಂದು ಯಂತ್ರ; ಅವನಿಗೆ ಕೆಲಸ ಬೇಕೇಬೇಕು. ಅವನಿಗೆ ಆಹಾರವನ್ನು ಕೊಟ್ಟು ಜೀವಂತ ಇಡಲಿಕ್ಕೆ ಬೇಕಾಗುವದು. ಈ ಯಂತ್ರದ ಉಪಯೋಗ ಮಾಡಿಕೊಳ್ಳುವದು ಹೆಚ್ಚು ಲಾಭಕರವೋ ಇಲ್ಲವೆ ಇದಕ್ಕೆ ಯಾವಾಗಲೂ ಆಹಾರ ಒದಗಿಸಿ ಇವನ್ನು

—೯ನೆಯ ಪುಟಕ್ಕೆ

ಸಾರ್ವಜನಿಕ ವಾಹನಗಳು

ಮಾನವತೆಯ ದೃಷ್ಟಿಯಿಂದ ಮದ್ರಾಸ ಸರಕಾರದವರು ರಿಕ್ಷಾ ವಾಹನಗಳನ್ನು ಪ್ರತಿಬಂಧಿಸಲಿರುವರೆಂದು ಸುದ್ದಿ ಪ್ರಸಿದ್ಧವಾಗಿದೆ. ಹೊಟ್ಟೆ ಹೊರೆದುಕೊಳ್ಳುವುದಕ್ಕಾಗಿ ಮನುಷ್ಯನನ್ನು ಭಾರ ಹೊರುವ ಪಶುಗಳಂತೆ ಭಾವಿಸುವಷ್ಟು ಅಧೋಗತಿಗೆ ನಾವಿಳಿದಿರುವೆವು. ಉಳಿದ ಪ್ರಾಂತಗಳೂ ಇದೇ ಬಗೆಯ ಪ್ರತಿಬಂಧ ಹಾಕುವವಾಗಿ ಆಶಿಸುತ್ತೇವೆ.

ಸ್ಥಳೀಯ ವಾಹನ ಸೌಕರ್ಯವನ್ನೇರ್ಪಡಿಸುವ ಅವಕಾಶವನ್ನು ಜನಸಾಮಾನ್ಯಕ್ಕೆ ಬಿಟ್ಟುಗೊಡುತಕ್ಕದ್ದು. ಟಾಂಗಾ ಮತ್ತು ಜಟಕಾಗಳನ್ನು ತೆಗೆದು ಹಾಕಿ ಬಸ್ಸುಗಳನ್ನೇರ್ಪಡಿಸುವದು ಲಾಭಕರವಾದುದಲ್ಲ. ಟಾಂಗಾಗಳನ್ನು ಸಿದ್ಧಪಡಿಸುವ ಹೋರೆ ಲಾಹೋರಿನಲ್ಲಿ ಒಳ್ಳೆ ಸುಸ್ಥಿತಿಯಲ್ಲಿದೆ. ಪೇಶಾವರ ಮತ್ತು ಉಳಿದ ಇಂಥ ನಗರಗಳಲ್ಲಿಯೂ ಈ ಉದ್ಯೋಗವು ಪ್ರಗತಿಪಥದಲ್ಲಿದೆ. ಇವುಗಳಿಗಾಗಿ ವೆಚ್ಚ ಮಾಡುವ ಪ್ರತಿಯೊಂದು ಪೈಯೂ ದೇಶದಲ್ಲೆಲ್ಲ ಹಂಚಲ್ಪಟ್ಟು ಸಾವಿರಾರು ಮನೆಗಳಿಗೆ ಆಹಾರ ಮತ್ತು ಬಟ್ಟೆಯನ್ನು ಒದಗಿಸುತ್ತದೆ. ಅದೇ ರೀತಿಯಾಗಿ ಕುದುರೆಗಳನ್ನು ಕಟ್ಟುವುದರಿಂದ ಹೆಂಗಸರು ಮತ್ತು ಮಕ್ಕಳನ್ನೊಳಗೊಂಡು ಸಾವಿರಾರು ಜನರಿಗೆ ಉದ್ಯೋಗ ದೊರೆಯಲು ಅವಕಾಶ ಉಂಟಾಗುತ್ತದೆ. ಅದರೆ ತದ್ವಿರುದ್ಧವಾಗಿ ಬಸ್ಸುಗಳ ಓಡಾಟದಿಂದ ಹೊರಗಿನವರಿಗೆ ಮಾತ್ರ ಉದ್ಯೋಗ ದೊರೆಯುತ್ತದೆ; ಮೋಟಾರುಗಳಿಗಾಗಿ ಲಕ್ಷಗಟ್ಟಲೆ ರೂಪಾಯಿಗಳನ್ನು ವ್ಯಯ ಮಾಡಲಾಗುತ್ತದೆ. ಉರುವಲು ಮತ್ತು ಯಂತ್ರೋಪಕರಣಗಳಿಗಾಗಿಯೂ ಹಣದ ಸೂರೆ. ಅವುಗಳಿಂದ ಕೇವಲ ಕೆಲವು ಡ್ರಾಯವರರು ಮತ್ತು ಕ್ಲೀನರರಿಗೆ ಮಾತ್ರ ಉದ್ಯೋಗ ಸಿಕ್ಕುವುದು. ಪೆಟ್ರೋಲು ಅಂತರ್‌ರಾಷ್ಟ್ರೀಯ ಬೇಡಿಕೆಯ ವಸ್ತುವಾಗಿದ್ದುದರಿಂದ ರಾಷ್ಟ್ರರಾಷ್ಟ್ರಗಳಲ್ಲಿನ ತಿಕ್ಕಾಟದ ಮುಖ್ಯ ಪದಾರ್ಥ ಅದು ಆಗುವದಲ್ಲದೆ ಜಾಗತಿಕ ಯುದ್ಧಗಳ ಕೇಂದ್ರ ಬಿಂದುವೂ ಆಗುವದು. ಆದುದರಿಂದ ಯಾಂತ್ರಿಕ ವಾಹನ ಸಾಧನಗಳಿಗೆ ಮನಸೋಲುವ ಮೊದಲು ನಾವು ಇದೆಲ್ಲದರ ಬಗ್ಗೆ ಎಚ್ಚರಾಗುವದು ಉಚಿತವಾಗಿದೆ.

ಈ ಅಲ್ಪಾವಧಿಯಲ್ಲಿಯೇ ಅನೇಕ ವಾಹನ ಸೌಕರ್ಯ ಸಂಸ್ಥೆಗಳು ಗುತ್ತಿಗೆ ಹಿಡಿದ ಸಂಸ್ಥೆಗಳಾಗಿ ಪರಿಣಮಿಸಿವೆ. ಇದು ನಮ್ಮನ್ನೆಲ್ಲ ಆವರಿಸುವ ಮೊದಲು ಈ ಗಂಡಾಂತರದಿಂದ ರಕ್ಷಿಸಿಕೊಳ್ಳುವದು ಅವಶ್ಯವಾಗಿದೆ. —ಜೆ. ಸಿ. ಕು.

ಜೂಜು ಮತ್ತು ಸೆಣಸಾಟ

ಕುದುರೆ ಜೂಜಾಟದಲ್ಲಿ ನಡೆಯುವ ಜೂಜು ಮತ್ತು ಸೆಣಸಾಟಗಳ ಬಗ್ಗೆ ಕರುಣಾಜನಕ ಪತ್ರ ಒಂದನ್ನು ಮದ್ರಾಸದ ಓರ್ವ ಮಿತ್ರರು ಬರೆದಿದ್ದಾರೆ. ಜೂಜುಗಾರಿಕೆ ನಿಂತು ಹೋದರೆ ಕುದುರೆಯ ಪಂದ್ಯಾಟವು ಬಹುತರವಾಗಿ ಕುಸಿದು ಬೀಳುವದು. ಕುದುರೆಯ ನಾಗಂಗದ ಲೋಲುಪತೆಯ ಸಲುವಾಗಿ, ಕುದುರೆಯ ಪಂದ್ಯಾಟಗಳನ್ನು ನೋಡುವದಾಗಲಿ ಇದಕ್ಕೆ ಅಂಟಿಬರುವ ಇನ್ನುಳಿದ ಉದ್ರೇಕಗಳಾಗಲಿ ತೀರ ಅನಾವಶ್ಯಕವೇ. ಈ ಪಂದ್ಯಾಟಗಳು ಮಾನವಕುಲದ ದುಷ್ಟ ವೃತ್ತಿಗಳನ್ನು ಇನ್ನಷ್ಟು ಕೆರಳಿಸುತ್ತವೆಯಲ್ಲದೆ ಧನದ ಸದ್ವಿನಿಯೋಗಕ್ಕೆ ಆತಂಕವಾಗಿ ಫಲಪ್ರದ ಭೂಮಿಯ ದುರುಪಯೋಗವಾಗಿ ಪರಿಣಮಿಸುವವು. ರೇಸಕೋರ್ಸಿನ ಜೂಜುಗಾರಿಕೆಯ ಫಲವಾಗಿ ವಿನಷ್ಟರಾಗಿ ಹೋದ ಎಷ್ಟೋ ಒಳ್ಳೆಯ ಜನರನ್ನು ನನ್ನಂತೆ ಅನೇಕರು ಕಂಡಿರಲಾರರೆ? ಪಾಶ್ಚಿಮಾತ್ಯರ ಕೆಟ್ಟದ್ದನ್ನೆಲ್ಲ ಇನ್ನು ತೊರೆದು ಅವರ ಅನುಕರಣೀಯ ಅಂಶವನ್ನಷ್ಟೇ ಎತ್ತಿಕೊಳ್ಳುವ ಕಾಲವಿದು.

ಹೊಸದಿಲ್ಲಿ ಮೋ. ಕ. ಗಾಂಧಿ
೧೩—೧—೪೮

ಧರ್ಮ ಮತ್ತು ವಿಜ್ಞಾನ

ಆಧುನಿಕ ಪಾಶ್ಚಾತ್ಯ ವಿಚಾರವು ವಿಜ್ಞಾನದಿಂದ ಪ್ರಭಾವಗೊಂಡಂತೆ ಬೆಳೆಯುವ ಚಿಂತನವು ಧರ್ಮದಿಂದ ಬೇರ್ಪಡಿತವಾಗಿದೆ. ಎರಡನೆಯದಾಗಿ ಎಲ್ಲ ಮತ ತತ್ವಗಳಿಗೂ ಇತಿಹಾಸಭೂತಗಳೆನಿಸಿದ ಎಲ್ಲ ಮಹಾ ವ್ಯಕ್ತಿಗಳಿಗೂ ಬೆಲೆಯುಳ್ಳ ಸ್ಥಾನವಿಲ್ಲ. ಆಸ್ತಿಕರು ಧರ್ಮಕ್ಕೆಂದು ತಿಳಿದು ಹೋರಾಡುವರ ಗುಂಪುಗಳೆಂದರೆ ಹಿಂದು, ಮುಸಲ್ಮಾನ, ಯಹೂದಿ, ಕ್ರಿಶ್ಚಿಯನ, ಬೌದ್ಧ ಮತ್ತು ರೋಮನ್ ಕ್ಯಾಥೊಲಿಕ ಮತದ ವೈಯಕ್ತಿಕ, ಸಾರ್ವಜನಿಕ ಮತ್ತು ಸಾಮಾಜಿಕ ಜೀವನವು ಬಹುವಾಗಿ ನಿಯಂತ್ರಿತವಾಗಿದೆ. ಪ್ರತಿಯೊಂದು ಧರ್ಮದ ಅನುಯಾಯಿಗಳೂ ತಾವು ಇರುವ ಪ್ರತಿಯೊಂದು ಹೆಜ್ಜೆಯಲ್ಲೂ ತಮ್ಮ ಧಾರ್ಮಿಕ ಸಂಹಿತೆಯು ಮಾಡಿದ್ದನ್ನೇ [illegible] ಬೇಕೆಂದು ಬಯಸುತ್ತಾರೆ.

ಕಾಲಕಳೆದ ಹಾಗೆ, ಪ್ರತಿಯೊಂದು ಧಾರ್ಮಿಕ ಶ್ರದ್ಧಾ ಪದ್ಧತಿಯು ಒಬ್ಬರಿಂದೊಬ್ಬರ ಅಧಿಕಾರ ಪಟ್ಟವನ್ನು ವಹಿಸುತ್ತಾರೆ. ಅತಿ ಸಂಕುಚಿತ ಮನೋವೃತ್ತಿಯವರಾಗುತ್ತಾರೆ; ಆತನ ಪ್ರತ್ಯೇಕ ಸ್ವಭಾವದ ತರವಾಗಿ ಬದಲಾದ ಯುಗಗಳ ಸ್ಥಿತಿ ಸ್ಥಾಪಕ ಸಂಬಂಧದಿಂದ ದೂರ ಉಳಿಯುತ್ತಾರೆ; ತಿದ್ದಿ ಆಗ್ನ ಮುರಿದು ಅನುಯಾಯಿಗಳನ್ನು ಒತ್ತಾಯದಿಂದ ಸೇರಬಲ್ಲದು, ತನ್ನ ಅಸ್ತಿತ್ವಕ್ಕಾಗಿಯೇ ಅದನ್ನು ಭ್ರಷ್ಟಗೊಳಿಸುತ್ತಾರೆ.

ಎಲ್ಲವರಲ್ಲೂ ಪಂಚೇಂದ್ರಿಯಾತೀತವಾದ ಯಾವುದೋ ಒಂದು ಪದಾರ್ಥದ ಸದಾವ್ಯಕ್ತ ಪ್ರಭಾವಕ್ಕೆ ಮಾನವ ಸಿಕ್ಕಿದ್ದಾನೆ- ಎಂಬ ಭಾವನೆಯು ಸರಿಯಾಗಿಯೇ ಮುಖ್ಯವೆನಿಸಿದೆ. ಆಳವಿ ಚಿತಾಲುಗಳನ್ನು ಮೀರಿ ಉಳಿವ ಅತ್ಯತತ್ವವನ್ನು ಭೌತಿಕ ಶರೀರವು ಅವಲಂಬಿಸಿದೆ. ಇದು ಅನುಭವಸತ್ತ ಮಾನವನ ಮನ ಒಲಿವಂತೆ ಮಾಡುತ್ತದೆ. ಕೆಲವು ಮಾನವ ಕುಲಗಳಲ್ಲಿ ಮತ್ತು ಕೆಲವು ಕಾಲಮಾನಗಳಲ್ಲಿ ಈ ಒಲಿತ ಅತಿಯಾಗಿ ಅದೇ ಒಂದು ರೋಗವಾಗಿ ಪರಿಣಮಿಸುವ ವರೆಗೂ ಹೋಯಿತು. ಇದು ನಮ್ಮ ದೌರ್ಬಲ್ಯ ಮತ್ತು ಮುಖ್ಯಾಮುಖ್ಯ ವಿವೇಕಭಾವಗಳಿಂದ ಉಂಟಾಯಿತು.

ಇದಕ್ಕೆ ವಿರುದ್ಧವಾಗಿ, ಪಡುವಲಲ್ಲಿ ಅತೀಂದ್ರಿಯ ಪದಾರ್ಥಗಳೊಡನೆ ಸಂಬಂಧವನ್ನು ಹೆಚ್ಚು ಹೆಚ್ಚಾಗಿ ಕಡಿದುಕೊಂಡು ದೂರದೂರ ಹೋಗುವುದೇ ಇತ್ತೀಚಿನ ವರೆಗೂ ಮುಂಬರಿದ ವಿಚಾರ ವಾಹಿನಿಯ ಲಕ್ಷಣವಾಗಿತ್ತು. ಇದಕ್ಕೆ ಅಪವಾದವೆಂದರೆ, ಕೆಲವು ಆಧ್ಯಾತ್ಮಿಕ ಅದೃಶ್ಯ, ಅಸ್ಪೃಶ್ಯ ಭಾವಗಳು. ಅವು ಮಾತ್ರ ಹೇಗೋ ಕಾರ್ಯವೃತ್ತಿಯ ವಿಜ್ಞಾನ ಶಾಸ್ತ್ರಗಳ ಮೂಲವೆನಿಸಿವೆಯಲ್ಲದೆ, ಯಾವಾಗಲೂ ಅಧಿಭೌತಿಕ ಮತ್ತು ಅಧ್ಯಾತ್ಮಿಕ ಪದಾರ್ಥಗಳ ಅವಿಭಾಜ್ಯ ಸಂಬಂಧದ ಸ್ಥಾನಕಗಳಾಗಿಯೂ ಉಳಿದಿವೆ. ಪಾಶ್ಚಾತ್ಯ ವಿಚಾರ ಸರಣಿಯಾದರೋ ಮತ್ತೊಂದು ವಿರುದ್ಧ ಪಥ ಹಿಡಿದಿದೆ: ಅತ್ಯಾನುಭವಿಕತೆಯಿಂದ ಅತ್ಯೈಹಿಕತೆಗೆ ಸಾಗಿ, ಮಹತ್ವವಾದ ಮನೋರೋಗವನ್ನುಂಟು ಮಾಡಿ ಕಳೆದ ಎರಡು ಐತಿಹಾಸಿಕ ಮಹಾಯುದ್ಧಗಳಿಗೆ ಕಾರಣವಾದದ್ದಲ್ಲದೆ ಅವಶ್ಯ ಮುಗ್ಧವಾದ ಕ ನೆಸುದು ಬಲಿಬೇಡಿಕೆಯನ್ನೂ ಹಾಕುತ್ತಿದೆ.

ಹಾಗಾದರೆ ಏತಿಮಧ ವಿಚಾರ ಪ್ರಣಾಲಿಯಲ್ಲಿ ಬೇಳಕೊಳ್ಳುವಷ್ಟು ಏಕಮುಖ್ಯವೇನಾದರೂ ಇದೆಯೋ ಅಥವಾ ಇಲ್ಲವೋ ಎಂಬುದನ್ನು ಕಂಡುಹಿಡಿಯಬೇಕಾದರೆ, ನಾವು ಬಹುವಾಗಿ ಧಾರ್ಮಿಕ ವಿಚಾರಗಳತ್ತಲೇ ಗಮನ ಕೊಡತಕ್ಕದ್ದು. ಏಕೋದ್ಯ ವಿಚಾರಪ್ರಸ್ಥಾನದಲ್ಲಿ ಏಕಮುಖ್ಯವೇನಾದರೂ ಇದೆಯೋ ಇಲ್ಲವೆ ಇಲ್ಲವೋ ಎಂಬುದನ್ನು ಶೋಧಿಸಬೇಕಾದರೆ, ನಾವು ಮುಖ್ಯವಾಗಿ ವಿಜ್ಞಾನದ ವಿವಿಧ ಶಾಖೆಗಳಿಗೆ ತಮ್ಮ ಜೀವಿತವನ್ನು ಮುಡಿಪಾಗಿಟ್ಟವರ ಅಭಿಪ್ರಾಯಗಳನ್ನು ಹೋಲಿಸುವೆವು.

ಮೇಲೆ ಮೇಲೆ ನೋಡಿದರೆ, ಪಾಶ್ಚಾತ್ಯ ವೈಜ್ಞಾನಿಕ ವಿಚಾರದ ಪಕ್ಷವು ಸುಪ್ರಸಿದ್ಧವೆಂದೂ ಪ್ರಾರಬ್ಧ, ಧಾರ್ಮಿಕ ವಿಚಾರ ಅಷ್ಟೇ ಸ್ಪಷ್ಟವಾದ ಕಟ್ಟು ಕಳೆಯೆಂದೂ ತೋರದಿರದು. ನಿಜವಾಗಿ ನೋಡಿದರೆ, ಧರ್ಮಕ್ಕೆಷ್ಟಿದೆಯೋ ಅಷ್ಟೇ ಕರ್ಮಠತ್ವ, ಅಂಧಶ್ರದ್ಧೆ ಮತ್ತು ಜಡಬುದ್ಧಿಗಳು ವಿಜ್ಞಾನಕ್ಕೂ ಇವೆ; ಮತ್ತು ಮುಕ್ತ ಧರ್ಮವು ಸ್ವಚ್ಛಂದವು ಅದ ಅದು ಸಾಮ್ರಾಜ್ಯಶಾಹಿಯ ಮತ್ತು ನಿರ್ಭಯ ರಾಜತಂತ್ರದ ಸೇವಕನಾಗಿ, ಧಾರ್ಮಿಕ ಜಡಬುದ್ಧಿಗಿಂತ ಎಷ್ಟೋ ಪಾಲು ಹೆಚ್ಚು ಕೊಲೆಗಡುಕತನಕ್ಕೆ ಕಾರಣವಾಗಿದೆ. ಆದರೆ ಅಂತಹ ಎಲ್ಲ ಸಂಗತಿಗಳೂ ಮಾನವ ಸ್ವಭಾವದಲ್ಲಿಯ ದೌರ್ಬಲ್ಯಸೂಚಕಗಳಲ್ಲದೆ, ಸತ್ಯವಿಜ್ಞಾನದ ಇಲ್ಲವೆ ನಿಜಧರ್ಮದ ಫಲಗಳಲ್ಲ.

ಉಳಿದವರಂತೆ ಇಲ್ಲಿಯೂ ವಿಚಾರಕ್ಕೆ ಇಷ್ಟವೇ ಬೀಜ. ಐಕ್ಯವನ್ನು ಶೋಧಿಸಬಯಸುವವರು ಐಕ್ಯವನ್ನು, ಅನೈಕ್ಯವಾದಿಗಳು ಕೇವಲ ಅನೈಕ್ಯವನ್ನು ಕಾಣುವರು. ಧಾರ್ಮಿಕ ಮತ್ತು ವೈಜ್ಞಾನಿಕ ವಿಚಾರ ಪದ್ಧತಿಗಳೆರಡರಲ್ಲೂ ಮೂಲಭೂತ ಐಕ್ಯದ ಸತ್ಯತೆಯು ಬಾಹ್ಯ ವೈವಿಧ್ಯದ ಮರೆಯಲ್ಲಿ ಅಡಗಿ ನಿಂತಿದೆ. ಯಾವ ಎರಡು ಮುಖಗಳೂ ಸರಿಯಾಗಿ ಒಂದರಂತೊಂದು ಹೋಲವು. ಯಾವ ಇಬ್ಬರ ಮನಸ್ಸೂ ಸಮ ಸ್ವರೂಪವೆನಿಸದು. ಆದರೆ, ಹಾಗಿದ್ದರೂ ಎಲ್ಲ ಮಾನವ ಮುಖ, ಭಾವನೆ ಮತ್ತು ಚಿಂತನಗಳಲ್ಲಿ ಸಾಮಾನ್ಯವೂ ಸ್ಥೂಲವೂ ಆದ ಒಂದು ಸಾಹಚರ್ಯವಿದೆ. ಇದೊಂದೇ ಪರಸ್ಪರರನ್ನು ಅರಿಯಲೂ ಒಟ್ಟಿಗೆ ಒಂದು ನಾಗರಿಕ ಸಮಾಜವಾಗಿ ಬಾಳಲೂ ಮಾನವರಿಗೆ ಸಾಧ್ಯವಾಗಿ ಮಾಡಿಕೊಡುತ್ತದೆ.

ಧಾರ್ಮಿಕ ಘರ್ಷಣದಿಂದ ಜುಗುಪ್ಸೆಹೊಂದಿದ ಕೆಲವರು ಸಂಪೂರ್ಣವಾಗಿ ಧರ್ಮವನ್ನು ಕಿತ್ತೊಗೆಯಬೇಕೆಂದು ಹೇಳುತ್ತಾರೆ.

ಹಾಗೆನ್ನುವವರು ರೋಗ ನಾಶ ಮಾಡಲು ಇಡೀ ದೇಹವನ್ನೇ ಕೊಲ್ಲಬೇಕೆಂಬವರಾಗುತ್ತಾರೆ. ಮನುಷ್ಯರು ದುಃಖ ಮತ್ತು ಸಾವುಗಳನ್ನು ಅನುಭವಿಸುತ್ತಿರುವವರೆಗೆ ಅವರೆಂದೂ ಧರ್ಮದ ಸಮಾಧಾನವನ್ನು ತೀವ್ರವಾಗಿ ಅಪೇಕ್ಷಿಸದಿರರು; ಮತ್ತು ಮೂಲಭೂತ ತತ್ವಗಳಲ್ಲಿ ಸಹ ಧರ್ಮಗಳು ಬೇರೆಬೇರೆಯಾಗಿರುತ್ತವೆಂದು ಸ್ತ್ರೀ ಪುರುಷರಿಗೆ ಕಲಿಸುತ್ತಿರುವವರೆಗೆ ಅವರು ಅವರವರ ಧರ್ಮದ ಹೆಸರಿನಲ್ಲಿ ಪರಸ್ಪರರ ರಕ್ತವನ್ನು ಸುರಿಸಿಯೇ ಸುರಿಸುತ್ತಾರೆ. ಹಾಗಲ್ಲದೆ ಎಲ್ಲ ಧರ್ಮಗಳೂ ಸಾರದಲ್ಲಿ ಒಂದೇ ಎಂಬುದನ್ನು ಅವರಿಗೆ ತೋರಿಸಿ ಕೊಟ್ಟರೆ ಅವರೆಲ್ಲರೂ ಹೃದಯದಲ್ಲಿ ಒಂದಾಗಿ ಪ್ರೇಮಮಯ ಭ್ರಾತೃತ್ವದಲ್ಲಿ ತಮ್ಮ ಸಾಮಾನ್ಯ ಮಾನವತೆಯನ್ನು ಅರಿತುಕೊಳ್ಳುತ್ತಾರೆ. ಅದೇ ರೀತಿಯಲ್ಲಿ ಧರ್ಮ ಮತ್ತು ವಿಜ್ಞಾನಗಳಲ್ಲಿ ಅಂಥ ಐಕ್ಯವನ್ನು ತಂದರೆ, ಅದು ಹೊಸದೊಂದು ಉದಾರಯುಗದ ಪ್ರಾರಂಭವನ್ನು ಗುರುತು ಮಾಡುತ್ತದೆ. ಆ ಯುಗವೆಂದರೆ ವೈಜ್ಞಾನಿಕಧರ್ಮ ಮತ್ತು ಧಾರ್ಮಿಕ ವಿಜ್ಞಾನದ ಮಾರ್ಗದರ್ಶನದಲ್ಲಿ ನಡೆವಂಥದು. ಆಗ ಧರ್ಮವು ಅಂಧಶ್ರದ್ಧಾಮುಕ್ತವೂ ವಿಜ್ಞಾನವು ಆಧ್ಯಾತ್ಮಿಕ ಮತ್ತು ದೈವನಿಷ್ಠವೂ ಎನಿಸುತ್ತದೆ.

ಇತಿಹಾಸದಲ್ಲಿ ಹೊಸ ಧರ್ಮವೊಂದರ ಹುಟ್ಟು ಯಾವಾಗಲೂ ಸಾರಭೂತವಾದ ವಿಶ್ವಧರ್ಮದ ಪುನರುದ್ಘೋಷ ರೂಪದ್ದೇ ಆಗಿದೆ. ಅದಕ್ಕೆ, ಹಿಂದಿನ ಘೋಷಣವು ಅಮುಖ್ಯ, ಜಡ, ಅಪಮಾರ್ಗದರ್ಶಕ, ಅಪಾಯಕರ ಭಾವನೆಗಳಿಂದ ಗುರುತು ಸಿಗದಷ್ಟು ವ್ಯಾಪ್ತವಾಗಿರುವುದೇ ಕಾರಣ. ಇಂದು ಅಗತ್ಯವಿರುವ ಹೊಸ ಘೋಷಣವು ಬಹುವಾಗಿ ವೈಜ್ಞಾನಿಕ ಧರ್ಮದ ರೂಪ ತಾಳಬಹುದು; ಅದನ್ನು ವೈಯಕ್ತಿಕ ಮಾರ್ಗದಲ್ಲಲ್ಲದೆ, ಸಾಧಾರಣವಾಗಿ ಸಾಮಾನ್ಯವಾದ ಮತ್ತು ಪ್ರಜಾಸತ್ತೆಯ ತತ್ವಗಳಿಗನುಗುಣವಾಗಿ ರೂಪಿಸಬೇಕಾಗಿದೆ: ಅಂದರೆ, ಒಬ್ಬ ವ್ಯಕ್ತಿ ಮಾಡದೆ, ನಿಧಾನವಾಗಿ ಈಗ ಆಗುತ್ತಿರುವಂತೆ, ಬಹು ಸಂಖ್ಯೆಯ ವೈಜ್ಞಾನಿಕ ಮತ್ತು ಧಾರ್ಮಿಕ ವಿಚಾರಪರರ ಸಹಕಾರದಿಂದಲೇ ಅದು ಸಿದ್ಧವಾಗಬೇಕು.

ಕೊನೆಯದಾಗಿ, ಹೀಗೆ ಧರ್ಮ ಮತ್ತು ವಿಜ್ಞಾನಗಳ ನಡುವಣ ಅಂತರವು ಕ್ರಮೇಣ ಕಡಿಮೆಯಾಗುತ್ತಿದೆಯೆಂಬುದನ್ನು ತೋರಿಸಲು ಇಂದಿನ ಕೆಲವು ಅತಿ ದೊಡ್ಡ ವಿಜ್ಞಾನಿಗಳ ಅಭಿಪ್ರಾಯಗಳನ್ನು ಕೊಡೋಣ: ೧೯೩೦ ರಲ್ಲಿ ಸರ್ ಅಲಿವರ್ ಲಾಜರು ಹೀಗೆಂದರು:—

"ನಿಜವಾದ ಸಂಗತಿಯೇನಂದರೆ, ನಮ್ಮ ಭೌತಿಕ ಜಗತ್ತಿನ ಮೇಲೆ ಆಧ್ಯಾತ್ಮಿಕ ಜಗತ್ತು ಅಧಿಕಾರ ನಡೆಸುತ್ತಿದೆ. ಅದೆಂದರೆ ಒಂದು ಮಹಾ ಸದಾತನ ಸತ್ಯ. ಅದರ ಶಕ್ತಿ ಸಾಮರ್ಥ್ಯಗಳನ್ನು ನಾವು ಈಗೀಗ ಅರಿತುಕೊಳ್ಳಲಾರಂಭಿಸಿದ್ದೇವೆ."

ಗ್ರೇಟ್ ಬ್ರಿಟನ್ನಿನ ರಾಯಲ್ ಸೊಸೈಟಿಯ ಕಾರ್ಯದರ್ಶಿಗಳಾದ ಸರ್ ಜೇಮ್ಸ್ ಜೀನ್ಸರು ಹೇಳುತ್ತಾರೆ.:

"ಜಡ ಪದಾರ್ಥಗಳ ಪ್ರಪಂಚದಲ್ಲಿ ಮನವೆಂಬುದು ಆಕಸ್ಮಿಕವಾಗಿ ತಲೆಹಾಕುವ ವಸ್ತುವಲ್ಲ. ನಾವೀಗ ಅದನ್ನು ಜಡ ಪ್ರಪಂಚದ ಕರ್ತೃ ಮತ್ತು ಧರ್ತೃ ಎಂದು ತಿಳಿದುಕೊಳ್ಳಬೇಕಾಗಿದೆ ಎಂಬ ಸಂಶಯವನ್ನು ತಾಳುತ್ತಲಿದ್ದೇವೆ. ಹಾಗೆಂದ ಕೂಡಲೆ ಅದು ನಮ್ಮ ವೈಯಕ್ತಿಕ ಮನವೆಂದು ತಿಳಿಯಕೂಡದು; ಭಾವದ ರೂಪದಲ್ಲಿರುವ, ನಮ್ಮ ವೈಯಕ್ತಿಕ ಮನಸ್ಸಿನ ಜನಕಗಳಾದ ಪರಮಾಣು

ಉಪವಾಸ ಪ್ರಾರಂಭಿಸಿದ ಬಗ್ಗೆ ಮಹಾತ್ಮರ ವಿವರಣ

ಹಿಂದು ಮುಸಲ್ಮಾನರ ಕ್ಯ ಸಾಧನೆ--ವಿನಾಶೋನ್ಮುಖ ಹಿಂದುಸ್ಥಾನದ ಉದ್ಧಾರ—ಕಾಂಗ್ರೆಸ್ಸಿನ ಶುದ್ಧೀಕರಣ--

ಮಹಾತ್ಮಾ ಗಾಂಧಿಯವರು ತಾ ೧೨ ರ ಸಂಜೆಯಲ್ಲಿ ಪ್ರಾರ್ಥನೆಯ ಸಭೆಯಲ್ಲಿ ಹಿಂದು ಮುಸಲ್ಮಾನ ಐಕ್ಯಕ್ಕಾಗಿ ನಾಳೆನಿಂದ ತಾವು ಅನಿಯಮಿತ ಅವಧಿಯ ವರೆಗೆ ಉಪವಾಸ ಕೈಕೊಳ್ಳಲಿರುವದಾಗಿ ಹೇಳಿದರು. ಅವರು ಉಪವಾಸದ ನಿರ್ಣಯ ಜಾಹೀರು ಮಾಡುತ್ತ ಈ ರೀತಿ ಹೇಳಿದರು.

'ಉಪವಾಸವನ್ನು ಆರೋಗ್ಯಕ್ಕಾಗಿ ಆರೋಗ್ಯ ನಿಯಮಗಳಿಗನುಸರಿಸಿಯೂ ಹಾಗೂ ನಡೆದ ಅನ್ಯಾಯ ಮತ್ತು ಅನ್ಯಾಯವೆಂದು ಎನಿಸಿದವುಗಳ ಪರಿಮಾರ್ಜನೆಗಾಗಿಯೂ ಮಾಡುವದುಂಟು. ಈ ಉಪವಾಸಗಳಲ್ಲಿ ಉಪವಾಸ ಮಾಡುವವನು ಅಹಿಂಸೆಯಲ್ಲಿ ವಿಶ್ವಾಸವುಳ್ಳವನಿರಬೇಕೆಂಬುದೇನೂ ಅವಶ್ಯವಿಲ್ಲ. ಆದರೆ ಸಮಾಜದಿಂದ ಆದ ಅನ್ಯಾಯದ ನಿಷೇಧಾರ್ಥವಾಗಿ ಅಹಿಂಸೆಯ ಭಕ್ತನು ಕೆಲವು ಸಾರೆ ಕೈಕೊಳ್ಳಲೇಬೇಕಾಗುವ ಇನ್ನೂ ಒಂದು ತರದ ಉಪವಾಸವುಂಟು. ಅಹಿಂಸೆಯ ಭಕ್ತನಾದ ಅವನು ಎರಡನೆ ಉಪಾಯ ಇಲ್ಲದಾಗ ಈ ಮಾರ್ಗವನ್ನು ಅವಲಂಬಿಸುವನು. ಅಂಥ ಪ್ರಸಂಗವು ಈಗ ನನಗೆ ಬಂದಿರುವದು.

ಸೆಪ್ಟಂಬರ ೯ಕ್ಕೆ ನಾನು ಕಲಕತ್ತೆಯಿಂದ ದಿಲ್ಲಿಗೆ ತಿರುಗಿ ಬಂದ ಕೂಡಲೆ ಪಶ್ಚಿಮ ಪಂಜಾಬಕ್ಕೆ ನಾನು ಹೋಗುವವನಿದ್ದೆ; ಆದರೆ ಅದು ಶಕ್ಯವಾಗಲಿಲ್ಲ. ದಿಲ್ಲಿಯು ನನಗೆ ಮಸಣದಂತೆ ಕಾಣಿಸಿತು. ಗಾಡಿಯಿಂದ ಇಳಿದ ಕೂಡಲೆ ಪ್ರತಿಯೊಬ್ಬರೂ ನಿಸ್ತೇಜವಾದುದು ನನಗೆ ಕಂಡುಬಂತು. ಸದಾ ವಿನೋದ ಹಾಗೂ ಆನಂದದಲ್ಲಿರುವ ಸರದಾರರೂ ಇದಕ್ಕೆ ಅಪವಾದವಿರಲಿಲ್ಲ. ಏನು ಕಾರಣವೆಂಬುದು ನನಗೆ ಗೊತ್ತಾಗಲಿಲ್ಲ. ಅವರು ನನ್ನನ್ನು ಸ್ವಾಗತಿಸಲು ಬಂದಿದ್ದರು. ಅವರು ಒಕ್ಕೂಟದ ರಾಜಧಾನಿಯಲ್ಲಿ ಗಲಭೆ ಸಂಭವಿಸಿದ ವಿಷಾದಕರ ಸುದ್ದಿಯನ್ನು ನನಗೆ ಕೂಡಲೆ ತಿಳಿಸಿದರು. ನನಗೆ ಆಗಲೆ ನಾನು ದಿಲ್ಲಿಯಲ್ಲಿಯೆ ಇರಬೇಕೆಂದೂ ಮಾಡಬೇಕು ಇಲ್ಲವೆ ಮಡಿಯಬೇಕೆಂದೂ ಎನಿಸಿತು.

ಪೋಲೀಸರು ಹಾಗೂ ಮಿಲಿಟರಿಯವರು ತತ್ಪರತೆಯಿಂದ ಉಂಟುಮಾಡಿದ ಶಾಂತಿಯು ತೋರಿಕೆಯದಿರುವದು; ಆದರೆ ಒಳಗೆ ಅಶಾಂತಿ ಕುದಿಯುತ್ತಿರುವದು. ಅದು ಯಾವದೇ ಕಾಲಕ್ಕೆ ಸ್ಫೋಟವಾಗಬಹುದು. ಹೀಗಿರುವದಾದರೆ "ಮಾಡು" ಎಂಬ ಪ್ರತಿಜ್ಞೆಯೇನೂ ಪೂರ್ಣವಾದಂತಲ್ಲ. ಅದೇ ನನ್ನನ್ನು ಅತುಲ ಮಿತ್ರನಾದ ಸಾವಿನಿಂದ ಉಳಿಸಬಲ್ಲದು. ನನಗೈಹಿಂದುಸೀಖ ಹಾಗೂ ಮುಸಲ್ಮಾನರಲ್ಲಿ ಹೃತ್ಪೂರ್ವಕ ಸ್ನೇಹ ಬೇಕಾಗಿದೆ. ಹಿಂದಕ್ಕೆ ಈ ರೀತಿ ಸ್ನೇಹವಿತ್ತು; ಆದರೆ ಈಗ ಇಲ್ಲದಂತಾಗಿದೆ. ನನ್ನ ಅಂತರಾತ್ಮವು ಬಹು ಕಾಲದಿಂದಲೂ ನನ್ನನ್ನು ಕರೆಯುತ್ತಿದ್ದರೂ ನಾನು ಅದು ಸೈತಾನನ ಅಂದರೆ ದೌರ್ಬಲ್ಯದ ಕರೆಯಿರಬೇಕೆಂದು ಕಿವಿ ಮುಚ್ಚಿಯೆ ಇದ್ದೆ. ಅಸಹಾಯಕತೆ ನನಗೆ ಎಂದೂ ಸೇರುವದಿಲ್ಲ. ಸತ್ಯಾಗ್ರಹಿಯು ಎಂದೂ ಅಸಹಾಯಕನಾಗನು, ಉಪವಾಸವೇ ಅವನ ಇಲ್ಲವೆ ಎರಡನೆಯವರ ಖಡ್ಗದ ಸ್ಥಳದಲ್ಲಿ ಅವನ ಕೊಲೆಯ ಅಸ್ತ್ರವಿರುವದು.

ನನ್ನನ್ನು ಪ್ರತಿ ದಿವಸ ಭೆಟ್ಟಿಯಾಗುತ್ತಿರುವ ಮುಸಲ್ಮಾನರಿಗೆ ಪ್ರತಿಯಾಗಿ ಹೇಳುವದು ಏನೂ ಇಲ್ಲ. ನನ್ನ ಹೇಡಿತನವು ಇತ್ತೀಚೆಗೆ ನನ್ನನ್ನು ಅಣಕಿಸಹತ್ತಿದೆ. ಉಪವಾಸ ಕೈಕೊಂಡ ಕೂಡಲೆ ಅದು ಹೋಗಿಬಿಡುವದು. ನಾನು ಕಳೆದ ಮೂರು ದಿನಗಳಿಂದ ಇದರ ಯೋಚನೆಯಲ್ಲಿಯೇ ಮಗ್ನನಾಗಿದ್ದೆ. ಕೊನೆಯ ನಿರ್ಣಯವು ಮಿಂಚಿನಂತೆ ಪ್ರಕಾಶಿಸಿ ನನಗೆ ಸಮಾಧಾನವಾಯಿತು. ಶುದ್ಧ ಮನುಷ್ಯನಲ್ಲಿ ಪ್ರಾಣಕ್ಕಿಂತ ಹೆಚ್ಚಿನದೇನೂ ಅರ್ಪಿಸಲು ಇರುವದಿಲ್ಲ. ನನ್ನ ಈ ಹೆಜ್ಜೆ ನ್ಯಾಯ್ಯವಾಗಿರುವದೆಂದು ತೋರಿಸಲು ನನ್ನಲ್ಲಿ ಅಶುದ್ಧತೆಯಿರುವದೆಂದು ಆಶಿಸಿದ್ದೇನೆ. ಈ ಪ್ರಯತ್ನವನ್ನು ನೀವೆಲ್ಲ ಆಶೀರ್ವದಿಸಬೇಕು ಹಾಗೂ ನನ್ನೊಡನೆ ಮತ್ತು ನನಗಾಗಿ ಪ್ರಾರ್ಥಿಸಬೇಕು.

ಉಪವಾಸವು ನಾಳಿನ ಮೊದಲನೆಯ ಊಟದ ವೇಳೆಯಿಂದ ಪ್ರಾರಂಭವಾಗುವದು. ಅವಧಿಯು ಅನಿಶ್ಚಿತವಿದ್ದು ನಾನು ಉಪ್ಪು ಹಾಗೂ ಲಿಂಬೆ ಹಣ್ಣಿನ ರಸ ಸಹಿತ ಇಲ್ಲವೆ ಹಾಗೆಯೆ ನೀರು ಕುಡಿಯಬಹುದು. ಹೊರಗಿನ ಒತ್ತಾಯವಿಲ್ಲದೆ ಆದರೆ ಕರ್ತವ್ಯವಿವೇಕದಿಂದ ಎಲ್ಲ ಸಮಾಜಗಳಲ್ಲಿ ಹೃತ್ಪೂರ್ವಕಐಕ್ಯವಾಗಿದೆಯೆಂದು ನನಗೆ ಸಮಾಧಾನಕರವಾಗಿ ತೋರಿದಾಗಲೇ ನನ್ನ ಈ ಉಪವಾಸ ಮುಗಿಯುವದು.

ಅವರು ಮತ್ತೂ ಹೇಳಿದ್ದೇನಂದರೆ— "ಈ ನನ್ನ ಉಪವಾಸದಿಂದ ಹಿಂದುಸ್ಥಾನದ ಕುಸಿದು ಬೀಳುತ್ತಿರುವ ನೈತಿಕ ವರ್ಚಸ್ಸು ಸ್ಥಿರವಾಗಬಹುದು. ಹಿಂದುಸ್ಥಾನವು ಏಶಿಯಾ ರಾಷ್ಟ್ರಗಳ ಹಾಗೂ ಜಗತ್ತಿನ ಅಂತಃಕರಣವನ್ನು ತನ್ನೆಡೆಗೆ ಸೆಳೆದುಕೊಳ್ಳಬಹುದು. ಹಿಂದುಸ್ಥಾನವು ತನ್ನ ಆತ್ಮವನ್ನು ಕಳೆದುಕೊಳ್ಳುವದರಿಂದ ದ್ವೇಷ, ಯುದ್ಧ, ಮೊದಲಾದ ಬಿರುಗಾಳಿಯಲ್ಲಿ ಸಿಕ್ಕ ಜಗತ್ತಿಗೆ ಮಾರ್ಗದರ್ಶನ ಮಾಡಬಲ್ಲ ರಾಷ್ಟ್ರವೇ ಇಲ್ಲದಂತಾಗುವದೆಂದು ನಾನು ಭಾವಿಸಿದ್ದೇನೆ.

ನನ್ನ ಗೆಳೆಯರೊ ವೈರಿಗಳೂ—ವೈರಿಗಳು ನನಗೆ ಯಾರಾದರೂ ಇದ್ದರೆ-ನನ್ನ ಈ ನಿರ್ಧಾರದ ಬಗ್ಗೆ ಕೋಪಿಸಿಕೊಳ್ಳಕೂಡದು. ಮನುಷ್ಯನ ಹೃದಯ ಪರಿವರ್ತನದಲ್ಲಿ ವಿಶ್ವಾಸವಿಲ್ಲದವರೂ ಉಪವಾಸದಿಂದ ಅದನ್ನು ಸಾಧಿಸುವ ರೀತಿಯನ್ನು ಒಪ್ಪದವರೂ ಆದ ನನ್ನ ಅನೇಕ ಮಿತ್ರರಿದ್ದಾರೆ. ಇಂಥ ಮಿತ್ರರು ತಮಗೆ ಕೃತಿ ಸ್ವಾತಂತ್ರ್ಯವಿರಬೇಕೆಂದು ಪ್ರತಿಪಾದಿಸುವಂತೆ

—೯ನೆಯ ಪುಟಕ್ಕೆ

ಗಳಿಗೆ ಆಕರವಾದ "ಮೂಲಮನ" ಎಂದು ತಿಳಿಯಬೇಕು."

೧೯೦೦ ರಲ್ಲಿ ಹರ್ಬರ್ಟ ಸ್ಪೆನ್ಸರನೆಂದ:

"ನನ್ನ 'ಅಗಮ್ಯ'ವು ಧರ್ಮದೊಡನೆ ಹೊಯ್ದಾಡದೆ ಅದನ್ನು ಸಮರ್ಥಿಸುತ್ತದೆ."

ಜಗತ್ತಿನ ಎಲ್ಲ ಧರ್ಮಗುರುಗಳೂ ಈ ಅಗಮ್ಯವಸ್ತುವೇ ನಮ್ಮ ಆತ್ಮ; ಅದು ವಿಶ್ವವ್ಯಾಪಿ, ವಿಶ್ವವೃತ್ತಿ, ಜೀವನದ ಪ್ರಬೋಧಕ ಪರಮತತ್ವ ಎಂದಿದ್ದಾರೆ.

೧೯೩೪ ರಲ್ಲಿ ಅಚ್ಚಾದ "ದಿ ಗ್ರೇಟ್ ಡಿಜೈನ" ಎಂಬ ಪುಸ್ತಕದಲ್ಲಿ ೧೪ ಜನ ಪ್ರಸಿದ್ಧ ವಿಜ್ಞಾನಿಗಳು ಒಕ್ಕೊರಲಿಂದ— ಜಗತ್ತು ಆತ್ಮರಹಿತವಾದ ಯಂತ್ರವಲ್ಲ, ಅದೊಂದು ಆಕಸ್ಮಿಕ ಘಟನೆಯಲ್ಲ; ಯಾವ ಹೆಸರನ್ನು ಬೇಕಾದರೂ ಕೊಡಿರಿ, ಜಡ ಪ್ರಪಂಚದ ಹಿಂದೊಂದು ಮುಸುಕಿನೊಳಗಿನ ಮನವಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಸದ್ಯದ ಶತಮಾನದ ಅತ್ಯುನ್ನತ ವಿಜ್ಞಾನಿಯಾಗಬಹುದಾದ ಅಲ್ಬರ್ಟ ಐನಸ್ಟೀನನು:

"ವಿಶ್ವದ ಕ್ರಮಬದ್ಧ ಸಮತೆಯಲ್ಲಿ ಪ್ರಕಟವಾದ ದೇವರಲ್ಲಿ ನಾನು ನಂಬಿಗೆಯಿಡುತ್ತೇನೆ. ಪ್ರಕೃತಿಯ ಎಲ್ಲೆಡೆಯಲ್ಲೂ ಬುದ್ಧಿಶಕ್ತಿಯು ವ್ಯಕ್ತವಾಗಿ ತೋರುತ್ತದೆಂದು ನನ್ನ ಮತ" ಎಂದಿದ್ದಾನೆ.

ಸರ್ ಆರ್ಥರ್ ಎಸ್ ಎಡ್ಡಿಂಗ್ಟನ್ ಹೇಳುವುದು ಹೀಗೆ:

"ಹಳೆಯ ನಾಸ್ತಿಕತೆ ಈಗಿಲ್ಲ; ಧರ್ಮವು ಮನಸ್ಸು ಮತ್ತು ಆತ್ಮಗಳಿಗೆ ಸೇರಿದ್ದು; ಆದುದರಿಂದ ಅದು ಅಕಂಪನೀಯ, ಸ್ಥಿರ ಎನಿಸಿದೆ"

ಎಲ್ಲ ದೊಡ್ಡ ವಿಜ್ಞಾನಿಗಳೂ ಈಗ ಪ್ರಾಣಿಪ್ರಪಂಚದಲ್ಲೆಲ್ಲ ಅಮೀಬದಿಂದ ಹಿಡಿದು ಮೇಲೆ ಸಸ್ಯ, ಕ್ರಿಮಿ ಇತ್ಯಾದಿಗಳವರೆಗೂ ನಮ್ಮ ಮನದಂತಹ ಒಂದು ಪದಾರ್ಥ ವಿದೆಯೆಂದು ಒಪ್ಪುತ್ತಾರೆ. ಬಾನ್, ಲೀಡನ್ ಲೀಪ್ಜಿಗ್ ಮತ್ತು ಲಂಡನ್ ವಿಶ್ವವಿದ್ಯಾಲಯಗಳಲ್ಲಿ ಮನಃಶಾಸ್ತ್ರಕ್ಕೆ ಸಂಬಂಧಿಸಿದ "ಸತ್ತವರ ಹೊತ್ತಗೆ" ಮತ್ತು ಭಾರತದ "ಯೋಗ ಇಲ್ಲವೆ ಸಾಕುಕ್"ಎಂಬ ವಿಷಯಗಳ ಬಗ್ಗೆ ಭಾಷಣ ಇಡಿಸುತ್ತಾರೆ.

ಧರ್ಮ ಮತ್ತು ವಿಜ್ಞಾನಗಳ ನಡುವಣ ಬೇಲಿಯನ್ನು ತೆಗೆದರೆ ಅದರೊಟ್ಟಿಗೇ ಧರ್ಮ ಧರ್ಮಗಳ ನಡುವಣ ಗೋಡೆಯನ್ನೂ ತೆಗೆಯಲು ಬರುತ್ತದೆ. ಆಗ ಕ್ರಮಶವಾಗಿ ದೇಶದಿಂದ ದೇಶವನ್ನು, ರಾಷ್ಟ್ರದಿಂದ ರಾಷ್ಟ್ರವನ್ನು ಬೇರೆ ಮಾಡುವ ಗಡಿಗಳನ್ನು ಅಳಿಸಿ ಬಿಡಬಹುದು. ಆಗಲೇ ಇಡೀ ಮಾನವ ಕುಲವೇ ಒಂದು ಭ್ರಾತೃಸಮೂಹ ಮತ್ತು ಸಂಯುಕ್ತಕುಟುಂಬ ಎಂದು ನಾವು ಅರಿತುಕೊಳ್ಳಬಹುದು, ಕಲ್ಪಿಸಿಕೊಳ್ಳಬಹುದು. ನಮ್ಮ ಎಲ್ಲ ತೊಂದರೆಗಳೂ ಬರಲಿರುವ ಆ ಹೊಸ ಹುಟ್ಟಿನ ಪ್ರಸವವೇದನೆಯೆಂದೇ ತಿಳಿಯಬೇಕು.

(ಡಾ. ಭಗವಾನದಾಸರ "ಸರ್ವ ಧರ್ಮಗಳ ಮೂಲಭೂತ ಐಕ್ಯ" ಎಂಬ ಪುಸ್ತಕದಿಂದ ಸಾರಾಂಶರೂಪವಾಗಿ ತೆಗೆದದ್ದು.)

ಹೊಸದಿಲ್ಲಿ —ಸುಂದರಲಾಲ

೫—೧—೪೮

ಕರ್ನಾಟಕ ಪ್ರಾಂತೀಯ ಕಾಂಗ್ರೆಸ ಸಮಿತಿಯ ಸಭೆ

ಪ್ರಾಂತೀಕರಣದ ಬಗ್ಗೆ ಮಹತ್ವದ ನಿರ್ಣಯ

ಭಾಷಾವಾರ ಪ್ರಾಂತ ರಚನೆಯ ಬಗ್ಗೆ ಹಿರಿಯೋಲಗದಲ್ಲಿ ತಾ. ೨೭—೧೧—೪೭ನೇ ದಿನ ಮುಖ್ಯ ಮಂತ್ರಿಗಳಾದ ಪಂಡಿತ ಜವಾಹರಲಾಲ ನೆಹರೂರವರು ಶ್ರೀ. ರಂಗಾ ಅವರ ಪ್ರಶ್ನೆಗೆ ಉತ್ತರ ಕೊಡುತ್ತ ಆಂಧ್ರ ಪ್ರಾಂತಕ್ಕೆ ಮಾತ್ರ ಪ್ರತ್ಯೇಕ ಪ್ರಾಂತದ ಆಶ್ವಾಸನ ಕೊಟ್ಟು ಉಳಿದವುಗಳ ಮುಖ್ಯವಾಗಿ ಕರ್ನಾಟಕದ ಪ್ರಶ್ನೆಯನ್ನು ಹಿಂದೂಡಿದ ಬಗ್ಗೆ ಪ್ರಾಂತದಲ್ಲಿ ಉಂಟಾದ ಪರಿಸ್ಥಿತಿಯನ್ನು ಅವಲೋಕಿಸಿ ಮುಂದಿನ ಕಾರ್ಯಕ್ರಮ ಕೈಕೊಳ್ಳಲು ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಸಮಿತಿಯ ವಿಶೇಷ ಸಾಧಾರಣ ಸಭೆಯು ತಾ. ೧೪ ಕ್ಕೆ ಹುಬ್ಬಳ್ಳಿಯಲ್ಲಿ ಕೂಡಿತ್ತು.

ಸಭೆಯು ೪ ಗಂಟೆಗೆ ಅಧ್ಯಕ್ಷರಾದ ಶ್ರೀ. ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಗಿ ಒಟ್ಟು ೫ ತಾಸಿನ ವರೆಗೆ ಚರ್ಚೆ ನಡೆದು ಒಕ್ಕೂಟ ಸರಕಾರ, ಕಾಂಗ್ರೆಸ ವರಿಷ್ಠರು ಹಾಗು ಘಟನಾ ಸಮಿತಿಗಳ ಮುಂದೆ ಪ್ರಾಂತಾಧ್ಯಕ್ಷರು ಒಂದು ಶಿಷ್ಟ ಮಂಡಳ ತೆಗೆದುಕೊಂಡು ಹೋಗಿ ಜವಾಹರಲಾಲರ ಹೇಳಿಕೆಯಿಂದ ಕನ್ನಡಿಗರಲ್ಲಿ ಉಂಟಾದ ಅಸಂತೋಷವನ್ನು ಮುಂದಿಟ್ಟು, ಆಂಧ್ರದ ಜೊತೆಗೆ ಕರ್ನಾಟಕವನ್ನು ಸ್ವತಂತ್ರ ಪ್ರಾಂತವನ್ನಾಗಿ ರಚಿಸುವ ಆಶ್ವಾಸನ ಕೇಳಬೇಕೆಂದೂ ಅವರಿಂದ ಆಶ್ವಾಸನ ದೊರೆಯದೆ ಹೋದರೆ ಘಟನಾ ಸಮಿತಿ, ಶಾಸನ ಸಭೆ ಮೊದಲಾದವುಗಳಿಂದ ಕನ್ನಡಿಗರು ಅನಿವಾರ್ಯವಾಗಿ ಹೊರಬೀಳಬೇಕಾಗಬಹುದೆಂದೂ ತಿಳಿಸಿ ಬರಬೇಕೆಂದು ಗೊತ್ತಾಯಿತು.

ಮತ್ತೊಂದು ಗೊತ್ತುವಳಿಯಿಂದ ಮೈಸೂರ ಮತ್ತು ಇತರ ಕನ್ನಡ ಸಂಸ್ಥಾನಗಳನ್ನೊಳಗೊಂಡು ಏಕೀಕೃತ ಕರ್ನಾಟಕಕ್ಕಾಗಿ ಮೈಸೂರ ಕಾಂಗ್ರೆಸ, ಮೈಸೂರ ಸರಕಾರ ಹಾಗು ಒಕ್ಕೂಟ ಸರಕಾರಗಳೊಡನೆ ವಿಚಾರವಿನಿಮಯ ಮಾಡಿ ಒಂದು ಸರ್ವಸಮ್ಮತ ಯೋಜನೆ ತಯಾರಿಸಿ ಪ್ರಾಂತೀಯ ಸಮಿತಿಗೆ ವರದಿಮಾಡುವ ಬಗ್ಗೆ ಒಂದು ಸಂಧಾನ ಸಮಿತಿಯನ್ನು ನಿಯಮಿಸಲು ಅಧ್ಯಕ್ಷರಿಗೆ ಅಧಿಕಾರ ಕೊಡಲಾಯಿತು.

ಮಹಾತ್ಮರು ಉಪವಾಸ ಕೈಕೊಂಡ ಬಗ್ಗೆ ಸಭೆಯಲ್ಲಿ ಚಿಂತೆ ವ್ಯಕ್ತಮಾಡಲ್ಪಟ್ಟು ಕರ್ನಾಟಕದಲ್ಲಿ ಜಾತೀಯ ಐಕ್ಯ ಕಾಪಾಡುವ ಆಶ್ವಾಸನ ಕೊಡಲ್ಪಟ್ಟಿತು.

ಸಭೆಯು ಮಧ್ಯಾನ್ಹ ೩ ಗಂಟೆಗೆ ನೆರೆಯುವದೆಂದು ಪ್ರಸಿದ್ಧವಾದರೂ ಕಾರ್ಯಕಲಾಪಗಳು ೪ ಗಂಟೆಗೆ ಪ್ರಾಂತಾಧ್ಯಕ್ಷ ಶ್ರೀ ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾದವು. ಸಭೆಗೆ ಸುಮಾರು ೩೦. ಸದಸ್ಯರೂ ೧೬ ಶಾಸನ ಸಭಾಸದರೂ ೪ ಘಟನಾ ಸಮಿತಿ ಸದಸ್ಯರೂ ಇತರ ೨೫—೩೦ ಮಂದಿ ಆಮಂತ್ರಿತರೂ ಹಾಜರಿದ್ದರು. ಪತ್ರಿಕಾ ಪ್ರತಿನಿಧಿಗಳಿಗೆ ಸಭೆಯಲ್ಲಿ ಪ್ರವೇಶವಿರಲಿಲ್ಲ.

ನಂತರ ಇಂದಿನ ವಿಶೇಷ ಸಭೆಯನ್ನು ಕರೆಯಬೇಕಾಗಿ ಬಂದ ಪ್ರಸಂಗಗಳ ವಿವರಣೆಯನ್ನು ಪ್ರಾಂತಾಧ್ಯಕ್ಷರು ಮಾಡಿದ ನಂತರ ಸುಮಾರು ೨ ತಾಸು ಹೀಗೆ ಚರ್ಚೆಯಾದ ಮೇಲೆ ಸಂಜೆ ೭ ಗಂಟೆಗೆ ಸಭೆಯ ಮುಂದೆ ಶ್ರೀ ವೀರನಗೌಡಾ ಪಾಟೀಲರು ಒಂದು ನಿರ್ಣಯವನ್ನು ತಂದರು ಅದು ಶ್ರೀಯುತ ಅಂಗಡಿ ಮತ್ತು ನೇಸ್ವಿಯವರಿಂದ ಸಮರ್ಥಿಸಲಾಯಿತಂತೆ. ಸಭೆಯ ಮುಂದಿದ್ದ ನಿರ್ಣಯದಲ್ಲಿ ಕಾಲಾವಧಿ ಕೊಟ್ಟಿಲ್ಲ. ರಾಜೀನಾಮೆಗೆ ಪ್ರಥಮ ಸ್ಥಾನ ಕೊಡಬೇಕು ನಂತರ ಶಿಷ್ಟ ಮಂಡಳನ್ನು ರಾಜೀನಾಮೆಯ ನಂತರದ ಕಾರ್ಯಕ್ರಮವನ್ನು ಈಗಲೇ ನಮೂದಿಸಬೇಕು. ರಾಜೀನಾಮೆಯಿಂದ ಮೊದಲು ಪಾಡಿ ಪ್ರತಿ ಸರಕಾರದ ವರೆಗೂ ಕಾರ್ಯಕ್ರಮ ಹಾಕಬೇಕು ಎಂಬ ಬಗ್ಗೆ ಉಪಸೂಚನೆಗಳು ಶ್ರೀ ದೊಡ್ಡಮೇಟಿ, ಮುನವಳ್ಳಿ, ಪಂಚಾಕ್ಷರಯ್ಯ ಗುರುಪಾದಮಠ, ಕಲ್ಲೂರು ರಾಯನಗೌಡ ಇತ್ಯಾದಿಯವರಿಂದ ಸೂಚಿಸಲಾಯಿತಂತೆ. ಮೂಲ ನಿರ್ಣಯವನ್ನು ಸಮರ್ಥಿಸಿದವರಲ್ಲಿ ಶ್ರೀ ಕರುಂಬಯ್ಯನವರು, ಪುಚೆ ಇವರು ಇದ್ದರೆಂದು ತಿಳಿಯುತ್ತದೆ.

ಸಾಧಾರಣ ೨॥ ತಾಸು ಬಿಸಿ ಬಿಸಿ ಚರ್ಚೆಯಾದ ಮೇಲೆ ಅಧ್ಯಕ್ಷರು ಮೂಲ ನಿರ್ಣಯದ ಒಕ್ಕಣಿಕೆಯ ಬಗ್ಗೆ ಮಾತನಾಡುತ್ತ ಈಗಿನ ಪ್ರಸಂಗದಲ್ಲಿ ಶ್ರೀ ವೀರನಗೌಡರ ನಿರ್ಣಯವೇ ಸೂಕ್ತವಿದೆಯೆಂದು ಹೇಳಿ ಉಪಸೂಚನೆ ಹಿಂತೆಗೆದುಕೊಳ್ಳಲು ಬಿನ್ನವಿಸಿದರಂತೆ ಆದರೂ ಶ್ರೀ ರೇಚ್ಹಿ ಹಾಗು ಮುನವಳ್ಳಿಯವರು ತಮ್ಮ ಉಪಸೂಚನೆಗಳನ್ನು ಹಿಂತೆಗೆದುಕೊಳ್ಳಲು ನಿರಾಕರಿಸಿದರಂತಲೂ ಅವು ಮತಕ್ಕೆ ಹಾಕಲಾದಾಗ ಅವುಗಳಿಗೆ ಕೇವಲ ೧ ಮತ್ತು ೪ ಮತಗಳು ಬಿದ್ದು ಅವು ನಿರಾಕೃತವಾದವೆಂದೂ ತಿಳಿಯುತ್ತದೆ ಮೂಲ ಸೂಚನೆ ಮತಕ್ಕೆ ಹಾಕಲಾದಾಗ ನಾಲ್ಕು ಜನರು ವಿರುದ್ಧ ಮತ ಕೊಟ್ಟರೆಂದೂ ನಿರ್ಣಯವು ಬಹುಮತದಿಂದ ಸ್ವೀಕೃತವಾಯಿತೆಂದೂ ತಿಳಿಯುತ್ತದೆ.

ನಂತರ ಪ್ರಾಂತೀಕರಣದ ಸಂಗಡಲೇ ಮುಖ್ಯವಾಗಿ ಮೈಸೂರನ್ನೊಳಗೊಂಡ ಏಕೀಕೃತ ಕರ್ನಾಟಕದ ಸಲುವಾಗಿ ಮೈಸೂರ ಸರಕಾರ ಮೈಸೂರ ಕಾಂಗ್ರೆಸದೊಂದಿಗೆ ವಿಚಾರವಿನಿಮಯ ಮಾಡಿ ಒಂದು ಅಂಗೀಕೃತ ಯೋಜನೆಯನ್ನು ಒಕ್ಕೂಟ ಸರಕಾರದ ಮುಂದಿಟ್ಟು ಅದರ ಸೂಚನೆಗಳನ್ನು ಪಡೆದು ಪ್ರಾಂತೀಯ ಸಮಿತಿಗೆ ವರದಿ ಒಪ್ಪಿಸುವ ಸಲುವಾಗಿ ಉಪಸಮಿತಿ ನಿಯಮಿಸುವ ಬಗ್ಗೆ ಒಂದು ನಿರ್ಣಯ ಶ್ರೀ. ದಿವಾಕರರಿಂದ ಸಭೆಯ ಮುಂದೆ ಬಂದಿತಂತೆ ಶ್ರೀ. ದಿವಾಕರರು ಹಾಗು ಎಂ. ಪಿ. ಪಾಟೀಲರು ಈ ಕಾರ್ಯವನ್ನು ಈಗಲೇ ತೆಗೆದುಕೊಳ್ಳುವ ಅವಶ್ಯಕತೆಯ ಬಗ್ಗೆ ಮಾತನಾಡಿದ ಮೇಲೆ ನಿರ್ಣಯವು ಸರ್ವಾನುಮತದಿಂದ ಸ್ವೀಕೃತವಾಗಿ ಸಭಾಕಾರ್ಯ ಮುಗಿಯಿತಂತೆ.

ಸ್ವೀಕೃತ ಗೊತ್ತುವಳಿಗಳು

ಗೊತ್ತುವಳಿ ೧— ಮದ್ರಾಸ ಮುಂಬಯಿ ಮತ್ತು ಕೊಡಗು ಶಾಸನ ಸಭೆಗಳ ಸದಸ್ಯರು, ಘಟನಾ ಸಮಿತಿಯ ಸದಸ್ಯರು ಮತ್ತು ಇತರ ಆಮಂತ್ರಿತರನ್ನೊಳಗೊಂಡ ಪ್ರಾಂತೀಯ ಕಾಂಗ್ರೆಸ ಸಮಿತಿಯ ಈ ವಿಶೇಷ ಸಾಧಾರಣ ಸಭೆಯು ಭಾಷಾನ್ವಯ ಪ್ರಾಂತಗಳ ಬಗ್ಗೆ ಕೇಂದ್ರ ಶಾಸನ ಸಭೆಯಲ್ಲಿ ೨೭-೧೧-೪೭ ಕ್ಕೆ ಹಿಂದುಸ್ಥಾನದ ಮುಖ್ಯ ಮಂತ್ರಿಗಳಾದ ಪಂಡಿತ ಜವಾಹರಲಾಲರು ಕೊಟ್ಟ ಹೇಳಿಕೆಯಿಂದ ಕರ್ನಾಟಕದ ಎಲ್ಲ ಭಾಗಗಳಲ್ಲಿ ಉಂಟಾಗಿರುವ ಪರಿಸ್ಥಿತಿಯನ್ನು ಪರಿಶೀಲಿಸಿರುತ್ತದೆ. ಹಿಂದುಸ್ಥಾನ ಸರಕಾರವು ಭಾಷಾವಾರ ಪ್ರಾಂತ ರಚನೆಯ ತತ್ವವನ್ನು ಒಪ್ಪಿದುದಕ್ಕೆ ಈ ಸಭೆಯು ಸಮಾಧಾನ ವ್ಯಕ್ತಮಾಡುತ್ತಿರುವಾಗಲೇ ಆಂಧ್ರ ಪ್ರಾಂತ ಒಂದನ್ನೇ ಪ್ರತ್ಯೇಕ ಪ್ರಾಂತವೆಂದು ಗಣಿಸಿರುವದು ಅತ್ಯಂತ ಅಸಮಾಧಾನಕ್ಕೆ ಕಾರಣವಾಗಿದೆಯೆಂದು ಅಭಿಪ್ರಾಯಪಡುತ್ತದೆ. ಈ ರೀತಿಯ ಪಕ್ಷಪಾತವು ಈಗಾಗಲೇ ಛಿನ್ನವಿಚ್ಛಿನ್ನವಾಗಿ ಹೋಳಾಗುತ್ತಿರುವ ನಮ್ಮ ಪ್ರಾಂತಕ್ಕೆ ಅನಿಷ್ಟಕಾರಕವಿರುವದೆಂದೂ ತಕ್ಷಣವೆ ಕರ್ನಾಟಕವನ್ನು ಪ್ರತ್ಯೇಕ ಪ್ರಾಂತವನ್ನಾಗಿ ಮಾಡದಿರಲು ತೋರಿಸುವ ಕಾರಣಗಳು ಮನವರಿಕೆಯಾಗದಂತಹವೆಂದೂ ಅಭಿಪ್ರಾಯಪಡುತ್ತದೆ. ಆಂಧ್ರದ ಸಂಗಡಲೇ ಕರ್ನಾಟಕ ಪ್ರಾಂತವನ್ನಾದರೂ ಅಸ್ತಿತ್ವದಲ್ಲಿ ತರಬೇಕೆಂದು ಹಾಗು ಸಿದ್ಧವಾಗುತಲಿರುವ ಹಿಂದುಸ್ಥಾನ ಘಟನೆಯಲ್ಲಿ ಕರ್ನಾಟಕದ ಹೆಸರನ್ನಾದರೂ ಪ್ರಾಂತಗಳ ಯಾದಿಯಲ್ಲಿ ಹಾಕಬೇಕೆಂದೂ ಈ ಸಭೆಯು ಒತ್ತಾಯ ಮಾಡುತ್ತದೆ.

ಪ್ರತ್ಯೇಕ ಪ್ರಾಂತದ ವಿಷಯವಾಗಿ ಕರ್ನಾಟಕಕ್ಕಿರುವ ಹಕ್ಕಿನ ಬಗ್ಗೆ ಹಾಗು ಭಾಷಾವಾರ ಪ್ರಾಂತ ರಚನೆಯ ತತ್ವವನ್ನು ಕಾರ್ಯರೂಪದಲ್ಲಿ ತರಲು ಹಿಂದುಸ್ಥಾನ ಸರಕಾರದಿಂದ ಆಗುತಿರುವ ಕಾಲವಿಲಂಬದ ಬಗ್ಗೆ ಜನತೆಯಲ್ಲಿ ಅಶಾಂತಿಯು ಭಾವನೆಯು ಹೆಚ್ಚುಗುತ್ತಿರುವದನ್ನು ಈ ಸಭೆಯು ಅತಿ ಕಾತುರತೆಯಿಂದ ಗಮನಿಸುತ್ತದೆ. ಆಂಧ್ರ ಮುಕ್ತಿಕರ ಪ್ರಾಂತಗಳೊಡನೆ ಬೇರೊಂದು ಪ್ರತ್ಯೇಕ ಪ್ರಾಂತವೆಂದು ಘೋಷಣೆಯಲ್ಲಿ ಕರ್ನಾಟಕವನ್ನಾದರೂ ಹೆಸರು ಬರಬೇಕೆಂಬುದಕ್ಕೆ ಮನ್ನಣೆ ದೊರೆಯದಿದ್ದರೆ ಶಾಸನ ಸಭೆಗಳಲ್ಲಿಯ ನಮ್ಮ ಸದಸ್ಯರು ಜನತೆಯ ಅಭಿಪ್ರಾಯವನ್ನು ಪ್ರತಿಬಿಂಬಿಸುವರೆಂತಾಗಲೀ ಅಥವಾ ಆ ರೀತಿ ಕಾರ್ಯ ಮಾಡುತಿರುವರೆಂತಾಗಲೀ ಈ ಸಭೆಯು ಹೇಳಲಾರದು. ಆದಕಾರಣ ಈ ಮಹತ್ವದ ಪ್ರಶ್ನೆಯ ಕಡೆ ಕಾಂಗ್ರೆಸ ವರಿಷ್ಠರು ಲಕ್ಷಗೊಟ್ಟು ಆಂಧ್ರ ಕರ್ನಾಟಕಗಳಲ್ಲಿ ಭೇದ ಭಾವ ಮಾಡದೆ ಆಂಧ್ರದೊಂದಿಗೆ ಕರ್ನಾಟಕ ಪ್ರಾಂತವನ್ನಾದರೂ ಕೂಡಲೇ ಪ್ರತ್ಯೇಕವಾಗಿ ಮಾಡಲಾಗುವದೆಂದು ಘೋಷಿಸಬೇಕೆಂದು ಈ ಸಭೆಯು ಒತ್ತಿ ಹೇಳುತ್ತದೆ. ಒಂದು ವೇಳೆ ಈ ಬೇಡಿಕೆ ತಕ್ಕವಿದ್ದಷ್ಟು ತೀವ್ರ ಮನ್ನಣೆ ಪಡೆಯದಿದ್ದರೆ ಕೇಂದ್ರ ಮತ್ತು ಪ್ರಾಂತೀಯ ಶಾಸನ ಸಭೆಗಳಲ್ಲಿಯ ಕರ್ನಾಟಕ ಸದಸ್ಯರಿಗೆ ತಮ್ಮ ಸ್ಥಾನಗಳಿಂದ ಮೊದಲ ಹೆಜ್ಜೆಯೆಂದು ರಾಜೀನಾಮೆಗಳನ್ನು ಕೊಡಲು ಒಪ್ಪಿಗೆ ಬೇಡುವ ಪ್ರಸಂಗ ಬರಬೇಕಾಗಬಹುದೆಂದು ಈ ಸಭೆಯು ನಮ್ರತಾ ಪೂರ್ವಕವಾಗಿ ಹೇಳಬಯಸುತ್ತದೆ.

ಇದೇ ಸಮಯದಲ್ಲಿ ಹಿಂದುಸ್ಥಾನ ಸರಕಾರದವರಿಗೆ ಎದುರಾದ ಮಹತ್ವದ ಪ್ರಶ್ನೆಗಳ ಗಂಭೀರತೆಯ ಅರಿವು ಈ ಸಭೆಗಾದರೂ ಇದೆ ಎಂದು ಕಾಂಗ್ರೆಸ ವರಿಷ್ಠರಿಗೆ ಆಶ್ವಾಸನ ಕೊಡುತ್ತದೆ. ಮತ್ತು ನಮ್ಮ ಪ್ರಾಂತದ ಬೇಡಿಕೆಯು, ಇತರ ಪ್ರಾಂತಗಳೊಡನೆ ಭುಜ ಕಟ್ಟಿ ಹಿಂದುಸ್ಥಾನ ಸರಕಾರದ ಬೆಂಬಲವಾಗಿರಬೇಕೆನ್ನುವ ನಮ್ಮ ದೃಢ ನಿಶ್ಚಯಕ್ಕೆ ವಿರುದ್ಧವಾಗಿಲ್ಲವೆಂದು ತಿಳಿಸಬಯಸುತ್ತೇವೆ.

ಈ ಮೇಲಿನ ನಿರ್ಣಯದ ಅನುಸಾರವಾಗಿ ಎಲ್ಲ ಕಾರ್ಯಗಳನ್ನು ನಡೆಸಲು, ಕಾರ್ಯಕ್ರಮಗಳನ್ನು ಕೈಕೊಳ್ಳಲು ಮತ್ತು ಎ. ಆಯ್. ಸಿ. ಸಿ, ವರ್ಕಿಂಗ ಕಮೀಟಿ, ಹಿಂದುಸ್ಥಾನ ಸರಕಾರ ಹಾಗು ಘಟನಾ ಸಮಿತಿಗಳ ಮುಂದೆ ಅದಷ್ಟು ತೀವ್ರ ಈ ಪ್ರಶ್ನೆ ಒಯ್ಯುವ ಸಲುವಾಗಿ ಒಂದು ಉಪ ಸಮಿತಿಯನ್ನು ನೇಮಿಸಿಕೊಳ್ಳಲು ಈ ಸಭೆಯು ಅಧ್ಯಕ್ಷರಿಗೆ ಅಧಿಕಾರ ಕೊಡುತ್ತದೆ.

೨) ಯೂನಿಯನ್ ಕರ್ನಾಟಕ ಭಾಗಗಳ ಪ್ರಾಂತೀಕರಣಕ್ಕೆ ಎಳ್ಳಷ್ಟೂ ಬಾಧೆ ಬರದಂತೆ ಮೈಸೂರ ಸಂಸ್ಥಾನವನ್ನು ಹಾಗೂ ಇತರ ಕನ್ನಡ ಸಂಸ್ಥಾನಗಳನ್ನು ಸಹ ಒಳಗೊಂಡ ಕರ್ನಾಟಕದ ಒಂದೇ ಒಂದು ಪ್ರಾಂತವನ್ನು ಮಾಡಬೇಕೆನ್ನುವ ಕರ್ನಾಟಕ ಏಕೀಕರಣ ಮಹಾ ಸಮಿತಿಯ ಪ್ರಯತ್ನವನ್ನು ಈ ಸಭೆಯು ಸ್ವಾಗತಿಸುವದು. ಜನವರಿ ೮—೯ ತಾರೀಖುಗಳ ದಿನ ಕ. ಏ. ಮಹಾಸಮಿತಿಯ ಹಾಗೂ ಕ. ಪ್ರಾಂ. ಕಾಂ. ಕಮೀಟಿಯ ಮುಖ್ಯಸ್ಥರು ಹಲವರು ಬೆಂಗಳೂರಲ್ಲಿ ಮೈಸೂರ ಕಾಂಗ್ರೆಸ ಮುಖಂಡರೊಡನೆ ಹಾಗು ಮಂತ್ರಿಮಂಡಳದೊಡನೆ ಅನೌಪಚಾರಿಕವಾಗಿ ನಡೆಸಿದ ಮಾತುಗಳು ಈ ವಿಷಯದಲ್ಲಿ ಪ್ರೋತ್ಸಾಹಕರವಿರುವವೆಂಬುದನ್ನು ತಿಳಿದು ಈ ಸಭೆಯು ಸಂತೋಷಪಡುವದು. ಈ ಕಾರ್ಯವು ಹೆಚ್ಚು ಕ್ರಮಬದ್ಧವಾಗಿ ನಡೆಯುವ ಕಾಲವು ಬಂದಿದೆಯೆಂಬುದನ್ನರಿತು ಈ ಸಭೆಯು ಒಂದು ಸಂಧಾನ ಸಮಿತಿಯನ್ನು ನಿಯಮಿಸಲು ಅಧ್ಯಕ್ಷರಿಗೆ ಅಧಿಕಾರ ಕೊಡುವದು. ಆ ಸಮಿತಿಯು ಮೈಸೂರ ಕಾಂಗ್ರೆಸ್ಸಿನೊಡನೆಯೂ ಮೈಸೂರ ಮಂತ್ರಿಮಂಡಲದೊಡನೆಯೂ ಯೂನಿಯನ್ ಆಫ್ ಇಂಡಿಯಾ ಸರಕಾರದೊಡನೆಯೂ ಹಿಂದೀ ಘಟನಾ ಸಮಿತಿಯೊಡನೆಯೂ ಮಾತುಕತೆಗಳನ್ನು ನಡೆಸಿ ಅವು ಒಂದು ನಿಶ್ಚಿತ ಸ್ವರೂಪಕ್ಕೆ ಬಂದೊಡನೆ ಈ ಸಭೆಗೆ ವರದಿ ಮಾಡಬೇಕೆಂದು ನಿರ್ಣಯಿಸುವದು.

೩) ಮದ್ರಾಸ, ಮುಂಬೈ ಮತ್ತು ಕೊಡಗು ಶಾಸನಸಭೆಗಳ ಸದಸ್ಯರು, ಘಟನಾಸಮಿತಿಯ ಸದಸ್ಯರು ಮತ್ತು ಇತರ ಆಮಂತ್ರಿತರನ್ನೊಳಗೊಂಡ ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಸಮಿತಿಯ ಈ ವಿಶೇಷ ಸಾಧಾರಣ ಸಭೆಯು ಮಹಾತ್ಮಾ ಗಾಂಧಿಯವರು ದೇಶದಲ್ಲಿ ಜಾತೀಯ ಐಕ್ಯವನ್ನು ಬೆಳೆಗೊಳಿಸಲು ಕೈಕೊಂಡಿರುವ ಅನಿಶ್ಚಿತ ಅವಧಿಯ ಉಪವಾಸವನ್ನು ಅತಿ ಕಳವಳದಿಂದ ನಿರೀಕ್ಷಿಸುತ್ತದೆ. ದೇಶದಲ್ಲಿ ಪಸರಿಸಿರುವ ಜಾತೀಯ ಅನಿಷ್ಟ ಭಾವನೆಗಳನ್ನು ಹಾಗು ಅದರಿಂದ ಎಲ್ಲ ಸಮಾಜಗಳ ಕುಟುಂಬಗಳಲ್ಲಿ ಅಪರಿಮಿತ ನೋವು ಮತ್ತು ಅಸ್ಥೈರ್ಯ ಉದ್ಭವಿಸಿದುದನ್ನು ಪೂರ್ಣವಾಗಿ ಅರಿತು, ಭೇದಭಾವಗಳನ್ನು ತೊಡೆದುಹಾಕಲು ಮತ್ತು ಜಾತೀಯ ಐಕ್ಯವನ್ನು ಬೆಳೆಸಲು ಸಾರ್ವಜನಿಕರಲ್ಲಿ ಈ ಸಭೆಯು ಅರಿಕೆಮಾಡಿ, ಅಂದರೆ ಮಹಾತ್ಮಾಜಿಯವರು ಉಪವಾಸವನ್ನು ನಿಲ್ಲಿಸಿ ದೇಶದ ಹಾಗು ಜಗತ್ತಿನ ಸೇವೆಗಾಗಿ ಬಾಳು[illegible]ವರು. ಕರ್ನಾಟಕದಲ್ಲಿ ಈ ಬಗೆಯ [illegible] ಮುಂದೆಯೂ ಜಾತೀಯ ಐಕ್ಯವನ್ನು ಕಾಪಾಡಿಕೊಳ್ಳಲು ಸರ್ವವಿಧ ಪ್ರಯತ್ನ ಮಾಡುತ್ತೇವೆಂದು ಜನತೆಯ ಪರವಾಗಿ ಈ ಪ್ರಸಂಗದಲ್ಲಿ ಈ ಸಭೆಯು ಆಶ್ವಾಸನ ಕೊಡುತ್ತದೆ.

ಮಹಾತ್ಮರ ಉಪವಾಸ

ಮಹಾತ್ಮಾ ಗಾಂಧಿಯವರು ತಾ. ೧೩ ರಂದು ಬೆಳಗಿನ ಮುಂಜಾನೆ ೧೧ ೫ ನಿಮಿಷಕ್ಕೆ ಅನಿಶ್ಚಿತ ಅವಧಿಯ ಉಪವಾಸ ಕೈಕೊಂಡರು. ಈ ಉಪವಾಸದ ಕಾರಣಗಳನ್ನು ಹೀಗೆ ಸ್ಪಷ್ಟೀಕರಿಸಿದರು. ಪ್ರಾಮಾಣಿಕವಾಗಿ ಜಾತೀಯ ಐಕ್ಯ ಆಸ್ಥಾಪನೆಗಾಗಿ ಕಾಂಗ್ರೆಸ್ಸಿನವರು ಸಿಕ್ಖರು ಹಾಗು ಹಿಂದೂಗಳು ಈ ಪ್ರಶ್ನೆಯನ್ನು ಪರಿಷ್ಕರಿಸಲು [illegible] ಒಪ್ಪಿದರು. ಈ ಪ್ರಶ್ನೆಯನ್ನು ಹೀಗೆ ಪ್ರತ್ಯಕ್ಷ ಮಂಡಲಕ್ಕೆ ಒಪ್ಪಿಸಿದ್ದರಿಂದ [illegible] ಹಿಂದುಸ್ಥಾನಗಳಲ್ಲಿ ಯುದ್ಧವು ಅನಿವಾರ್ಯವೆಂದೂ ಈ ಯುದ್ಧವನ್ನು ತಡೆಯುವದೇ ಮಹಾತ್ಮರು ಉಪವಾಸ ಕೈಕೊಂಡರೆಂದೂ ಅವರ ಸೆಕ್ರೆಟರಿ ಸಂಗಾತಿಗಳು ಹೇಳುತ್ತಾರೆ.

ತಾ. ೧೩ ರಂದು ಮಹಾತ್ಮರು ತಮ್ಮ ಉಪವಾಸದ ನಿರ್ಧಾರವನ್ನು ಸಾರಿ ಪ್ರಕಟಿಸಿದ ಪ್ರಕಟನೆ ಬೇರೆ ಕಡೆ ಕೊಡಲಾಗಿದೆ.

ಉಪವಾಸದ ಪ್ರತಿಕ್ರಿಯೆ

ಮಹಾತ್ಮರ ಈ ಅನಿಶ್ಚಿತ ಅವಧಿಯ ಉಪವಾಸದಿಂದ ಭಾರತವೆಲ್ಲ ಕಳವಳಗೊಂಡಿದೆ. ಮಹಾತ್ಮರು ಈ ವರೆಗೆ ಕೈಕೊಂಡ ಉಪವಾಸಗಳಲ್ಲಿ ಇದು ೧೫ ನೆಯದು. ಮಹಾತ್ಮರ ಈ ಉಪವಾಸ ಯಶಸ್ವಿಯಾಗಿ ಕೊನೆಗಾಣಲೆಂದು ಪ. ಬಂಗಾಲದ ಎಲ್ಲ ಧಾರ್ಮಿಕ ಮಂದಿರಗಳಲ್ಲಿ ೧೬ ತಾ. ದಿನ ಸಾರ್ವತ್ರಿಕ ಪ್ರಾರ್ಥನೆ ಜರಗಲೆಂದು ಪ. ಬಂಗಾಲದ ಗವ್ಹರ್ನರರಾದ ಶ್ರೀ. ರಾಜಗೋಪಾಲಾಚಾರ್ಯರು ಬೇಡಿದ್ದಾರೆ. ಪ. ಬಂಗಾಲ ಶಾಸನ ಸಭೆಯು ಜಾತೀಯ ಸೌಹಾರ್ದ ಬೆಳೆಯಲೆಂದೂ ಮಹಾತ್ಮರು ದೀರ್ಘಾಯುಗಳಾಗಲೆಂದೂ ಕೋರಿತು. ಮೈಸೂರ ಪ್ರಜಾ ವಿಧಾಯಕ ಸಭೆಯಲ್ಲಿ ಉಪವಾಸಕ್ಕಾಗಿ ಕಳವಳ ವ್ಯಕ್ತಪಡಿಸಿ ಮೈಸೂರಲ್ಲಿ ಎಲ್ಲ ಧರ್ಮದವರು ಐಕ್ಯ ಕಾಯ್ದುಕೊಂಡು ಹೋಗುವ ಪ್ರಯತ್ನ ಮಾಡುವದಾಗಿ ಆಶ್ವಾಸನ ಕೊಡಲೊಪ್ಪಿತು. ಪಶ್ಚಿಮ ಪಂಜಾಬ ಶಾಸನ ಸಭೆಯಲ್ಲಿ ತಾ. ೧೩ ರಂದು ಉಪವಾಸದ ಉಲ್ಲೇಖ ಮಾಡುತ್ತ ಮುಲ್ಕ [illegible] ಜಗತ್ತಿನ ಶ್ರೇಷ್ಠ ವಿಭೂತಿಗಳಲ್ಲಿ ಮಹಾತ್ಮರೊಬ್ಬರು ಅವರ ಪ್ರಭಾವದಿಂದ ಕಲಕತ್ತೆಯಲ್ಲಿಯ ಜಾತೀಯತೆಯ ವಿಷ ಅಮೃತವಾಯ್ತು. ಇನ್ನುಳಿದ ಭಾಗದಲ್ಲಿದ್ದ ಈ ವಿಷ ಈಗಲಾದರೂ ಅಮೃತವಾಗಲಿ ಎಂದು ಉದ್ಗಾರ ತೆಗೆದರು. ಪಾಕಿಸ್ಥಾನ ಹಿಂದುಸ್ಥಾನಗಳಲ್ಲಿ ಯೋಗ್ಯ ಒಪ್ಪಂದವಾಗಿ [illegible] ಈ ಉಪವಾಸವನ್ನು ತಡೆಯಬಹುದೆಂದು ಅ. ಭಾ. ಟ್ರೇಡ ಯೂನಿಯನ್ ಕಾಂಗ್ರೆಸಿನ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ. ಎನ್. ಎಂ. ಜೋಶಿಯವರು ನುಡಿದರು. ಈ ಬಗ್ಗೆ ಶ್ರೀ. ಕೆ. ಎಂ. ಮುನಸಿಯವರು, ಹಿಂದೀ ಒಕ್ಕೂಟದ ಸಮಿತಿಯು ಈಗ ತೊಡಕಿನದಾಗಿದ್ದು ಈ ಉಪವಾಸದಿಂದ ಅದು ಇನ್ನಷ್ಟು ತೊಡಕಿನದಾಗಬಹುದೆಂದೂ ಆದರೆ ದೈವೀ ಪ್ರೇರಣೆಯಿಂದ ಕೈಕೊಂಡ ಮಹಾತ್ಮರ ಉಪವಾಸಕ್ಕೆ ತಳೆದಾಗಿ ಅದು ಯಶಸ್ವಿಯಾಗಿ ಕೊನೆಗಾಣಬೇಕೆಂದು ಪ್ರಾರ್ಥಿಸೋಣವೆಂದೂ ಹೇಳಿದರು.

ಬಂಗಾಲದ ಹಿಂದಿನ ಮುಖ್ಯ ಮಂತ್ರಿಗಳಾದ ಶ್ರೀ. ಸುಹ್ರವರ್ದಿಯವರು, ಶಾಂತಿಸ್ಥಾಪನೆಗಾಗಿ ತಾವು ಕಾರ್ಯಮಾಡುವದಾಗಿಯೂ ಹಿಂದುಸ್ಥಾನ ಪಾಕಿಸ್ಥಾನಗಳಲ್ಲಿ ಬಹುಸಂಖ್ಯಾಕ ಸಮಾಜದವರು ಸಭೆ ಮೆರವಣಿಗೆಗಳ ಮೂಲಕ ಜಾತೀಯ ಸೌಹಾರ್ದ ಸ್ಥಾಪಿಸಬೇಕೆಂದೂ ಅಲ್ಪಸಂಖ್ಯಾಕರ ಹಿತಸಂರಕ್ಷಕ ಸಂಸ್ಥೆ ಸ್ಥಾಪಿಸಬೇಕೆಂದೂ ತಿಳಿಸಿದರು.

ಉಪವಾಸದ ೨ ನೆಯ ದಿನದ ಪರಿಸ್ಥಿತಿಯಲ್ಲಿ ಡಾ. ಮೆಹತಾ ಹಾಗು ಡಾ. ಸುಶೀಲಾ ನಯ್ಯರರು ಹೀಗೆ ಹೇಳಿದ್ದಾರೆ. ರಾತ್ರಿ ನಿದ್ರೆ ಚನ್ನಾಗಿ ಹತ್ತಿತು. ಬಹಳ ದಣಿವನ್ನು ಅನುಭವಿಸುತ್ತಿರುವರು. ದಿನದ ಕೆಲಸದಲ್ಲಿ ಏನೂ ಬದಲಾವಣೆ ಮಾಡಿಲ್ಲ. ತಿರುಗಾಟ ಮಾತ್ರ ನಿಲ್ಲಿಸಿದ್ದಾರೆ. ಪ್ರಾರ್ಥನೆಗೆ ನಡೆದು ಹೋಗಿ ೧೫ ನಿಮಿಷ ಭಾಷಣ ಮಾಡಿದರು. ಕ್ರಮವೆತ್ತಿಲ್ಲ. ಅವರು ಈ ನಿರಾಹಾರ ಸಂಪಾಂತವನ್ನಾಗಿದೆ.

ಉಪವಾಸದ ಎರಡನೇ ದಿನ ರಾತ್ರಿ ಸಾಧಾರಣ ಚನ್ನಾಗಿಯೇ ನಿದ್ರೆ ಮಾಡಿ ಮುಂಜಾನೆ ದಿನ ಬೆಳಗಿನಲ್ಲಿ ಉತ್ಸಾಹಿತರಾಗಿಯೇ ಎದ್ದರು. ತಿರುಗಾಡಲು ಹೋಗುವದೊಂದನ್ನು ಬಿಟ್ಟು ಉಳಿದ ಇತರ ಎಲ್ಲ ಕಾರ್ಯಕ್ರಮಗಳೂ ನಡೆದಿವೆ.

ಪ್ರಶ್ನೆ ಪೆಟ್ಟಿಗೆ

ಪ್ರ ೧. ರಾಷ್ಟ್ರಭಾಷೆಗೆ ಹಿಂದಿ ಎಂಬುದೂ ಸರಿಯೆ ಹಿಂದುಸ್ತಾನಿ ಎಂಬುದೂ ಅಷ್ಟೇ. ದಿನದ ಬಳಕೆಯಲ್ಲಿ ೩-೪ ನೆ ಸಲ ಹಿಂದುಸ್ತಾನಿಯು ಉಳಿಯುವುದು ಪ್ರತ್ಯೇಕ ಸಾಹಿತ್ಯದಲ್ಲಿಯೂ ಶಾಸ್ತ್ರೀಯ ವಿವೇಚನೆಯಲ್ಲಿಯೂ ಸಂಸ್ಕೃತದ ಕೆಲ ಶಬ್ದಗಳು ಅನಿವಾರ್ಯವೆಂಬ ಮಾತನ್ನು ಯಾರೂ ಅಲ್ಲಗಳೆಯಲಾರರು, ಇದನ್ನು ತಮಗೆ ತಿಳಿಸಿ ಹೇಳುವುದರಲ್ಲೇನು ನ್ಯಾಯವಿದೆ?

ಉ ೧. ಎಲ್ಲರೂ ಅದೇ ಅರ್ಥದಲ್ಲಿ ಅದೇ ಶಬ್ದವನ್ನು ಗ್ರಹಿಸುವದಾದರಲ್ಲಿ ಪ್ರಶ್ನೆಯ ಮೊದಲಿನ ಭಾಗ ಸರಿಯಾಗಿಯೇ ಇದೆ. ಹೆಸರಿನ ಅರ್ಥವೇ ಬೇಕು ಎಂಬುದೇ ತೊಡಕಿನದು. ಪ್ರೌಢ ಸಾಹಿತ್ಯದಲ್ಲಿಯೂ ಶಾಸ್ತ್ರೀಯ ವಿವೇಚನೆಯಲ್ಲಿಯೂ ನಾವು ಕೇವಲ ಸಂಸ್ಕೃತದಿಂದೇ ಶಬ್ದಗಳನ್ನು ಆಯಕೊಡದು. ದಿನದ ಬಳಕೆಯ ಶಬ್ದಗಳ ಕೋಶ ಒಂದನ್ನು ರಚಿಸಲು ಒಂದು ಸಮಿತಿಯು ಏರ್ಪಡಬೇಕು. ಆ ಸಮಿತಿ ಶಬ್ದಗಳನ್ನು ಕೇಳುವಾಗ ಅವುಗಳ ಮೂಲದ ಬಗ್ಗೆ ವಿಶೇಷವಾಗಿ ಗಮನಿಸತಕ್ಕದ್ದಲ್ಲ.

ಪ್ರ ೨. ಒಂದು ರಾಷ್ಟ್ರದ ಕಾರ್ಯನಿರ್ವಾಹದಲ್ಲಿ ಇಬ್ಬಗೆಯ ಲಿಪಿ ಬಳಸುವದೆಂದರೆ ತುಂಬ ತೊಂದರೆಯದು ಮತ್ತು ಗೊಂದಲದ್ದು. ಎಂದ ಮೇಲೆ ಎಲ್ಲ ಪ್ರಾಂತಗಳಲ್ಲಿಯೂ ಪರಿಚಿತವಾಗಿರುವ ನಾಗರೀ ಲಿಪಿಯನ್ನೇಕೆ ಬಳಸಬೇಡ? ದ್ವಿಲಿಪಿಯ ಬೇಡಿಕೆಯಲ್ಲಿ ಕೇಂದ್ರ ಸರಕಾರವು ಎರಡೂ ಲಿಪಿಗಳಲ್ಲಿ ತನ್ನ ಪ್ರಕಟನೆ ಪತ್ರವ್ಯವಹಾರಗಳನ್ನು ಮಾಡಬೇಕೆಂದು ಧ್ವನಿತವಾಗುವದೆ? ಕಂತಿಯ ಹಾಗೂ ಇನ್ನಿತರ ಕಚೇರಿಗಳಲ್ಲಿ ಕೂಡ ಎರಡೂ ಲಿಪಿ ಬಳಸಬೇಕೆ? ಮುಸಲ್ಮಾನರನ್ನು ಸಂತೈಸಲೆಂದೇ ದ್ವಿಲಿಪಿಯ ಮಾತು ಹೊರಟಿದೆ ಎಂಬುದನ್ನು ನಾನು ಎಷ್ಟೂ ಸಮರ್ಥಿಸುವದಿಲ್ಲ. ಯಾರಿಗೂ ಅನ್ಯಾಯವಾಗದಂತೆ ಮತ್ತು ರಾಷ್ಟ್ರಕ್ಕೆಲ್ಲ ಸೌಕರ್ಯವಾಗುವಂತೆ ನಾವು ಒಂದು ಲಿಪಿಯನ್ನು ಆಯ್ದುಕೊಳ್ಳಬೇಕೆಂಬುದೇ ಮುಖ್ಯ. ದೇವನಾಗರಿ ಲಿಪಿಯು ಮುಸಲ್ಮಾನರಿಗೆ ಘಾತುಕವಾಗಿದೆಯೆಂದು ಹೇಳುವದರಲ್ಲಿ ಏನೂ ಹುರುಳಿಲ್ಲ. ನನಗೆ ತೋರುವ ಮಟ್ಟಿಗೆ ತಾತ್ಕಾಲಿಕವಾಗಿ ಕೆಲದಿನ ಎರಡೂ ಲಿಪಿ ಬಳಸಬೇಕಾಗಬಹುದು. ಆದರೆ ಕೊನೆಗೆ ಒಂದೇ ಲಿಪಿಯನ್ನು ಎಲ್ಲರೂ ಒಪ್ಪಬೇಕಾದುದು ಅಗತ್ಯ. ಇದರಲ್ಲಿ ಪ್ರತಿವಾದದ ಮಾತೇನಿದೆ?

ಉ ೨. ಈಗ ಎರಡೂ ಲಿಪಿ ಒಪ್ಪಿಬಳಸಹತ್ತಿದರೆ ಸುಲಭವಾದುದು ತಾನಾಗಿ ಉಳಿಯುವದು. ಮುಖ್ಯ ಮಾತೆಂದರೆ ಉರ್ದು ಬಹಿಷ್ಕೃತವಾಗಬಾರದು. ಈ ಬಗೆಯ ಬಹಿಷ್ಕಾರದಿಂದ ಬೇರೆ ಬೇರೆ ಭೇದಗಳ ವಿವೇಚನೆ ಸೂಚಿತವಾಗುತ್ತದೆ. ಹೀಗೆ ವಿವೇಚನೆ ಮಾಡುವದು ಯೋಗ್ಯವೋ ಅಲ್ಲವೋ ಎಂಬ ಬಗ್ಗೆ ವಿವಾದವೆದ್ದಿತು. ಈಗದು ಇನ್ನೂ ಹೆಚ್ಚಿದೆ. ಈ ಹಿನ್ನೆಲೆಯಲ್ಲಿ ಐಕ್ಯವಾದಿಗಳಾದ ಹಾಗೂ ಅಂತಃಕಲಹವನ್ನು ಹತ್ತಿಕ್ಕಬೇಕೆಂಬ ನಾವು ಎರಡೂ ಲಿಪಿಗಳನ್ನು ಪರಿಗ್ರಹಿಸುವದು ಅತ್ಯಗತ್ಯವಾಗಿದೆ. ಅಲ್ಲದೆ ಅನೇಕ ಹಿಂದುಗಳಿಗೂ ಸೀಖರಿಗೂ ದೇವನಾಗರೀ ಲಿಪಿ ಬಾರದೆಂಬುದನ್ನೂ ನಾವು ಮರೆಯತಕ್ಕದ್ದಲ್ಲ. ಪರ ಪ್ರಾಂತದಲ್ಲಿ ಹೋಗಿ ದುಡಿಯಬೇಕೆನ್ನುವವರು ಮಾತ್ರ ಎರಡೂ ಲಿಪಿ ಕಲಿಯಬೇಕಾಗುವದು. ಉಳಿದವರಿಗೆ ಒಂದೇ ಲಿಪಿ ಸಾಕು. ಕೇಂದ್ರ ಸರಕಾರದ ಪ್ರಕಟನೆಗಳಲ್ಲಿ ಎರಡೂ ಲಿಪಿಗಳಲ್ಲಿರಬೇಕೆಂದೂ ಅರ್ಥವಲ್ಲ. ಆದರೆ ಎಲ್ಲರಿಗಾಗಿ ತೆಗೆದ ಪ್ರಕಟನೆಗಳು ಎರಡೂ ಲಿಪಿಗಳಲ್ಲಿರಬೇಕಾದುದೇ ಸರಿ.

ಜಾತೀಯ ವಿದ್ವೇಷದ ಈ ದಿನಗಳಲ್ಲಿ ಉರ್ದು ಲಿಪಿಯನ್ನು ಬಹಿಷ್ಕರಿಸುವದೆಂದರೆ ಪ್ರಜಾಸತ್ತೆಗೆ ವಿರೋಧವಾದ ರೀತಿಯಲ್ಲಿ ವರ್ತಿಸಿದಂತೆ ಎಂದು ಅರ್ಥವಾಗುವ ಸಂಭವವಿದೆ.

ಕಂತಿ ಮತ್ತು ಇನ್ನಿತರ ಕಚೇರಿಗಳಲ್ಲಿ ಎರಡೂ ಲಿಪಿ ಬಳಸುವದೇ ಬೇಡವೇ ಎನ್ನುವದು ಅಂತಹದೇನು ದೊಡ್ಡ ಮಾತಲ್ಲ. ನಾವು ಇಂಗ್ಲೀಷ ಭಾಷೆಯ ಮತ್ತು ರೋಮನ್ ಲಿಪಿಯ ವ್ಯಾಮೋಹದಿಂದ ವಿಮುಕ್ತರಾಗುತ್ತಲೇ ನಮ್ಮ ತಲೆ ತಗ್ಗಾಗಿ ಬೊಗಸೆಗಾಗಿ ಬುದ್ಧಿ ಜಡವಾಗಿ ಈ ಬಗೆಯ ವಾದವಿವಾದದಲ್ಲಿ ಹುರುಳಿಲ್ಲವೆಂಬುದು ತಾನೇ ಹೊಳೆಯುವದು.

ಎರಡನೆಯವರನ್ನು ಸಂತುಷ್ಟಗೊಳಿಸಹೋಗಿ ಹೊಲ್ಲದ ಹಾದಿಯನ್ನು ಹಿಡಿಯತಕ್ಕದ್ದಲ್ಲವಾದರೂ ಹಿಡಿದ ಹಾದಿಯು ಅತ್ಯಂತವೂ ಯುಕ್ತಯುಕ್ತವೆಂದು ತೋರಿದಾಗ ಅದನ್ನು ಅನುಸರಿಸಿ ನಡೆಪುದರಲ್ಲಿ ಕೆಡಕೇನು ಇಲ್ಲ. ಎಲ್ಲರೂ ನಮ್ಮ ಲಿಪಿಯನ್ನೇ ಒಪ್ಪಿ ಅಂಗೀಕರಿಸಿದರೆ ಉತ್ತಮವೇ. ಆದರೆ ಹೀಗಾಗಲಿಕ್ಕೂ ನಮ್ಮಕ್ಕೆ ಎರಡೂ ಲಿಪಿಗಳನ್ನು ಅವಲಂಬಿಸುವದು ಅವಶ್ಯವಾಗಿದೆ.

—ಮೋ. ಕ. ಗಾಂಧಿ

ಸಿಂಧದ ವಿಚಾರ

(ಕನೆಯ ಪುಟದಿಂದ)

ಇಲ್ಲೇ ಇದು ಬಹು ಎಚ್ಚರದಿಂದ ಕಾರ್ಯ ನಡೆಸತೊಡಗಿತು. ಇದೇ ಕಾಲದಲ್ಲಿ ಲೀಗ ಮುಖಂಡರು ತಮ್ಮ ಅಧಿಕಾರವನ್ನೂ, ತಮ್ಮ ಪ್ರಭಾವವನ್ನೂ ಮುಸಲ್ಮಾನರ ಮೇಲೆ ಸ್ಥಿರಗೊಳಿಸಲು ಬಳಸಿಕೊಂಡು, ೧೯೪೬ ರಲ್ಲಿ ಹೊಸ ಚುನಾವಣೆಯಾಗಬೇಕೆಂದಾಗ ಲೀಗ ಪಕ್ಷಕ್ಕೆ ಸಂಪೂರ್ಣ ಬಹುಮತ ಸಿಕ್ಕಿತು. ಅದು ಆಗ ಮೊಗವಾಡವನ್ನು ಕಳಚಿಹಾಕಿ ಕಾಯಿದೆ, ಆಡಳಿತ, ಮತ್ತು ಅಧಿಕಾರಪ್ರಯೋಗ ಈ ಮೂರು ಕ್ಷೇತ್ರಗಳಲ್ಲಿಯೂ ನಿರ್ಲಜ್ಜವಾದ ಜಾತೀಯ ಧೋರಣವನ್ನು ವಹಿಸಿತು. ಭಾರತ ವಿಭಜನೆಯ ಯೋಜನೆಯನ್ನು ಘೋಷಿಸಿದಾಕ್ಷಣ ಮಧ್ಯಮ ಮತ್ತು ಉಚ್ಚ ವರ್ಗದ ಮುಸ್ಲಿಮರು ತಾವು ರಾಜರಕ್ತದವರೆಂದೂ ಹಿಂದುಗಳು ತಮಗೆ ಅಧೀನರಾದ ಪ್ರಜೆಗಳೆಂದೂ ಭಾವಿಸಲು ನಡೆದುಕೊಳ್ಳಲೂ ಆರಂಭಿಸಿದರು. ಸಿಂಧವು ಪಾಕಿಸ್ತಾನದ ಮೊದಲ ಕೋಟೆಯಾಯಿತು ಮತ್ತು ಆ ಹೊಸ ರಾಜ್ಯದ ರಾಜಧಾನಿಯಾಗುವ ಸಂದಿಗ್ಧ ಗೌರವವು ಕರಾಚಿಗೆ ದೊರಕಿತು. ಗವರ್ನರ ಜನರಲ್ಲರಾದ ಕೂಡಲೆ ಕಾಯದೆ ಅಜಂ ಜಿನ್ನಾರವರು ಕೊಟ್ಟ ಹೇಳಿಕೆಗಳು ಹಿಂದುಗಳಲ್ಲಿ ಭಯಸಂಶಯ ಸಂಮಿಶ್ರಿತವಲ್ಲದಿದ್ದರೂ ಒಂದುವಿಧವಾಗಿ ಹೊಸ ಆಶೆ ವಿಶ್ವಾಸಗಳನ್ನು ಹುಟ್ಟಿಸಿದವು. ಆದರೆ ಪರಿಸ್ಥಿತಿಯು ಬಹುಬೇಗ ಕೆಟ್ಟಿತು. ಮತ್ತು ಪಂಜಾಬು ಕ್ಷೆಟ್ಟಗಳಲ್ಲಿಯ ಗಲಭೆಗಳು ಬಿಕ್ಕಟ್ಟನ್ನುಂಟು ಮಾಡಿದವು. ಕಾಯದೆ ಅಜಂ ಜಿನ್ನಾರವರೂ ಅವರ ಬೆಂಬಲಿಗರೂ ಈಗ ಇಸ್ಲಾಂ ರಾಜ್ಯಸ್ಥಾಪನೆಯ ಮಾತಾಡತೊಡಗಿದರು; ಆದರಿಂದ ಸಾಮಾನ್ಯ ನಾಗರಿಕ ಹಕ್ಕು ಬಾಧ್ಯತೆಗಳನ್ನು ಪಡೆದು ಗೌರವಯುತವಾದ ಸ್ಥಾನಪಡೆಯಬೇಕೆಂಬ ಅಲ್ಪಸಂಖ್ಯಾಕರ ಹಂಬಲು ನುಚ್ಚುನೂರಾಯಿತು. ಸೆಪ್ಟಂಬರಿನಲ್ಲಿ ಜ್ಞಾತ್ಯಂಧತೆಯ ಉತ್ಪಾತವೊಂದು ಉಂಟಾಯಿತು. ನವಾಬ ಶಹ ಜಿಲ್ಲೆಯ ಸೀಖರು ಆದಕ್ಕಾಹುತಿಯಾದರು. ಅನಿವಾರ್ಯವಾದ ಇದರ ಪರಿಣಾಮ ಹಿಂದುಗಳ ಮೇಲಾಯಿತು ಮತ್ತು ಹಿಂದು ಸೀಖರ ನಿರ್ಗಮನ ಪ್ರಾರಂಭವಾಯಿತು. ರೈಲಿನಲ್ಲಿ ಕುಳಿತ ಮುಗ್ಧ ಪ್ರಯಾಣಿಕರ ಮೇಲೆ ಹಲ್ಲೆ ಮಾಡುವುದರಿಂದ, ನಿರ್ವಾಸಿತರ ಒಡವೆ ವಸ್ತುಗಳನ್ನು ಅವಮಾನಕರ ರೀತಿಯಿಂದ ಶೋಧನೆ ಮಾಡುವದರಿಂದ ಮತ್ತು ಪಾಕಿಸ್ತಾನ ರಾಜಧಾನಿಯಲ್ಲಿ ಕಾಯಿದೆಗೆ ವಿರುದ್ಧವಾಗಿ ಮನೆ ಮಠಗಳನ್ನು ವಶಪಡಿಸಿಕೊಳ್ಳುವುದರಿಂದ ಪರಿಸ್ಥಿತಿ ಮತ್ತಷ್ಟು ಗಂಭೀರವಾಯಿತು. ಇಲ್ಲಿಯ ವರೆಗೆ ಒಟ್ಟು ೧೪ ಲಕ್ಷದಲ್ಲಿ ಸುಮಾರು ೩ ಲಕ್ಷ ಹಿಂದು ಸೀಖರು ಊರು ಬಿಟ್ಟು ಹೋಗಿದ್ದಾರೆ. ಅವರಲ್ಲಿ ಬಹುಸಂಖ್ಯಾಕರು ಸನಿಹದ ಪ್ರಾಂತ ಮತ್ತು ಸಂಸ್ಥಾನಗಳ ಮೂಲ ನಿವಾಸಿಗಳಿದ್ದು ಸಿಂಧದ ಆ ಉದಾರ ಪ್ರದೇಶದಲ್ಲಿ ನೆಲಸಿದವರು. ನಿರ್ಗಮನದ ಪ್ರವಾಹ ಮುಂಟರಿದಿದೆ ಆದರೆ ಅದು ಸಾರಿಗೆಯ ಅನಾನುಕೂಲದಿಂದ ವಿಳಂಬಿತವಾಗಿದೆ.

ಎಲ್ಲ ಹಿಂದುಗಳೂ ಹೊರಟು ಹೋದರೆ ಆರ್ಥಿಕ ಪರಿಸ್ಥಿತಿ ತಲೆಕೆಳಗಾಗಬಹುದೆಂದು ಸಿಂಧ ಸರಕಾರ ಈಗ ಅರಿಯತೊಡಗಿದೆ; ಆದರೆ ಅದು ಹಿಂದೀ ಒಕ್ಕೂಟ ಸರಕಾರದಂತೆ ನಡೆಯದೆ, ಕೇವಲ ವಾಕ್ಪಟಾಪದ ಉಚ್ಛಿಷ್ಟ ದಾನವನ್ನಲ್ಲದೆ ಅಲ್ಪಸಂಖ್ಯಾಕರ ರಕ್ಷಣೆಗಾಗಿ ಮತ್ತೇನನ್ನೂ ಮಾಡಲಿಲ್ಲ. ಅರಾಜಕ ಜನರನ್ನು ದಂಡಿಸುವುದರ ಬದಲು ಅದು ಸರಕಾರೀ ನವಕರರು ತಮ್ಮ ಕುಟುಂಬವನ್ನು ಹೊರಗೆ ಕಳುಹಿಸುವ ಅವಿಧೇಯತೆಯಿಂದು ಹೇಳಿ ಕೆಲಸದಿಂದ ನಿವೃತ್ತಿ ಮಾಡುವುದಾಗಿ ಬೆದರಿಸುತ್ತಿದೆ! ಶಾಂತ ವಾತಾವರಣವನ್ನು ನಿರ್ಮಿಸದೆ ಅವಶ್ಯಕ ನೌಕರರ ಅಜ್ಞೆಯ ಪ್ರಕಾರ ಭಂಗಿ ಮತ್ತು ಮಡಿವಾಳರು ಹೊರಹೋಗಬಾರದೆಂದು ಹೇಳಿ ಅದು ಹರಿಜನ ಕೆಲಸಗಾರರ ಮೇಲೆ ವಾರಂಟು ಹೊರಡಿಸುತ್ತಿದೆ. ಇಷ್ಟೆಲ್ಲ ಮಾಡಿದ್ದಲ್ಲದೆ ಇದರ ಮೇಲೆ ಮುಸಲ್ಮಾನರು ಹೈದರಾಬಾದು ಮತ್ತು ಕರಾಚಿಯ ನಿವಾಸಿ ಹಿಂದುಗಳನ್ನು ಬಹುಸಂಖ್ಯೆಯಲ್ಲಿ ಕೊಂದು ಅವರ ಆಸ್ತಿಪಾಸ್ತಿಗಳನ್ನು ಲೂಟಿ ಮಾಡಿಬಿಟ್ಟಿದ್ದಾರೆ. ಒಕ್ಕೂಟದಲ್ಲೂ ಕೆಲವೆಡೆ ಮುಸ್ಲಿಮರಿಗೆ ಈ ಪಾಡು ಬಂದುದಕ್ಕೆ ನಾವು ನಾಚಿಕೆ ಪಡಬೇಕಾಗಿದೆ. ಆದರೆ ಸಿಂಧದ ವಿಷಯವನ್ನಷ್ಟೆ ತೆಗೆದುಕೊಂಡರೆ ಅಲ್ಲಿ ಹಿಂದು ಸೀಖರು ಯಾವ ಕಾರಣದಿಂದಲೂ ಶಾಂತಿ ಗೌರವಗಳಿಂದ ಬಾಳಲು ಸಾಧ್ಯವಿಲ್ಲದಾಗಿದೆ.

ಆದರಿಂದಲೆ ಗಾಂಧಿಯವರು ಕೂಡ ತಮ್ಮ ಇತ್ತೀಚಿನ ಪ್ರಾರ್ಥನೋತ್ತರ ಭಾಷಣದಲ್ಲಿ ಸಿಂಧ ಪ್ರಾಂತದಿಂದ ಹಿಂದು ಸೀಖರನ್ನು ನಿರ್ವಾಸಿತ ಮಾಡಬೇಕೆಂದು ಒತ್ತಿ ಹೇಳಿದ್ದಾರೆ. ಆದುದರಿಂದ ಒಕ್ಕೂಟ ಸರಕಾರವು ಅದಷ್ಟು ಬೇಗ ನಮ್ಮನ್ನು ಇಲ್ಲಿಂದ ಹೊರಗೆ ಹಾಕಿ ಉಪಕರಿಸಲು ತಕ್ಕ ಕಾರ್ಯಕ್ರಮವನ್ನು ಕೈಕೊಳ್ಳಬೇಕು. ಭಾರತದ ಸ್ವಾತಂತ್ರ್ಯಕ್ಕೆ ನಾವೂ ಎಲ್ಲರಂತೆ ದುಡಿದಿದ್ದೇವೆ. ಕಾಂಗ್ರೆಸು ವಿಭಜನೆಗೊಪ್ಪಿದ್ದರಿಂದ ನಾವಿಂದು ಹೀಗೆ ತ್ರಿಶಂಕುಸ್ವರ್ಗಸ್ಥರಾಗಬೇಕಾಗಿದೆ. ಆದುದರಿಂದ ದಾನವಾಗಿಯಲ್ಲ, ಹಕ್ಕೆಂದು ನಾವು ಕಾಂಗ್ರೆಸ್ಸು ಸರಕಾರವು ಸಂಪಭ್ರೋಚಿತವಾಗಿ ವಿಭಜನೆಯ ಪರಿಣಾಮವನ್ನು ಎದುರಿಸಲು ತಕ್ಕ ಉಪಾಯವನ್ನು ಕೈಗೊಳ್ಳಬೇಕೆನ್ನುತ್ತೇವೆ.

ಗಡಿಯಾಚೆಗೆ ಹುಟ್ಟುವ ಹುಣ್ಣುವಿದ್ದ ಒಕ್ಕೂಟದ ಜನರಿಗೂ ಒಂದು ವಿನಂತಿ: ತಾಯ್ನೆಲವಾದ ಸಿಂಧ ಪ್ರಾಂತವನ್ನು ಬಿಡಲು ನಮಗೆ ಎಳ್ಳಷ್ಟೂ ಮನಸ್ಸಿಲ್ಲ, ಆದರೆ ಇಲ್ಲಿ ಮಾನಪ್ರಾಣಗಳಿಗೆ ಸುರಕ್ಷಿತತೆ ಇಲ್ಲದಾಗಿರುವುದರಿಂದ ನಿರ್ವಾಹವಿಲ್ಲದೆ ನಾವಿಂದು ಈ ನಿರ್ಧಾರಕ್ಕೆ ಬರಬೇಕಾಗಿದೆ. ಪಾಕಿಸ್ತಾನದಿಂದ ನಿಮ್ಮೆಡೆಗೆ ಬರುವ ಎಲ್ಲ ಭಾರತೀಯರನ್ನು ಸಮಾನತೆಯಿಂದ ನೋಡಿಕೊಳ್ಳಬೇಕೆಂದು ನಾವು ಬೇಡುತ್ತೇವೆ.

ಸಿಂಧೀ ಹಿಂದುಗಳು ತಮ್ಮ ಸೂಫಿ ಸಂಸ್ಕೃತಿಯನ್ನು ಲೆಸಿಕೊಂಡು ಯೋಗ್ಯರಾಗಿ ಒಕ್ಕೂಟದಲ್ಲಿ ನೆಲಸಬೇಕು; ತಮ್ಮ ಸಹಜೀವಿಗಳೊಡನೆ ಸಹಕರಿಸಿ ಸ್ವಾತಂತ್ರ್ಯ ಶಿಶುವನ್ನು ಸಂರಕ್ಷಿಸಲು ಭಾರತಕ್ಕೂ ನೆರವಾಗಬೇಕು.

—ಪಿ. ಬಿ. ಚಂದ್ವಾನಿ

ಉರ್ದು ಹರಿಜನ

ಎರಡು ವಾರಗಳ ಹಿಂದೆ ನಾನು ಗುಜರಾಥಿ ಹರಿಜನದಲ್ಲಿ ಉರ್ದು ಲಿಪಿಯಲ್ಲಿ ಮುದ್ರಿತವಾಗುವ ಹರಿಜನವನ್ನು ನಿಲ್ಲಿಸ ಬಹುದೆಂದು ಸೂಚಿಸಿದ್ದೆ. ಆದಕ್ಕೆ ಕಾರಣ ಅದರ ಮಾರಾಟವು ದಿನದಿನವೂ ಸೊರಗುತ್ತ ಸಾಗಿದುದೇ. ಆರ್ಥಿಕ ದೃಷ್ಟಿಯನ್ನು ಬದಿಗಿರಿಸಿದರೂ ಅದಕ್ಕೆ ಬೇಡಿಕೆ ಇಲ್ಲದೆ ಹೋಗಿದ್ದರೆ ಅದನ್ನು ಪ್ರಕಟಿಸುವಲ್ಲಿ ಅರ್ಥವಿಲ್ಲ. ಅದನ್ನು ಪ್ರಕಟಿಸುವ ಬಗ್ಗೆ ಇದ್ದ ಜನಕ್ರೋಧವೇ ಈ ಇಳಿಮುಖಕ್ಕೆ ಕಾರಣವೆಂದು ನಾನು ತಿಳಿಯುತ್ತೇನೆ. ಇದನ್ನು ಅರಿತು ನಾನು ಪ್ರಯೋಜನ ಪಡೆಯದಿದ್ದರೆ ನನ್ನಂತಹ ಮೂರ್ಖನು ನಾನೇ.

ಇಂದಿನ ನಮ್ಮ ಇತಿಹಾಸದ ಅತ್ಯಂತ ಕಠಿಣ ಪ್ರಸಂಗದಲ್ಲಿ ಕೂಡ ನನ್ನ ಅಭಿಪ್ರಾಯವಾಗಲಿ ದೃಷ್ಟಿಕೋನವಾಗಲಿ ಬದಲುಗೊಳ್ಳಲಾರದು. ಮುಸಲ್ಮಾನನ ಅಥವಾ ಇಸ್ಲಾಮನೊಬ್ಬನ ಭಾವನೆಗಳಿಗೆ ಆಘಾತಕೊಡುವದು ತಪ್ಪು. ಅದರಲ್ಲೂ ನೈತಿಕ ಪ್ರಶ್ನೆ ಇಲ್ಲದಾಗ ದೇವನಾಗರೀ ಲಿಪಿಯ ಜೊತೆಗೆ ಉರ್ದು ಲಿಪಿಯನ್ನು ಕಲಿವ ಶ್ರಮ ವಹಿಸಿದವರಿಗೆ ಖಂಡಿತ ಯಾವ ಹಾನಿಯೂ ಇಲ್ಲ. ಅವರಿಗೆ ಹೊಸಲಿಪಿಯು ಲಾಭವಾಗುವದು. ನಮ್ಮ ದೇಶದಲ್ಲಿ ಅನೇಕರಿಗೆ ಈ ಲಿಪಿ ಜ್ಞಾನವಿದೆ. ವಿರೋಧಭಾವವಿಲ್ಲದಿದ್ದರೆ ಇಲ್ಲದ ಊಹಾಪೋಹದಲ್ಲಿ ತೊಡಗದೆ ನನ್ನ ಈ ಹೇಳಿಕೆಯನ್ನು ಒಪ್ಪಿಬಿಡಬಹುದು. ಸ್ವಯಂಪೂರ್ಣತೆಯ ದೃಷ್ಟಿಯಿಂದ ನೋಡಿದಾಗ ಇದಕ್ಕಿದ್ದ ನ್ಯೂನತೆಗಳು ಬಹಳವಿರಬಹುದು. ಆದರೆ ನೋಡಲು ಸುಂದರ, ಜಗತ್ತಿನ ಯಾವ ಲಿಪಿಯನ್ನೂ ಇದು ಸೌಂದರ್ಯದಲ್ಲಿ ಸರಿಗಟ್ಟಬಲ್ಲದು; ಇದಕ್ಕೆ ತನ್ನದೇ ಆದ ಒಂದು ವೈಶಿಷ್ಟ್ಯವಿದ್ದರೂ ಅರೆಬಿಕ್ ಮತ್ತು ಪರ್ಶಿಯನ್ ಬಾಳಿರುವವರೆಗೆ ಈ ಲಿಪಿಗೆ ಅಳಿಗಾಲವಿಲ್ಲ. ತುಸು ಬದಲಾವಣೆಯೊಂದಿಗೆ ಇದನ್ನು ಲಘುಲಿಪಿಗಾಗಿಯೂ ಬಳಸಬಹುದಾಗಿದೆ. ಧಾರ್ಮಿಕ ದಾಸ್ಯಭಾವವನ್ನೊಂದು ತೊರೆದರೆ ತುಸು ಮಾರ್ಪಾಟುಗೊಳಿಸಿ ಈ ಲಿಪಿಯಲ್ಲಿ ಸಂಸ್ಕೃತಶ್ಲೋಕಗಳನ್ನು ಸಹ ಯಾವ ತೊಂದರೆಯೂ ಇಲ್ಲದೆ ಬರೆಯಬಹುದು, ಈ ಮೂಲಕ ಇದು ಸಾರ್ವತ್ರಿಕ ರಾಷ್ಟ್ರಲಿಪಿಯೂ ಆಗಬಹುದು.

ಕೊನೆಯದಾಗಿ, ಕ್ರೋಧಾವಿಷ್ಟರಾಗಿ ಉರ್ದು ಲಿಪಿಯನ್ನು ಬಹಿಷ್ಕರಿಸುವವರು ಒಕ್ಕೂಟದ ಮುಸಲ್ಮಾನರ ಮೇಲೆ ಅವಿಚಾರದ ಆಕ್ರಮಣ ಮಾಡುತ್ತಾರೆ. ಹಿಂದು ಜನರ ಪ್ರಕಾರ ಇವರು ತಮ್ಮ ದೇಶದಲ್ಲಿಯೇ ಪರಕೀಯರಾಗಿದ್ದಾರೆ. ಹೀಗೆ ಮಾಡುವದೆಂದರೆ ಸೇಡಿನ ಬುದ್ಧಿಯಿಂದ ಪಾಕಿಸ್ತಾನದ ಕೆಟ್ಟ ಮಾದರಿಯನ್ನು ಅನುಸರಿಸಿದಂತೆಯೇ ಸರಿ. ಕೆಟ್ಟ ನಡೆವಳಿಗಳನ್ನೂ ಮಾದರಿಗಳನ್ನೂ ನಿರಾಕರಿಸಲು ನನ್ನ ಜೊತೆಗೂಡಬೇಕೆಂದು ನಾನು ಹಿಂದುಸ್ತಾನದ ಪ್ರತಿಯೊಬ್ಬ ನಿವಾಸಿಗೂ ವಿನಂತಿಸುತ್ತೇನೆ. ನಾನು ಬರೆದದ್ದನ್ನು ಜನರು ಅವಗತಮಾಡಿಕೊಂಡದ್ದಾದರೆ ಅವರು ಹರಿಜನದ ನಾಗರೀ ಮತ್ತು ಉರ್ದು ಮುದ್ರಣಗಳ ಸಂಖ್ಯಾಕ್ಷೀಣತೆಯನ್ನು ತಡೆಗಟ್ಟಬಹುದು. ಮುಸಲ್ಮಾನ ಮಿತ್ರರು ಈಗ ಮುಂದೆ ಬಂದು ಉರ್ದು ಮುದ್ರಣದ ಹರಿಜನಕ್ಕೆ ಚಂದಾದಾರರಾಗಿ ಮತ್ತು ನಾಗರೀಲಿಪಿಯನ್ನು ಮನೋನಿವೇಶದಿಂದ ಕಲಿತು ತಮ್ಮ ಬುದ್ಧಿಯ ಬಂಡವಲನ್ನು ಹೆಚ್ಚಿಸಿಕೊಳ್ಳಬಹುದೊ?

ಹೊಸದಿಲ್ಲಿ —ಮೋ. ಕ. ಗಾಂಧಿ

೧೧—೧—೪೮

ಗಾಂಧೀಜಿಯ ಪ್ರಾರ್ಥನೋತ್ತರ ಭಾಷಣ

ಬಿರ್ಲಾ ಭವನ, ಹೊಸದಿಲ್ಲಿ, ೩೧—೧೨—೪೭

ನಿರಾಶ್ರಿತರ ಪುನರಾಗಮನವಿಲ್ಲದೆ ನಿಜವಾದ ಶಾಂತಿಯಿಲ್ಲ

ಜಾಯಂಟ ಆಗಿ ಜನವಿನಿಮಯವಾಗಬೇಕೆಂಬ ಸೂಚನೆಯನ್ನು ಗಾಂಧಿಯವರೆಂದೂ ಒಪ್ಪಲಾರರು. ನಿರಾಶ್ರಿತರು ವ್ಯವಸ್ಥಿತವಾಗಿ ನೆಲಸಿದ್ದರೂ ಅವರು ತಮ್ಮ ಹಳೆಯ ಮನೆ ಮಠಗಳನ್ನು ನೆನಸಿಯೇ ತೀರುವರು. ಆದುದರಿಂದ ನಿರಾಶ್ರಿತರು ತಮ್ಮ ತಮ್ಮ ಮನೆಗಳಿಗೆ ಮರಳಾಗವಿಸಿದಲ್ಲದೆ ನಿಜವಾದ ಶಾಂತಿ ದೊರಕಲಾರದೆಂದು ಅವರು ಅಭಿಪ್ರಾಯಪಡುತ್ತಾರೆ.

ನಿರಾಶ್ರಿತರೂ ಪ್ರಾಮಾಣಿಕ ದುಡಿತವೂ

ಭಿಕ್ಷುಕರಾಗದಂತೆ ಉಳಿಯಲು ನಿರಾಶ್ರಿತರಿಗೆ ಕೆಲಸಕೊಡಿಸಬೇಕೆಂದು ಒಬ್ಬ ಕೇಳಿದ್ದ. ಅಂತಹ ಬೇಡಿಕೆ ಎಲ್ಲ ನಿರಾಶ್ರಿತರಿಂದ ಬಂದರೂ ಗಾಂಧಿಯವರದನ್ನು ಸ್ವಾಗತಿಸುವುದಾಗಿ ತಿಳಿಸಿದರು. ಸರಕಾರಕ್ಕಾದರೂ ಇದಕ್ಕಿಂತ ಹೆಚ್ಚೇನು ಬೇಕು.? ಇದರಿಂದ ನಿರಾಶ್ರಿತರ ಊಟ ಉಡಿಗೆಗಳಿಗಾಗಿ ಖರ್ಚು ಮಾಡಲಾಗುತ್ತಿರುವ ಕೋಟಿಗಟ್ಟಲೆ ರೂಪಾಯಿಗಳ ಉಳಿತಾಯವಾದರೆ ಸಾಲದೆ? ಕೇಳಿಕೊಂಡವನನ್ನು ಕರೆದು ತನ್ನ ವಿಚಾರವನ್ನು ಪ್ರಚುರಪಡಿಸಲು ಗಾಂಧಿಯವರು ಕೇಳಿದರು. ಇಂದಿನ ಅಸ್ತವ್ಯಸ್ತ ಪರಿಸ್ಥಿತಿಯಲ್ಲಿ ನಿರಾಶ್ರಿತರು ಪ್ರಾಮಾಣಿಕ ದುಡಿತವನ್ನು ಕೈಕೊಂಡರೆ ಎಷ್ಟೋ ಪಾಲು ಸುಧಾರಣೆಯಾಗುವುದೆಂದರು.

ಇಲ್ಲಿ ಭಾಷಣಕಾರನು ಒಬ್ಬಳು ತಂಗಿ ಹಗಲಲ್ಲಿ ಮನೆಬಿಟ್ಟು ಹೋದಾಗ ಬೀಗಮುರಿದು ಕೆಲವು ಸೀಖರು ಆಕ್ರಮಿಸಿದ್ದನ್ನು ಗಾಂಧಿಯವರ ನಿದರ್ಶನಕ್ಕೆ ತಂದನು. ಒಬ್ಬನನ್ನುಳಿದು ಮಿಕ್ಕ ಎಲ್ಲ ಅಪರಾಧಿಗಳನ್ನೂ ಹಿಡಿಯಲಾಯಿತು. ತಮಗೆ ಸ್ವಲ್ಪ ಕಷ್ಟವೆನಿಸಿದರೂ ಸ್ವಶ್ರಮದಿಂದಲೇ ನಿರಾಶ್ರಿತರು ಬದುಕಬೇಕೆಂದರು ಗಾಂಧಿಯವರು. ಹಾಗಾದರೆ ಮಾತ್ರ ಅವರು ಗೌರವವುಳ್ಳ ನಾಗರಿಕರೆನಿಸಿಕೊಳ್ಳುತ್ತಾರೆ.

ಅತಿಶಯೋಕ್ತಿ ಉದ್ದೇಶ ಹಾನಿಯನ್ನುಂಟುಮಾಡಿದೆ

ಮುಗಿಸುತ್ತ, ಗಾಂಧಿಯವರು ಅಜ್ಮೀರ ಮತ್ತು ಜುನಾಗಡದಲ್ಲಾದ ಕ್ಷೋಭಕರ್ಮಗಳ ಅತಿಶಯೋಕ್ತಿಯುಕ್ತ ವರ್ಣನೆಗಳತ್ತ ಲಕ್ಷ್ಯವಿತ್ತರು. ಅವರು ಆಗಲೆ ಜುನಾಗಡದ ಅತಿಶಯೋಕ್ತಿಗಳನ್ನು ಚರ್ಚಿಸಿದ್ದಾಗಿದೆ. ಅಜ್ಮೀರದಲ್ಲಿ ಕೊಲೆ ಕೊಳ್ಳಿ, ಸುಲಿಗೆ ಆದುದು ನಿಜ, ಆದರೆ ದರ್ಗಾ ಶರೀಫವು ಸಂಪೂರ್ಣ ಸುರಕ್ಷಿತವಾಗಿಯೇ ಇದೆಯೆಂದು ಎಣಿಸಲಾಗಿದೆ. ಅದಕ್ಕೆ ಯಾವ ಧಕ್ಕೆಯನ್ನೂ ಉಂಟುಮಾಡಿಲ್ಲ. ಅತಿಶಯೋಕ್ತಿ ತನ್ನ ಉದ್ದೇಶವನ್ನೇ ಹಾನಿಗೊಳಿಸಿಕೊಂಡಿತು. ಮುಸಲ್ಮಾನರನ್ನು ಅವರು ನೋಯಿಸಿದರು ಮತ್ತು ಸಮಾಧಾನ ಕಾರ್ಯವನ್ನು ಅವರು ಇದ್ದುದಕ್ಕಿಂತ ಹೆಚ್ಚು ದುಷ್ಕರವಾಗಿ ಮಾಡಿದರು.

ಬಿರ್ಲಾಭವನ, ಹೊಸದಿಲ್ಲಿ ೧೧—೧—೪೮

ಆಧ್ಯಾತ್ಮಿಕ ಆಹಾರ

ತಮ್ಮ ಪ್ರಾರ್ಥನೋತ್ತರ ಭಾಷಣದಲ್ಲಿ ವರ್ಷಾರಂಭದ ದಿನ ಗಾಂಧಿಯವರು ಸಭೆಗೆ ಹೆಚ್ಚು ಜನ ಬಂದಿದ್ದಕ್ಕೆ ಸಂತೋಷವನ್ನು ವ್ಯಕ್ತಪಡಿಸಿ, ಹೆಂಗಸರಿಗೆ ಜಾಗ ಮಾಡಿಕೊಡುವುದರ ಸಲುವಾಗಿ ೭ ನಿಮಿಷಗಳು ಹಾಳಾದದ್ದಕ್ಕಾಗಿ ವಿಷಾದಿಸಿದರು. ಒಂದು ಸಭೆಯಲ್ಲಿ ಒಂದು ನಿಮಿಷ ಹಾಳಾದರೆ ಅದರಿಂದ ಇಡೀ ರಾಷ್ಟ್ರಕ್ಕೆ ಎಷ್ಟೋ ನಿಮಿಷಗಳು ಹಾಳಾದಂತಾಗುತ್ತದೆ. ಗಂಡಸರು ಹೆಂಗಸರಿಗೆ ಜಾಗ ಕೊಡುವುದನ್ನು ಕಲಿಯಬೇಕು. ಮತ್ತು ಯಾವ ದೇಶ ಇಲ್ಲವೆ ಜಾತಿ ಹೆಂಗಸರನ್ನು ಗೌರವಿಸುವುದಿಲ್ಲವೋ ಅದು ನಾಗರಿಕವೆಂದು ಕಾಣಿಸ್ಪಡಲಾರದು. ಸ್ವಾತಂತ್ರ್ಯ ಪಡೆದುಕೊಂಡ ನಂತರ ನಾವೆಲ್ಲ ಈಗ ಸ್ವತಂತ್ರವೂ ಅಭಿಮಾನಪೂರ್ಣವೂ ಆದ ದೇಶದ ಪ್ರಜೆಗಳಂತೆ ನಡೆದುಕೊಳ್ಳಬೇಕು. ಮುಂದೆ ಜನಸಂದಣಿ ಇನ್ನೂ ಹೆಚ್ಚಾಗಲೆಂದು ಗಾಂಧಿಯವರು ಹಾರೈಸಿದರು. ಹಾಗಾಗಬೇಕಾದರೆ ಪ್ರಾರ್ಥನೆಯು ಆತ್ಮದ ಆಹಾರವಾಗಿರುವುದರಿಂದ ಬರತಕ್ಕವರೆಲ್ಲ ಪ್ರಾರ್ಥನಾಭರಮನಸ್ಕರಾಗಿರಬೇಕು. ಬಂದವರು ಮೌನವನ್ನವಲಂಬಿಸುವುದಲ್ಲದೆ ಮನೆಗೆ ಹೋಗುವಾಗ ತಮ್ಮೊಡನೆ ಶಾಂತಿಯನ್ನೂ ತೆಗೆದುಕೊಂಡು ಹೋಗುವರೆಂದು ಅವರು ಆಶಿಸಿದರು.

ಕರ್ನಾಟಕ

ಧಾರವಾಡ

ಕರ್ನಾಟಕ ಎಜ್ಯುಕೇಶನ ಬೋರ್ಡಿನ ಶಿಕ್ಷಣ ಸಪ್ತಾಹ ಧಾರವಾಡದಲ್ಲಿ ಇದೇ ೨೪ ನೇ ತಾರೀಕಿನಿಂದ ಪ್ರಾರಂಭವಾಗುವದು. ಶಿಕ್ಷಣ ವಿಷಯುಗಳ ಚರ್ಚೆ, ಮಾಧ್ಯಮಿಕ ಶಿಕ್ಷಣದಲ್ಲಿ ಆಗಬೇಕಾದ ಮಾರ್ಪಾಟು ಇಂಗ್ಲಿಶಿನ ಸ್ಥಾನ ಮೊದಲಾದವುಗಳ ಬಗ್ಗೆ ೨೪ ಕ್ಕೆ ಚರ್ಚೆ ನಡೆಯುವದು. ೨೫ ಕ್ಕೆ ಬೋರ್ಡಿನ ಶಿಕ್ಷಣ ಸಂಸ್ಥೆಗಳಲ್ಲಿಯ ಹಳೆ ವಿದ್ಯಾರ್ಥಿಗಳ ಸ್ನೇಹ ಸಮ್ಮೇಲನ, ೨೬ ಕ್ಕೆ ಶಾರೀರಿಕ ಚಟುವಟಿಕೆ ನಡೆಯುವದು. ಕೊನೆಯ ಸಮಾರಂಭಕ್ಕೆ ಮುಂಬಯಿ ಸರಕಾರದ ಶಾರೀರಿಕ ಶಿಕ್ಷಣ ಸಮಿತಿಯ ಸಲಹೆಗಾರ ಶ್ರೀ ಮ್ಹಸ್ಕರರು ಬರುವರು.

ಹುಬ್ಬಳ್ಳಿ, ಕಲಘಟಗಿ ಹಾಗು ಬಂಕಾಪುರ ಭಾಗಗಳಲ್ಲಿ ಶೇಂಗಾ, ಕುಸುಬಿ ಹಾಗು ಎಳ್ಳಿನ ಖರೀದಿ ಹಾಗು ಮಾರಾಟದ ಮೇಲೆ ನಿಯಂತ್ರಣ ಹಾಕಬೇಕೆಂದು ಸರಕಾರದವರು ನಿಶ್ಚಯಿಸಿದ್ದು ಈ ಬಗ್ಗೆ ಸೂಚನೆ ಆಕ್ಷೇಪಗಳಿದ್ದವರು ಫೆಬ್ರುವರಿ ೨೯ ರೊಳಗಾಗಿ ಕಂದಾಯ ಶಾಖೆಯ ಕಾರ್ಯದರ್ಶಿಗಳಿಗೆ ತಿಳಿಸಬೇಕೆಂದು ಪ್ರಕಟನೆ ಹೊರಟಿದೆ.

ಇದೇ ತಿಂಗಳ ೨೯—೩೦ ನೇ ತಾರೀಕು ಕಲಕತ್ತೆಯಲ್ಲಿ ಜರುಗಲಿರುವ ಅಂತರ್ ವಿಶ್ವವಿದ್ಯಾಲಯದ ಪಂದ್ಯಾಟಗಳಿಗಾಗಿ ಕರ್ನಾಟಕ ವಿಭಾಗದಿಂದ ಮುಂಬಯಿ ವಿಶ್ವವಿದ್ಯಾಲಯದವರು ಕೆ. ಈ. ಬೋರ್ಡ ಕಾಲೇಜಿನ ಶ್ರೀ ಶಿಂದೆಯವರನ್ನು ಆರಿಸಿದ್ದಾರೆ. ಇವರು ೮೦೦, ೧೫೦೦, ೫೦೦೦ ಮೀಟರಗಳ ಸ್ಪರ್ಧೆಯಲ್ಲಿ ಭಾಗವಹಿಸುವರು.

ಬೆಳಗಾವಿ

ಬೆಳಗಾವಿಯ ಮೋಟರ ಒಡೆಯರಿಗೂ ಕೆಲಸಗಾರರಿಗೂ ಸಂಬಳಸಂಬಂಧದಲ್ಲಿ ಮತಭೇದವಾದ್ದರಿಂದ ಒಂದು ದಿನ ಸಂಪು ಹೂಡಲಾಗಿತ್ತು. ಆದರೆ ಒಡಂಬಡಿಕೆಯಾಗಿ ಸಂಪು ಕೊನೆಗಂಡಿತು.

ಬೆಳಗಾವಿಯ ಲಿಂಗರಾಜ ಕಾಲೇಜಿನಲ್ಲಿ ೧೦ ನೇ ತಾರೀಕು ಲಿಂಗರಾಜ ಜಯಂತಿ ಆಚರಿಸಲ್ಪಟ್ಟಿತು. ಆಟಪಾಟಗಳು ನಡೆದವು. ಸಂಜೆಯ ೫ ಗಂಟೆಗೆ ಶ್ರೀ ಅಂಗಡಿ ಷಣ್ಮುಖಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ಜರುಗಿ ಪಾರಿತೋಷಕಗಳನ್ನು ಅರ್ಪಿಸಲಾಯಿತು.

ಬೆಳಗಾವಿ ಸರದಾರ್ಸ ಹಾಯಸ್ಕೂಲಿನ ನಿವೃತ್ತ ಹೆಡ್‌ಮಾಸ್ತರ ಶ್ರೀ ಎ. ಎನ್. ಕರ್ನಾಟಕಿಯವರು ತಮ್ಮಲ್ಲಿದ್ದ ಬಹಳ ಬೆಲೆಬಾಳುವ ವಿಜ್ಞಾನ ಗ್ರಂಥಗಳನ್ನು ಲಿಂಗರಾಜ ಕಾಲೇಜಿನ ವಾಚನಾಲಯಕ್ಕೆ ಕೊಟ್ಟಿದ್ದು ಅದರ ಪ್ರಿನ್ಸಿಪಾಲ ಪರಮಶಿವಯ್ಯನವರು ಆದರಪೂರ್ವಕ ಅವನ್ನು ಸ್ವೀಕರಿಸಿದ್ದಾರೆ.

ಮುಂಬಯಿಯಲ್ಲಿ ವಿದ್ಯಾರ್ಥಿಗಳ ಮೇಲೆ ಸರಕಾರ ಗೋಲೀಬಾರ ಮಾಡಿದ್ದನ್ನು ನಿಷೇಧಿಸುವದಕ್ಕಾಗಿ ಸವದತ್ತಿಯ ಇಂಗ್ಲಿಶ ಶಾಲೆಯ ವಿದ್ಯಾರ್ಥಿಗಳು ಹರತಾಳ ಆಚರಿಸಿ ಸಭೆ ಸೇರಿಸಿ ಸರಕಾರದ ಕೃತಿಯನ್ನು ನಿಷೇಧಿಸಿದರು.

ಗೋಕಾಕದ ರೆಸಿಡೆಂಟ ಮ್ಯಾಜಿಸ್ಟ್ರೇಟರಾದ ಶ್ರೀ ಜಳವಿಯವರು, ಬೈಲಹೊಂಗಲದ ಶ್ರೀ ಸಂಗಪ್ಪಾ ಮುಟಗುಡ್ಡ ಮುಂತಾದವರ ಮೇಲೆ ಕಳ್ಳಪೇಟೆಯ ಅಪಾದನೆಯ ಮೇಲೆ ಹಾಕಲಾದ ಖಟ್ಲೆಯಲ್ಲಿ ಸಂಗಪ್ಪ ಇವರಿಗೆ ೧ ವರ್ಷ ಕಠಿನ ಶಿಕ್ಷೆ ೧೦ ಸಾವಿರ ರೂಪಾಯಿ ದಂಡ ವಿಧಿಸಿದರು. ಡ್ರಾಯವರರೂ ಕ್ಲೀನರ ಮತ್ತು ಹಮಾಲರಿಗೆ ತಲಾ ೬ ತಿಂಗಳ ಶಿಕ್ಷೆ ಒಂದು ಸಾವಿರ ರೂ. ದಂಡ ವಿಧಿಸಲಾಯಿತು, ಕಡಕೋಳ ಸಂಸ್ಥಾನ ಹದ್ದಿನಿಂದ ಬ್ರಿಟಿಶ್ ಹದ್ದಿಗೆ ಒಂದು ಮೋಟರ ಜೋಳವನ್ನು ತುಂಬಿ ಕಳ್ಳತನದಿಂದ ತಂದ ಬಗ್ಗೆ ಈ ಖಟ್ಲೆ ನಡೆದಿತ್ತು.

ವಿಜಾಪುರ

ಶ್ರೀ ಚನಬಸಪ್ಪ ಅಂಬಲಿಯವರ ಅಧ್ಯಕ್ಷತೆಯಲ್ಲಿ ಹೆರಕಲ ಭಾಗದ ರೈತ ಪರಿಷತ್ತು ಸೇರಿ ಆ ಭಾಗದ ಬೆಳೆ ಚೆನ್ನಾಗಿಲ್ಲದ್ದರಿಂದ ಬೇಗನೆ ಪಿ. ಡಬ್ಲ್ಯು. ಡಿ. ಮತ್ತು ಜಿಲ್ಲಾ ಬೋರ್ಡ ಕೆಲಸಗಳನ್ನು ಪ್ರಾರಂಭಿಸಬೇಕೆಂದೂ ಬೆಳೆಗಳ ನಿಜ ಪರಿಸ್ಥಿತಿಯನ್ನು ರೈತರಿಗೆ ತಿಳಿಸಬೇಕೆಂದೂ ಗೊತ್ತಾಯಿತು.

ಪ್ರಾಂತಾಧ್ಯಕ್ಷ ಶ್ರೀ ಎಸ್. ನಿಜಲಿಂಗಪ್ಪನವರು ಕಾಂಗ್ರೆಸ ನಿಧಿ ಕೂಡಿಸುವದಕ್ಕಾಗಿ ವಿಜಾಪುರ ಜಿಲ್ಲೆಯಲ್ಲಿ ಸಂಚರಿಸಲಿದ್ದು ೧೯ ನೇ ತಾರೀಕು ಬಾಗಲಕೋಟೆಗೆ ಹೋಗುವರು.

ಬಾಗಲಕೋಟೆಯ ಜೈನ ಪೇಟೆಯಲ್ಲಿರುವ ಅಂಬಾಬಾಯಿ ಗುಡಿಯಲ್ಲಿ ಭಾವಸಾರ ಕ್ಷತ್ರಿಯ ಸಮಾಜದ ವತಿಯಿಂದ ಶ್ರೀ ಬಾಳಕೃಷ್ಣಪ್ಪ ಏಡಕೆ ಇವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಶ್ರೀ ಸಕ್ರಿ ವೆಂಕಪ್ಪಣ್ಣ ಇವರಿಗೆ ಸನ್ಮಾನ ಮಾಡಲಾಯಿತು. ಆಗ ಶ್ರೀ ಸಕ್ರಿಯವರು ಭಾವಸಾರ ಕ್ಷತ್ರಿಯ ವಿದ್ಯಾವರ್ಧಕ ಸಂಘಕ್ಕೆ ೨೦೧ ರೂ.

ಬಳ್ಳಾರಿ

ಬಳ್ಳಾರಿಯಲ್ಲಿ ಸ್ಥಾಪಿತವಾಗಿರುವ ತಾರಾನಾಥ ಆಯುರ್ವೇದ ವಿದ್ಯಾಪೀಠವು ಭರದಿಂದ ಬೆಳೆಯಹತ್ತಿದ್ದು ಈಗ ೮೦ ವಿದ್ಯಾರ್ಥಿಗಳು ಅಭ್ಯಾಸಮಾಡಹತ್ತಿರುವರು ಬಳ್ಳಾರಿಯ ಸಾಹಿತಿಗಳನ್ನೊಳಗೊಂಡ ವಿವೇಕಮಂಟಪವೆಂಬ ಚರ್ಚಾಕೂಟವೊಂದು ಸ್ಥಾಪಿತವಾಗಿದ್ದು ತದ್ವಾರಾ ಚರ್ಚೆ ಲೇಖ ಮುಂತಾದವುಗಳು ನಡೆಯುವವು.

೧೧ ನೇ ತಾರೀಕು ಹಡಗಲಿ ತಾಲೂಕಿನ ಮತ್ತುನೂರು ಗ್ರಾಮದಲ್ಲಿ ಸಾರ್ವಜನಿಕ ಸಭೆ ಹೊಸಪೇಟೆ ಕಾಂಗ್ರೆಸ ಸಮಿತಿಯ ಅಧ್ಯಕ್ಷ ಮರಿಸ್ವಾಮಯ್ಯ ಮಠದ ಪಾಟೀಲ ಇವರ ಅಧ್ಯಕ್ಷತೆಯಲ್ಲಿ ಸೇರಿ ಅಂಧ್ರಪ್ರಾಂತದೊಡನೆಯೆ ಕರ್ನಾಟಕ ಪ್ರಾಂತವನ್ನು ರಚಿಸಬೇಕೆಂಬಾಶಯದ ಗೊತ್ತುವಳಿ ಸ್ವೀಕೃತವಾಯಿತು.

ಮಂತ್ರಾಲಯದಲ್ಲಿಯ ಶ್ರೀ ರಾಘವೇಂದ್ರ ವಾಚನಾಲಯದ ದ್ವಿತೀಯ ವಾರ್ಷಿಕೋತ್ಸವ ಇದೇ ೧ ನೇ ತಾರೀಕಿನಿಂದ ಮೂರುದಿನ ನಡೆದು ಶ್ರೀ ಕೆ. ನಾರಾಯಣ ರೆಡ್ಡಿ, ಕಸಬೆ ಪಾಂಡುರಂಗರಾವ ಇವರ ಭಾಷಣ ಹರಿಕಥೆ ಮುಂತಾದ ಕಾರ್ಯಕ್ರಮಗಳಾದವು.

ಶ್ರೀ ಸಿದ್ದಪ್ಪಾ ಕಂಬಳಿಯವರು ಬಳ್ಳಾರಿ ಜಿಲ್ಲೆಯಲ್ಲಿ ಏಕೀಕರಣದ ಪ್ರಚಾರಕ್ಕಾಗಿ ಹೋಗಿರುವರು. ೧೧ ನೆಯ ತಾರೀಕು ಬಳ್ಳಾರಿ ಸಾಂಬಮೂರ್ತಿ ಮೈದಾನದಲ್ಲಿ ಕೂಡಿದ್ದ ಸಾರ್ವಜನಿಕ ಸಭೆಯಲ್ಲಿ ಶ್ರೀ ಕಂಬಳಿ ಮತ್ತು ಕೊಳ್ಳಿ ವಕೀಲರು ಮಾತಾಡುತ್ತ ಏಕೀಕರಣದ ಅವಶ್ಯಕತೆಯನ್ನು ಪ್ರತಿಪಾದಿಸಿದರು. ಕರ್ನಾಟಕ ಪ್ರಾಂತೀಕರಣ ಆದಷ್ಟು ಬೇಗ ನಡೆಯಬೇಕೆಂಬ ಗೊತ್ತುವಳಿ ಸ್ವೀಕೃತವಾಯಿತು.

ಕೊಟ್ಟೂರಿನ ತರುಣ ಸಂಘದ ಕಾರ್ಯಕರ್ತರು ೧೧ ನೆಯ ತಾರೀಕು ಕರ್ನಾಟಕದ ಏಕೀಕರಣದ ಎಲ್ಲ ಕಾರ್ಯಕ್ರಮಗಳನ್ನು ಒಳ್ಳೆಯ ವಿಜೃಂಭಣೆಯಿಂದ ಜರುಗಿಸಿದರು. ಸಾಯಂಕಾಲ ಹಿಂದೀ ಪಂಡಿತ ಕೆ. ಎಂ. ರೇವಣ್ಣನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದಿತು. ಮೊದಲು ಕರ್ನಾಟಕ ಪ್ರಾಂತ ನಿರ್ಮಾಣವಾಗಿಯೇ ತೀರಬೇಕೆಂದು ನಿರ್ಧರಿಸಲಾಯಿತು. ವಂದೇ ಮಾತರಂ ಗೀತನಾದೊಡನೆ ಸಭೆ ಮುಕ್ತಾಯವಾಯಿತು.

ಉತ್ತರ ಕನ್ನಡ

ಜೋಗ ಜಲಪಾತದ ಅಂಚಿನಲ್ಲಿದ್ದ ಮಾವಿನಗುಂಡಿಯ ಸ್ವಾತಂತ್ರ್ಯ ಚೌಕದಲ್ಲಿ ಭವ್ಯವಾದ ಧ್ವಜಸ್ತಂಭ ನಿರ್ಮಾಣರಾಷ್ಟ್ರ ನಾಯಕರೊಬ್ಬರ ಶಿಲಾಮೂರ್ತಿ, ನೀರಿನ ಮತ್ತು ವಿದ್ಯುಚ್ಛಕ್ತಿಯ ವ್ಯವಸ್ಥೆ ಮಾಡುವದು, ಸಾರ್ವಜನಿಕರಿಗೆ ಧರ್ಮಶಾಲೆ ಇವುಗಳ ರಚನೆಗಾಗಿ ಸಮಿತಿಯೊಂದು ಸ್ಥಾಪಿತವಾಗಿದೆ. ಈ ಸಮಿತಿಯು ದ್ವೈವಾರ್ಷಿಕ ಯೋಜನೆಯೊಂದನ್ನಿಟ್ಟುಕೊಂಡಿದೆ. ಈ ಯೋಜನೆಗೆ ೮೦೦೦ ರೂಪಾಯಿ ವೆಚ್ಚದ ಅಂದಾಜು ಮಾಡಿದ್ದು ಎಲ್ಲರೂ ಶಕ್ತಿ ಮೀರಿ ಸಹಾಯ ಮಾಡಲು ಕೇಳಲಾಗಿದೆ. ಇದೇ ೧೧ ನೆಯ ತಾರೀಕು ಜರುಗಿದ ಸಭೆಯಲ್ಲಿ ಈ ಕೆಲಸಕ್ಕಾಗಿ ೪೦೦ ರೂಪಾಯಿಗಳ ವಾಗ್ದಾನ ದೊರೆತದ್ದಲ್ಲದೆ ೫೦ ರೂ. ನಗದಾಗಿ ವಸೂಲಾಗಿದೆ ಎಂದು ಮುಂತಾಗಿ ಪ್ರಧಾನ ಪ್ರಚಾರಕರು ತಿಳಿಸುತ್ತಾರೆ.

ಕಳೆದ ಬೇಸಿಗೆಯಿಂದ ಕುಮಟೆಯಲ್ಲಿ ಫೌಜದಾರರಾಗಿರುತ್ತಿದ್ದ ಶ್ರೀ ಶೇಖರವರಿಗೆ ಸೊಲ್ಲಾಪುರದಲ್ಲಿಯ ಯಾವದೋ ಪ್ರಕರಣದ ನಿಮಿತ್ತ ಬಡತರ್ಫ ಮಾಡಲಾಗಿದ್ದು ಅವರ ಸ್ಥಳಕ್ಕೆ ಹೊನ್ನಾವರದಲ್ಲಿಯ ಶ್ರೀ ಕುಲಕರ್ಣಿಯವರು ಬರಲಿರುವರೆಂದು ತಿಳಿಯುತ್ತದೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಮದ್ಯಪಾನ ಪ್ರತಿಬಂಧವನ್ನು ಹೆಚ್ಚು ಪ್ರಚುರಗೊಳಿಸಲು ಮತ್ತು ಗೋವೆಯಿಂದ ಕಳ್ಳತನದಿಂದ ಬರುತ್ತಿರುವ ಮದ್ಯವನ್ನು ಪ್ರತಿಬಂಧಿಸುವದಕ್ಕಾಗಿ ಜಿಲ್ಲಾ ಮದ್ಯಪಾನ ನಿರೋಧಕ ಸಮಿತಿಯವರು ಮದ್ಯಪಾನ ನಿರೋಧಕ ದಳವೊಂದನ್ನು ಸಂಘಟಿಸಲು ನಿಶ್ಚಯಿಸಿದ್ದಾರೆ.

ಧನ ಸಹಾಯ ಜಾಹೀರ ಮಾಡಿದ್ದಲ್ಲದೆ ಪ್ರತಿವರ್ಷ ಪ್ರಾಥಮಿಕ ಶಾಲೆಯ ಬಡ ವಿದ್ಯಾರ್ಥಿಗಳಿಗೆ ಶಿಕ್ಷಣದ ಬಗ್ಗೆ ೫೧ ರೂ. ಕೊಡುವದಾಗಿ ಸಾರಿದರು.

ದಕ್ಷಿಣ ಕನ್ನಡ

ಮುಚಿಲ್ನಾರು (ಕಾರ್ಕಳ) ಪ್ರಾಥಮಿಕ ಶಾಲೆಯ ಹೊಸ ಕಟ್ಟಡದ ಉದ್ಘಾಟನ ಸಮಾರಂಭ ೫ ನೇ ತಾರೀಕು ಡೆ. ಇನಸ್ಪೆಕ್ಟರ ಎಂ. ಶಿವರಾಮಗೌಡ ಇವರ ನೇತೃತ್ವದಲ್ಲಿ ಶ್ರೀ ಗೋಪಾಳ ಪೈ ಇವರಿಂದ ನೆರವೇರಿಸಲ್ಪಟ್ಟಿತು. ಶ್ರೀ ಎಂ. ಡಿ. ಅಧಿಕಾರಿಯವರು ರಾಷ್ಟ್ರಧ್ವಜವನ್ನೇರಿಸಿದರು. ಕೈಗಾರಿಕೆ ಹಾಗು ದನಗಳ ಪ್ರದರ್ಶನ, ರಾಷ್ಟ್ರಸೇವಾದಳದವರ ಕವಾಯಿತು ಶ್ರೀ ಜಿನರಾಜ ಹೆಗಡೆಯವರ ಅಧ್ಯಕ್ಷತೆಯಲ್ಲಿ ಸಭೆ ಹರಿಕಥೆ ಯಕ್ಷಗಾನ ಮೊದಲಾದ ಕಾರ್ಯಕ್ರಮಗಳು ನಡೆದವು.

ಹಿಂದುಸ್ತಾನ ಸ್ಕೌಟ ಅಸೋಸಿಯೇಶನದ ಪರವಾಗಿ ಮಣಿಪಾಲದಲ್ಲಿ ಪ್ರಾರಂಭವಾದ ಸ್ಕೌಟ ನಾಯಕರ ಶಿಕ್ಷಣ ಶಿಬಿರವನ್ನು ಬೇಗಂ ಪತ್ರಿಕೆಯ ಸಂಪಾದಕರಾದ ಶ್ರೀ ವಾಯಲೆಟ ಅಳ್ವಾರು ೮ ನೇ ತಾರೀಕು ಉದ್ಘಾಟಿಸಿದರು. ಈ ಶಿಬಿರವನ್ನು ಪ್ರಾಂತಿಕ ಸಂಘಟಕರಾದ ಶ್ರೀ ಎಂ. ರಾಜಗೋಪಾಲನ್ ಮತ್ತು ಕುಮಾರಿ ಗೌರಿ ಸುಂದರಂ ಇವರು ನಡೆಸುತ್ತಾರೆ.

ಮಂಗಳೂರು ನಗರಸಭೆ ೧೦ ನೆಯ ತಾರೀಕು ಸೇರಿ ಮಹಾತ್ಮರು ಸ್ವಾತಂತ್ರ್ಯ ಸಂಪಾದನೆಗಾಗಿ ಸಲ್ಲಿಸಿದ ಸೇವೆಯನ್ನು ಉಲ್ಲೇಖಿಸಿ ಅವರನ್ನು ಅಭಿನಂದಿಸಲಾಯಿತು. ರಾಜಗೋಪಾಳಾಚಾರ್ಯರ ೭೦ ನೆಯ ಜನ್ಮದಿನವನ್ನಾಚರಿಸಬೇಕೆಂದೂ ಆದಕ್ಕಾಗಿ ಸರಕಾರದವರು ೧೦೦೦ ರೂಪಾಯಿ ಧನಸಹಾಯ ಮಾಡುವದಾಗಿಯೂ ಬಂದ ಮದ್ರಾಸ ಸರಕಾರದ ಹುಕುಮನ್ನು ವಿಚಾರಿಸಲಾಯಿತು.

೧೧ ನೆಯ ತಾರೀಕಿನಿಂದ ಮಂಗಳೂರಿನ ಕಾದ್ರೋಳಿಯಲ್ಲಿರುವ ಶ್ರೀ ಗೀತಾಮಂದಿರದಲ್ಲಿ ಬ್ರಹ್ಮಶ್ರೀ ರಾಮಕೃಷ್ಣಾಚಾರ್ಯರು ಶ್ರೀ ಮದ್ರಾಮಾಯಣದ ವಚನ ಮತ್ತು ವ್ಯಾಖ್ಯಾನವನ್ನು ಪ್ರಾರಂಭಿಸಿರುವರು. ಪ್ರಾರಂಭದಲ್ಲಿ ಬೆಜೆಂಟ್ ಶಾಲೆಯ ಕನ್ನಡ ಪಂಡಿತ ವಿದ್ವಾನ್ ಪಿ. ಕೆ. ನಾರಾಯಣ ಇವರು ರಾಮಾಯಣದ ಮಹಾಪುರುಷರು ಎಂಬ ವಿಚಾರವಾಗಿ ಮಾತಾಡಿದರು. ಕೊನೆಯಲ್ಲಿ ಶ್ರೀ ಕೆ. ಶಂಕರಶಾಸ್ತ್ರಿಯವರು ವಂದನೆಗಳನ್ನರ್ಪಿಸಿದರು. ಪ್ರತಿ ರವಿವಾರವೂ ಈ ವ್ಯಾಖ್ಯಾನ ನಡೆಯುವದು.

ಶ್ರೀ ಭಂಡಾರಕೇರಿಮಠದ ಶ್ರೀಮನ್ಮಧ್ವಸಿದ್ಧಾಂತ ಸಂವರ್ಧಕ ಸಭೆ ಮಾಘಶುದ್ಧ ಸಪ್ತಮಿ, ಅಷ್ಟಮಿ, ನವಮಿ ತಾ. ೧೭, ೧೮, ೧೯ ಫೆಬ್ರುವರಿಯಲ್ಲಿ ಆಗುವದು. ವಿದ್ಯಾರ್ಥಿಗಳು ವಿದ್ವಾಂಸರು ಆ ಕಾಲಕ್ಕೆ ಇರತಕ್ಕದ್ದು. ಸಭಾ ಪ್ರಚಾರಕ್ಕಾಗಿ ಶ್ರೀ ಲಕ್ಷ್ಮೀನಾರಾಯಣಾಚಾರ್ಯರು ಹೊರಟಿದ್ದು ಎಲ್ಲರೂ ಅವರಿಗೆ ಸಹಾಯ ಸಲ್ಲಿಸಬೇಕು.

ಬೆಂಗಳೂರು—ಮೈಸೂರು

ಮೈಸೂರು ಸಂಸ್ಥಾನ ಕಾಂಗ್ರೆಸ ಅಧ್ಯಕ್ಷರಾದ ಶ್ರೀ ಟಿ ಸಿದ್ದಲಿಂಗಯ್ಯನವರು ೧೨ ನೇ ತಾರೀಕು ಮಧ್ಯಾಹ್ನದ ನಂತರ ಶ್ರೀ ಮಹಾರಾಜರನ್ನು ಕಂಡು ಕರ್ನಾಟಕ ಏಕೀಕರಣವನ್ನು ಕುರಿತು ಚರ್ಚೆ ನಡೆಸಿದರು. ತತ್ವರದಿಂದ ವಿಷಯದ ವಿಚಾರ ಮಾಡುವದಾಗಿ ಮಹಾರಾಜರು ಉತ್ತರ ಕೊಟ್ಟರೆಂದು ತಿಳಿಯುತ್ತದೆ.

ಕರ್ನಾಟಕ ಪ್ರಾಂತ ರಚನೆಯ ಸಂಬಂಧದಲ್ಲಿ ಮೈಸೂರು ಮುಖಂಡರೊಡನೆ ಮಾತಾಡುವದಕ್ಕಾಗಿ ಬೆಂಗಳೂರಿಗೆ ಆಗಮಿಸಿದ್ದ ಕನ್ನಡನಾಡ ಪ್ರಮುಖರಿಗೆ ಕನ್ನಡ ಸಾಹಿತ್ಯ ಪರಿಷತ್ತಿನವರು ಸಂತೋಷ ಕೂಟವನ್ನೇರ್ಪಡಿಸಿದ್ದರು.

ಪರಿಶೀಲಕ ಸಮಿತಿಯಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಮಾಡಲ್ಪಟ್ಟ ಮಂದಿರ ಪ್ರವೇಶ ಮಸೂದೆಯು ಮೈಸೂರು ನ್ಯಾಯವಿಧಾಯಕ ಸಭೆಯಲ್ಲಿ ಸ್ವೀಕೃತವಾಯಿತು. ಈಗ ಸರಕಾರದವರು ಮಸೂದೆಯನ್ನು ಸರಕಾರಿ ಅರ್ಧಸರಕಾರಿ ಹಾಗು ಖಾಸಗಿ ಈ ಎಲ್ಲ ದೇವಾಲಯಗಳಲ್ಲಿಯೂ ಅನ್ವಯಿಸುವ ಅಧಿಕಾರವನ್ನು ವಹಿಸಿರುವರು. ಅಂಗಡಿಗುಮಾಸ್ತರ ಮಸೂದೆಯೂ ಅಂಗೀಕೃತವಾಯಿತು.

ಮೈಸೂರಿನ ನಗರಭವನದ ಧ್ವಜಸ್ತಂಭದ ಹತ್ತರ ಶ್ರೀ ಜೆ. ಸ್ವಾಮಿದಾಸರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರುಗಿ ಜಾರಿಯಲ್ಲಿರುವ ಎಲ್ಲ ಬಗೆಯ ನಿಯಂತ್ರಣಗಳನ್ನು ಕೂಡಲೆ ಹಿಂತೆಗೆದುಕೊಳ್ಳಬೇಕೆಂಬ ಬಗ್ಗೆ ಭಾಷಣಗಳಾದ ಎಲ್ಲ ಹೋಟೆಲಗಳನ್ನು ಆರು ತಿಂಗಳ ಮುಚ್ಚಿಸಿ ಜನರಿಗೇ ಆಹಾರ ಪದಾರ್ಥ ಸಿಕ್ಕುವಂತೆ ನೋಡಿಕೊಳ್ಳಬೇಕೆಂದೂ ಅಭಿಪ್ರಾಯ ಪಡಲಾಯಿತು.

ಕನ್ನಡ ಸಂಸ್ಥಾನ

[illegible] ಮಹಾರಾಜರು ಕೂಡಲೆ ಇತ್ತ ಗಮನಿಸಿ ಪ್ರಜೆಗಳ ಆಕಾಂಕ್ಷೆಗಳನ್ನು ಪೂರೈಸಬೇಕೆಂದು ಮುಧೋಳದ ಪ್ರಜೆಗಳೆಲ್ಲರು ಬಯಸುತ್ತಾರೆ.

ಜತ್ತ ಸಂಸ್ಥಾನವನ್ನು ಮುಂಬಯಿ ಪ್ರಾಂತದಲ್ಲಿ ವಿಲೀನಗೊಳಿಸಲು [illegible] ಸಂಸ್ಥಾನೀ ಪ್ರಜೆಗೆ ರಾಜೇಸಾಹೇಬರು [illegible] ಗಲೆ ತಿಳಿಸಿರುವದಾಗಿಯೂ ಅದನ್ನು ಘಟನಾತ್ಮಕ ರೀತಿಯಲ್ಲಿ ಅವರು ಅದಕ್ಕೆ ಬೆಂಬಲ ಕೊಡಬೇಕಾಗಿದ್ದುದರಿಂದರ್೧ ಕ್ಕೆ ಪರಿಷತ್ತು ಸೇರಲಿರುವದು.

ಜಮಖಂಡಿಯಲ್ಲಿ ಬ್ಯಾಂಕ ಆಫ್ ಕರ್ನಾಟಕದ ಶಾಖೆಯು ಇದೇ ೫ ನೆಯ ತಾರೀಕಿನಿಂದ ಪ್ರಾರಂಭವಾಗಿದೆ ರಾಜೇಸಾಹೇಬರು ಇದರ ಪ್ರಾರಂಭೋತ್ಸವವನ್ನು ಜರುಗಿಸಿದರು.

ಅಕ್ಕಲಕೋಟ ಸಂಸ್ಥಾನದ ಕಾರ್ಯದ ಮುಖ್ಯ ಸುವ್ಯವಸ್ಥೆಯ ಅಧಿಕಾರವನ್ನು ಸೊಲ್ಲಾಪುರದ ಜಿಲ್ಲಾಧಿಕಾರಿಗಳು ವಹಿಸಿಕೊಂಡಿರುವರು. ದಕ್ಷಿಣ ಸಂಸ್ಥಾನಗಳ ರೀಜನಲ್ ಕಮೀಶನರಾದ ಶ್ರೀ ದೇಸಾಯಿಯವರು ಇನ್ನೂ ಹಿಂತಿರುಗಿಲ್ಲ.

ಕುರುಂದವಾಡ ಸಂಸ್ಥಾನದ ಕಂದಾಯ ಮಂತ್ರಿಗಳಾದ ಶ್ರೀ ವಿ. ಎಸ್. ಪಾಟೀಲರು ರಾಜೇಸಾಹೇಬರ ಅಪ್ಪಣೆ ಮೇರೆಗೆ ರಾಜಕೀಯ ಸಲಹೆಗಾರರಿಗೆ ತಮ್ಮ ಶಾಖೆಯ ಅಧಿಕಾರ ಒಪ್ಪಿಸಲು ನಿರಾಕರಿಸಿದ್ದರಿಂದ ತೊಡಕು ಉತ್ಪನ್ನವಾಗಿದೆ. ಅವರು ಶಾಸನ ಸಭೆಗೆ ಆಕ್ರಮರೀತಿಯಿಂದ ಆರಿಸಲ್ಪಟ್ಟಿರುವರೆಂದು ನಿರ್ಣಯ ಕೊಡಲ್ಪಟ್ಟಿರುವದು. ಆದರೆ ಅದರಿಂದ ತಮ್ಮ ಮಂತ್ರಿಪದಕ್ಕೆ ಏನೂ ಬಾಧೆ ಬರಲಿಲ್ಲೆಂದು ಪಾಟೀಲರ ವಾದ.

ಕೊಲ್ಹಾಪುರ ಪೇಟೆಗೆ ೯ ರಿಂದ ೧೧ ರ ವರೆಗೆ ೫೩೩೬೨ ಪೆಂಟಿ ಬೆಲ್ಲ ಬಂದಿದ್ದು ೩೩೩೯೨ ಪೆಂಟಿ ಮಾರಾಟಾಗಿದೆ. ಅದೇ ರೀತಿ ೧೬೩೯ ಚೀಲ ಶೇಂಗಾ ಬಂದಿದ್ದು ೯೫೩ ಚೀಲ ಮಾರಾಟಾಗಿದೆ. ೧೨ ನೇ ತಾರೀಖಿನ ದಿವಸ ಬೆಲ್ಲದ ಧಾರಣೆ ಹೆಚ್ಚೆಂದರೆ ೫೨—೧—೦ ಮತ್ತು ಕಡಮೆಯೆಂದರೆ ೨೭—೬—೦ ಇದ್ದಿತು.

ಕ್ಯಾನರಾ ಕಾಮರ್ಸ ಚೇಂಬರದ ವಾರ್ಷಿಕೋತ್ಸವವು ಮದ್ರಾಸದ ಲೋಕೋಪಯೋಗಿ ಶಾಖೆಯ ಮಂತ್ರಿಗಳಾದ ಶ್ರೀ ಭಕ್ತವತ್ಸಲಂ ಇವರ ಅಧ್ಯಕ್ಷತೆಯಲ್ಲಿ ಮಂಗಳೂರಿನಲ್ಲಿ ಸಾಂಗವಾಯಿತು. ಆರೋಗ್ಯ ಮಂತ್ರಿಗಳಾದ ಮಾನ್ಯ ಎ. ಬಿ. ಶೆಟ್ಟಿಯವರೂ ಈ ಸಮಾರಂಭಕ್ಕೆ ಆಗಮಿಸಿದ್ದರು. ಚೆಂಬರದ ಅಧ್ಯಕ್ಷರಾದ ಶ್ರೀ ವಿ. ಪಿಸ್. ಕುಡುವ ಇವರು ಪ್ರಾಸ್ತಾವಿಕ ಮಾತಾಡುತ್ತ ಜಿಲ್ಲೆಯ ಅವಶ್ಯಕತೆಗಳನ್ನು ವಿವರಿಸಿದರು. ಜೋಗ ಜಲಪಾತದಿಂದ ವಿದ್ಯುಚ್ಛಕ್ತಿಯ ಪೂರೈಕೆ, ಮಂಗಳೂರನ್ನು ದೊಡ್ಡ ಬಂದರವನ್ನಾಗಿ ಗ್ರಹಿಸುವದು ಮೊದಲಾದವುಗಳು ಮುಖ್ಯ ಬೇಡಿಕೆಗಳಾಗಿದ್ದವು. ಜೋಗ ಜಲಪಾತದಿಂದ ೬೦೦೦ ಕಿಲೋವ್ಯಾಟ್ಸದಷ್ಟು ವಿದ್ಯುತ್ ಪಡೆದುಕೊಳ್ಳಲು ಸರಕಾರ ನಿರ್ಧರಿಸಿದೆ. ಮದ್ರಾಸ ಸರಕಾರದ ಅಭಿಪ್ರಾಯದಂತೆಯೇ ಹಿಂದುಸ್ತಾನ ಸರಕಾರದವರು ಪಶ್ಚಿಮ ಕರಾವಳಿಯಲ್ಲಿ ದೊಡ್ಡ ಬಂದರದ ವಿಚಾರವಾಗಿ ಸಮಿತಿಯನ್ನು ನೇಮಿಸಿರುವರು ಮೊದಲಾಗಿ ಹೇಳಿದ್ದಲ್ಲದೆ ಕರ್ನಾಟಕ ಪ್ರಾಂತ ರಚನೆಯ ಬಗ್ಗೆ ತಮ್ಮ ಒಪ್ಪಿಗೆಯಿದೆಯೆಂದೂ ಮಂತ್ರಿಗಳು ಹೇಳಿದರು.

ವ್ಯಾಪಾರ ಪ್ರಪಂಚ

ಮುಂಬಯಿ ಶೇರಪೇಟೆ

ಮುಂಬಯಿ ತಾ. ೧೫

ಟಾಟಾ ಡಿಫರ್ಡ	೮೬೦೫—೦—೦
ಟಾಟಾ ಆರ್ಡಿನರಿ	೧೬೫—೦—೦
ಟಾಟಾ ಸ್ಟೀಲ ಪ್ರಿಫರನ್ಸ	೧೮೯೭—೦—೦
ಟಾಟಾ ಸ್ಟೀಲ ಆರ್ಡಿನರಿ	೪೭೫—೦—೦
ಸ್ವದೇಶಿ ಕರ್ನಾಟಕ ಪ್ರಿಫರನ್ಸ	೩೪೭—೬—೦
ಇಂಡಿಯನ ಆಯರ್ನ	೪೬—೬—೦
ಬಿರ್ಲಾ ಕಾರ್ಪೋರೇಶನ	೩—೧೫—೦
	೪—೪—೬

ಟೆಕ್ಸಟಾಯಿಲ್ಸ

ಅಹಮದಾಬಾದ ಅಡ್ವಾನ್ಸ	೫೪೦—೦—೦
ಮುಂಬಯಿ ಡಾಯಿಂಗ	೧೩೩೨—೮—೦
ಸೆಂಟ್ರಲ ಇಂಡಿಯಾ	೪೯೬—೦—೦
ಕೋಹಿನೂರ	೫೦೦—೦—೦
ಕಲ್ಯಾಣಿ ಟ್ರ್ಯಾಂಡ	೩೨೫.೦.೦
ಗೋಕಾಕ	೪೯೫—೦—೦
ಇಂಡಿಯನ್ ಬ್ಲೀಚಿಂಗ	೧೫೭—೦—೦
ಕೋಹಿನೂರು	೬೪೨—೦—೦
ಫೀನಿಕ್ಸ	೪೬೦—೦—೦
ಕೋಲ-ಪುರ	೬೨೮೫—೦—೦
ಸಿಂಪ್ಲೆಕ್ಸ	೨೪೧—೦—೦
ಸ ದೇಶಿ	೬೭೦—೦—೦
ವೆಸ್ಟ	೬೪೪—೦—೦

ಸಿಮೆಂಟ್ಸ

ಅಸೋಸಿಯೇಟೆಡ ಸಿಮೆಂಟ್ಸ	೧೮೭—೦—೦

ಇನ್ಶುರನ್ಸ

ನ್ಯೂ ಇಂಡಿಯಾ ಇನ್‌ಶುರನ್ಸ	೮೦—೮—೦

ಪ್ರಿಫರನ್ಸ

ಟಾಟಾ ಸ್ಟೀಲ ೧ ನೇ ಪ್ರಿಫರನ್ಸ	೨೦೫—೦—೦
,, ೨ ನೇ ,,	೧೫೦—೦—೦

ಬ್ಯಾಂಕುಗಳು

ಸೆಂಟ್ರಲ	೯೬—೮—೦
ಇಂಪೀರಿಯಲ (ಅಂಶತಃ)	೫೬೪—೧೨—೦
ಇಂಪೀರಿಯಲ (ಪೂರ್ಣ)	೨೨೬೦—೦—೦
ಇಂಡಿಯಾ	೨೪೪—೦—೦
ರಿಜರ್ವ	೧೦೬—೮—೦

ಎಣ್ಣೆ ಕಾಳುಗಳು

ಶೇಂಗಾ	೧೬೪—೦—೦
ಶೇಂಗಾ ಹೊಸದು	೧೬೪—೦—೦
ಅಗಸೆ	೩೦—೧೦—೦
ಅಗಸೆ ಎಣ್ಣೆ	೧೮—೮—೦

ಬಂಗಾರ

ತಯಾರಿ	೧೦೬—೧೪—೦
ವಾಯದೆ	೧೦೬—೮—೦
ಸಾವರಿನ	೬೮—೧೨—೦

ಬೆಳ್ಳಿ

ತಯಾರಿ	೧೬೮—೮—೦
ವಾಯದೆ	೧೬೭—೦—೦
ಜುಲೈ	೧೬೭—೧೪—೦
ಡಿಸೆಂಬರ	೧೬೭—೧೪—೦

ಅರಳೆ

ಜನೆವರಿ	೫೪೦—೦—೦
ಮಾರ್ಚ	೫೦೬—೧೨—೦
ಮೇ	೫೨೦—೦—೦
ಜುಲೈ	೫೨೫—೮—೦
ಸಪ್ಟಂಬರ	೫೦೮—೧೨—೦
ಹೆಚ್ಚು	೫೧೮—೧೨—೦ — ೫೧೯—೦—೦
ಕಡಿಮೆ	೫೦೪—೮—೦ — ೫೦೪—೦—೦

ಶಿವಮೊಗ್ಗೆ

೧೫

ಶಿವಮೊಗ್ಗೆ ಅಡಿಕೆಪೇಟೆಯ ಧಾರಣೆ ಮಣ ೧ ಕ್ಕೆ ರೂಪಾಯಿ ಲೆಕ್ಕ—

ಬೆಟ್ಟದವರ ನಂ. ೧ ಮಣ ೧ ಕ್ಕೆ	೪೮—೪೨
,, ,, ೨	೪೪—೪೮
,, ,, ೩	೨೮—೩೪
ರಾಶಿಇಲವು	೪೪—೩೮
ಕೋರಗಾಲು	೪೦—೩೫
ಬೆಟ್ಟ ಮಂತಿ	೧೮—೨೦
ಬೆಟ್ಟ	೧೫—೧೮

ನಿರ್ಯಾತ ಸೌಕರ್ಯವಿದೆ. ಬೆಲೆ ಇಳಿಮುಖವಾಗಿದೆ.

ಸಾಂಗಲಿ ಪೇಟೆ

ತಾ. ೧೨

ಅರಿಷಿಣ ಪೇರಿಗೆ	೧೨೪, ೧೨೭
ಹೊಸ ಮೆಣಸಿನಕಾಯಿ	೯೦—೧೨೫
ಬೆಲ್ಲ ಪೇರಿಗೆ	೫೫—೦—೦
ಶೇಂಗಾ ಹಿಂಡಿ	೧೨೪—೬—೦

ಹುಬ್ಬಳ್ಳಿ

ಹೊಸ ಜಯವಂತ ಹತ್ತಿ ನಂ. ೧	೪೪೫—೪೭೦
,, ,, ,, ೨	೪೨೦—೪೪೦
,, ,, ,, ೩	೪೦೦—೪೧೫
ಹಳೇ ಜಯವಂತ ಹತ್ತಿ	೪೫೫—೪೬೦
ಜಿನ ಹಳೆದು	೨೪೦—೨೪೬
ಜಿನ ಹೊಸದು	೨೨೦—೨೫೫
ಡಬಲರೋಲರ	೨೦೫—೨೩೦
ಸಾಜಿನ	೨೦೫—೨೦೫
ಹ. ಹತ್ತಿಕಾಳು	೮೫—೯
ಹತ್ತಿಕಾಳು	೮॥—೯

ತಾವರೆ ಕೊಳ

೧

ನಸುನಸುಕಿನಲಿ
ತಾವರೆ ಕೊಳದಲಿ
ಹಂಸನು ಬೀರುವುದು;
ಎಲ್ಲ ಕಡೆಯಲೂ
ಮೊಗ್ಗೆಗಳೇಳಲು
ಮನಕಾನಂದವದು!

೨

ಮೊಗ್ಗೆಯ ಬಾಯಿ
ತೆರೆಯಲು ಅರಳಿ,
ಮುತ್ತಿದೆ ರವಿಕಿರಣ!
ಹಿಗ್ಗನು ಹರಡುತ
ಬರುವುದ ಸೂಚಿಸ-
ಲೆಯ್ತರುತಿಹನರುಣ!

೩

ಹೂವಿನ ಅಂದ
ನೋಡಲು ಚಂದ;
ಬಗೆಗೊಳಿಸುವ ಬಣ್ಣ-
ಥಳಥಳಿಯಿದ್ದರು
ತನ್ನೆಡೆಗೆಳೆವುದು
ರಸಿಕಜನರನ್ನು!

೪

ಬೆಳಗಿನ ನೋಟ
ಶಾಂತಿಯ ಕೂಟ—
ಪ್ರಕೃತಿಯ ಚಿನ್ನಾಟ!
ಕಿರಿಮರಿದುಂಬಿ
ಹೂವನು ತುಂಬಿ
ಸವಿವುದು ರಸದೂಟ!

—ನಾ. ಶಂ. ಹೆಗಡೆ

ಪಟೇಲರ ಸ್ಪಷ್ಟೋಕ್ತಿ

(೬ನೆಯ ಪುಟದಿಂದ)

ಪಾಕಿಸ್ತಾನದ ಅರ್ಥಸಚಿವರು ಈ ೫೫ ಕೋಟಿ ರೂಪಾಯಿಗಳು ಪಾಕಿಸ್ತಾನದ ಹಣವೆಂದು ಹೇಳಬಂದಿದ್ದಾರೆ. ಈ ಬಗ್ಗೆ ವಿಭಜನಾ ಮಂಡಲದಲ್ಲಿ ಆದ ಗೊತ್ತುವಳಿಯು ಈ ರೀತಿ ಇದೆ.

“ ಈ ಮೊದಲೇ ಪಾಕಿಸ್ತಾನಕ್ಕೆ ಕೊಡಲಾದ ೨೦ ಕೋಟಿ ರೂ. ಗಳಲ್ಲದೆ ಹಿಂದುಸ್ತಾನದ ಶಿಲ್ಕು ಹಣ ಹಾಗೂ ಶಿಲ್ಕು ಹಣದ ವಿನಿಯೋಗ ಖಾತೆಯ ಲೆಕ್ಕದ ಬಗ್ಗೆ ಪಾಕಿಸ್ತಾನಕ್ಕೆ ಇನ್ನು ೫೫ ಕೋಟಿ ರೂ. ಕೊಟ್ಟರೆ ಪಾಕಿಸ್ತಾನದ ಎಲ್ಲ ಹಕ್ಕುಗಳಿಗೆ ತಕ್ಕ ಪ್ರತಿಫಲ ಮುಟ್ಟಿದಂತಾಗುವದು.”

ಈ ಗೊತ್ತುವಳಿಯ ಪ್ರಕಾರ ಹಿಂದುಸ್ತಾನ ಸರಕಾರವು ೫೫ ಕೋಟಿ ರೂ. ಕೊಟ್ಟ ಹೊರತು ಪಾಕಿಸ್ತಾನಕ್ಕೆ ಅದು ದೊರೆಯಲಾರದೆಂಬುದು ಸುಸ್ಪಷ್ಟವಾಗಿದೆ.

ರಿಝರ್ವ ಬ್ಯಾಂಕಿನ ಆಡಳಿತದಲ್ಲಿ ಹಿಂದುಸ್ತಾನ ಕೈಹಾಕಿಲ್ಲ

ಮೇಲಿನ ವಿವರಣೆಯಿಂದ ರಿಝರ್ವ ಬ್ಯಾಂಕು ಹಿಂದುಸ್ತಾನದ ಆಜ್ಞೆ ಇಲ್ಲದೆ ಪಾಕಿಸ್ತಾನಕ್ಕೆ ಹಣ ಕೊಡಲಾರದೆಂಬುದು ಒಡೆದು ಕಾಣುತ್ತಿದ್ದರೂ ಪಾಕಿಸ್ತಾನ ಅರ್ಥಸಚಿವರು ಈ ಬ್ಯಾಂಕಿಗೆ ಪಕ್ಷಪಾತದ ಆರೋಪ ಹೊರಿಸಿದ್ದಾರೆ. ಈ ಬ್ಯಾಂಕಿಗೆ ಮೊದಲ ಸಲ ಪಾಕಿಸ್ತಾನ ಸರಕಾರದಿಂದ ೫೫ ಕೋಟಿ ರೂ. ಯ ಬೇಡಿಕೆ ಬಂದದ್ದು ಇದೇ ತಿಂಗಳ ೬ ನೇ ತಾ. ದಿನ. ಅದಕ್ಕೆ ಸರಿಯಾದ ಉತ್ತರವನ್ನು ರಿಝರ್ವ ಬ್ಯಾಂಕಿನ ಗವ್ಹರ್ನರರು ಕೊಟ್ಟಿದ್ದಾರೆಂದು ನನಗೆ ತಿಳಿದು ಬಂದಿದೆ. ಹಿಂದುಸ್ತಾನ ಸರಕಾರದ ಕೈವಾಡ ಇದರಲ್ಲೇನಿದೆ? ಪಾಕಿಸ್ತಾನ ಸರಕಾರವು ರಿಝರ್ವ ಬ್ಯಾಂಕಿಗೆ ತಾತ್ಪೂರ್ತಿಕ ಸಾಲ ಕೇಳಲು ತನ್ನ ಹೊಣೆಗಾರಿಕೆಯ ಮೇಲೆ ಈ ಪ್ರಶ್ನೆ ನಿರ್ಣಯಿಸಬೇಕೆಂದು ಹಿಂದುಸ್ತಾನ ಸರಕಾರವು ಬ್ಯಾಂಕಿಗೆ ತಿಳಿಸಿತು. ಹಿಂದುಸ್ತಾನ ಸರಕಾರಕ್ಕೆ ರಿಝರ್ವ ಬ್ಯಾಂಕನ್ನು ಈ ವಿವಾದದಲ್ಲಿ ನೂಕುವ ಇಚ್ಛೆ ಇರಲಿಲ್ಲ. ಆದರೆ ಪಾಕಿಸ್ತಾನ ಸರಕಾರವು ಬ್ಯಾಂಕಿನ ಮೇಲೆ ಪಕ್ಷಪಾತದ ಆರೋಪ ಹೊರಿಸಿದ್ದರಿಂದ ಇದನ್ನು ಹೇಳಬೇಕಾಯಿತು. ಇದರಿಂದ ಪಾಕಿಸ್ತಾನದ ಪ್ರಾಮಾಣಿಕತೆಯು ಯಾವ ಆಳಕ್ಕೆ ಇಳಿದಿದೆ ಎಂಬುದು ತೋರದಿರದು.


ಒಟ್ಟಿನಲ್ಲಿ ಪಾಕಿಸ್ತಾನ ಸರಕಾರವು ನಗದು ಹಣಕ್ಕಾಗಿ ಅವಸರ ಮಾಡುವದರಿಂದ ಅವರ ಉದ್ದೇಶವು ಸಾಧಿಸಬಾರದು. ಇದರಿಂದ ಅವರ ಉದ್ದೇಶವು ಒಪ್ಪಂದದ ತಳಹದಿಗೆ ವಿರೋಧಕವಾಗಿರುವದೆಂದೇ ವ್ಯಕ್ತವಾಗುತ್ತದೆ. ಕಾರಣ ಈ ಬಗೆಯ ತವಕದ ಬೇಡಿಕೆಗಳನ್ನು ತಿರಸ್ಕರಿಸುವದೇ ಯುಕ್ತವಾಗಿರುತ್ತದೆ.



ಬ್ರಹ್ಮೀ ರಾಯಭಾರಿ ಸ್ವತಂತ್ರ ಬ್ರಹ್ಮದೇಶದ ಧ್ವಜ ಏರಿಸುತ್ತಿರುವದು.



ಬ್ರಹ್ಮೀ ಧ್ವಜಾರೋಹಣದಲ್ಲಿ ಹಿಂದುಸ್ಥಾನದ ಮಂತ್ರಿಗಳು ಹಾಗೂ ಇತರ ಪ್ರತಿಷ್ಠರು



ಪಂ. ಜವಾಹರರ ಪತ್ರಿಕಾ ಸಮ್ಮೇಲನ



ಮಹಾತ್ಮರು ನಿರಾಶ್ರಿತರನ್ನುದ್ದೇಶಿಸಿ ಭಾಷಣ ಮಾಡುವಾಗ ಕೂಡಿದ ಮಹಿಳಾವೃಂದ

ಕಾಸರಗೋಡ ಯಾತ್ರೆ

ಲೇಖಕ — ಶ್ರೀ. ಕೆ. ಆರ್. ಬೆಳ್ಳುಬ್ಬಿ, ಹುಬ್ಬಳ್ಳಿ

(ಪೂರ್ವಾರ್ಧ)

ಕಾಸರಗೋಡ ತಾ. ೨೯—೧೨—೪೭

ನಾನು ಊರಿಗೆ ಹೊರಡುವಾಗ್ಗೆ ನಿನ್ನ ಕರಾರ ಪ್ರಕಾರ ಈಗ ಮೊದಲನೇ ವರದಿ ಪ್ರವಾಸದ ಪೂರ್ವಾರ್ಧವನ್ನು ವಿವರಿಸುವೆ. ಅಸ್ತು. ಶ್ರೀಮನ್ಮಹಾ ಕಾಸರಗೋಡ ಯಾತ್ರಾರ್ಥ—ಹುಬ್ಬಳ್ಳಿಯಿಂದ ಹೊರಟ ನಾವು ಕಡೂರ ಮಾರ್ಗವಾಗಿ ಕಾಸರಗೋಡಿಗೆ ಹೊರಟೆವು. ಹುಬ್ಬಳ್ಳಿಯಿಂದ ಕಡೂರಿಗೆ—ರೈಲು ಗಾಡಿಯಲ್ಲಿ, ಆ ಮೇಲೆ ಚಿಕ್ಕಮಗಳೂರ, ಮಂಗಳೂರ ಕಡೆಗೆಲ್ಲ ಮೋಟರಿನಲ್ಲಿ ಕುಳಿತು ಪ್ರವಾಸ ಮಾಡಿದೆವು. ಆ ಮೋಟರ ಪ್ರಯಾಣದ ದಾರಿಯುದ್ದಕ್ಕೂ ಗಿರಿ ಕಂದರಗಳನ್ನು ಹತ್ತುತ್ತಿತ್ತು. ಹಾಗಿದ್ದಾಗ ಆ ವನರಾಜಿಯ ಸೊಬಗನ್ನು ನಾನು ಎಷ್ಟೆಂದು ವರ್ಣಿಸಲಿ. ನಾನು ಅಂಥ ಮಹಾ ಕವಿಯಾಗಿರಲಿಲ್ಲ. ಇಲ್ಲವಾದರೆ ದೊಡ್ಡ ಕವಿತೆಗಳ ಮೂಟೆಯನ್ನೇ ಕಿಂಚಿ ಬಿಡುತ್ತಿದೆ. ಅಲ್ಲಿಯ ಗುಡ್ಡಗಳು ನಿಮ್ಮ ಆ ಬೈಲಸೀಮೆಯ ಗುಡ್ಡಗಳಂತೆ ಬರಿ ಕಲ್ಲು ಮಣ್ಣಿನ ಭಣ ಭಣ ಒಣ ಒಣವಿರದೆ ಹಚ್ಚಹಸರಿರುವ ಅನಂತ ಗಿಡಗಳ ಆಚ್ಛಾದನದಿಂದ ಅತಿ ರಮ್ಯವಾಗಿದ್ದು ಬಹು ಆಲ್ಹಾದಕರವಾಗಿವೆ. ಆ ಸೊಬಗನ್ನು ಬರಿ ಶಬ್ದಗಳಲ್ಲಿ ವರ್ಣಿಸಿದರೆ ಆ ಆನಂದ ದೊರೆಯದು. ಅದನ್ನು ಪ್ರತ್ಯಕ್ಷ ಕಂಡ್ಡು ಅನುಭವಿಸಿ ಆನಂದಪಡೆಯಬೇಕು. ಅಂದರೆ ತೃಪ್ತಿಯಾಗುವದು. ನನಗಂತೂ ಅದನ್ನು ಸವಿಯುತ್ತ ನಾನು ಇಲ್ಲೇ ಎಲ್ಲಾದರೊಂದು ಗಿರಿ ಕಂದರದಲ್ಲಿ, ಜುಳು ಜುಳು ಹರಿಯುವ ನದಿಯ ತಟದಲ್ಲಿ, ಆ ವಿವಿಧ ಗಿಡಗಂಟೆಗಳ ಗುಂಪಿನಲ್ಲಿ ಮನಶ್ಯಾಂತಿಯನ್ನು ಪಡೆಯಲು, ಆಶ್ರಯಸ್ಥನಾಗಿ ಬಿಡಬೇಕೆಂದೆನಿಸುತ್ತದೆ. ಆದರೆ ನಿನ್ನ ಪ್ರೇಮಬಂಧನದಿಂದ ಬಿಗಿಯಲ್ಪಟ್ಟು ನಿನ್ನ ಸೆರೆಯಾಳಾದ ನನಗೆ ಆ ಸ್ವಾತಂತ್ರ್ಯವೆಲ್ಲಿ?

ಇಷ್ಟೆಲ್ಲ ಅಲ್ಲಿಯ ವನಸೊಬಗಾಯಿತು. ಇನ್ನು ಅಲ್ಲಿಯ ಜನಜೀವನವನ್ನು ನೋಡಿದೆ. ಅಲ್ಲಿಯವರ ಜೀವನ ಅವರು ಕಾಡಿನಲ್ಲಿರುತ್ತಿದ್ದರೂ ಕಾಡಜೀವನವಲ್ಲ. ಅವರದು ಮುಖ್ಯವಾಗಿ ಕೃಷಿಜೀವನ, ಅಲ್ಲದೆ ಋಷಿಜೀವನ. ಆ ಗಿರಿ ಕಂದರಗಳ ಮಧ್ಯದಲ್ಲಿ ಅಲ್ಲಲ್ಲಿ ಹುಲ್ಲುಗದ್ದೆಗಳನ್ನು ಮಾಡಿಕೊಂಡು ಅಲ್ಲಿಯೇ ಅವರ ವಾಸ. ನಿಸರ್ಗದೊಡನೆ ಅವರ ಜೀವನ ಬೆರೆತಿದೆ. ಸ್ವತಂತ್ರ ಉದ್ಯೋಗ ಅಲ್ಲದೆ ಸ್ವಂತ ದುಡಿಯುವವರು. ಎಲ್ಲ ಹಿರಿ-ಕಿರಿಯರೂ ಕಷ್ಟಜೀವಿಗಳು. ಹೋಗಹೋಗುತ್ತಿದ್ದಂತೆ ನನಗೆ ಎಲ್ಲಿಗೆ ಯಾವ ಊರು ಮುಗಿಯಿತು, ಎಲ್ಲಿಂದ ಯಾವ ಊರು ಪ್ರಾರಂಭವಾಯಿತು ಎಂಬುದೇ ಗೊತ್ತಾಗುತ್ತಿದ್ದಿಲ್ಲ. ಏಕೆಂದರೆ ಅಲ್ಲಿಗೊಂದು, ಇಲ್ಲಿಗೊಂದು ಮನೆಗಳು ಇದ್ದೇ ಇರುತ್ತವೆ. ಹಾಗೆ ಆ ರೀತಿ ಉದ್ದಕ್ಕೂ ಬೆಳೆದಿದೆ. ಇನ್ನು ಮನೆಗಳೋ ದೊಡ್ಡವೆಂದರೆ ಮಂಗಳೂರ ಹಂಚಿನಿಂದ ಹೊಚ್ಚಲ್ಪಟ್ಟವು. ಚಿಕ್ಕವೆಂದರೆ ಹುಲ್ಲು ಚಪ್ಪರದವು ಇರುತ್ತವೆ. ಮತ್ತು ಇದ್ದುದದಲ್ಲಿ ಅಚ್ಚುಕಟ್ಟು, ಅವಾರ ಗೋಡೆಗಳಿವೆ. ಅಷ್ಟರಲ್ಲಿಯೇ ತೋಟಪಟ್ಟಿ ಮಾಡಿಕೊಂಡು, ಮಾವು ಮಲ್ಲಿಗೆ ಮತ್ತಿತರ ಹಣ್ಣು ಹೂ ಕೊಡುವ ಗಿಡ ಬಳ್ಳಿಗಳಿಂದ ಆವೃತವಾಗಿದ್ದು, ಆನಂದದಾಯಕವಾಗಿವೆ. ಅಕ್ಕಿ ಅನ್ನದ ಊಟ, ನಿಸರ್ಗದೊಡನೆ ಆಟ, ಕೃಷಿ ಜೀವನದೊಡನೆ ಗುದ್ದಾಟ. ಇದೇ ಅವರ ಜೀವನದ ನಿತ್ಯದೋಟ. ಇವೆಲ್ಲವನ್ನು ನೀನು ಕಂಡಿದ್ದರೆ ನಿಜವಾಗಿಯೂ ಈ ಸ್ಥಳವನ್ನು ಬಿಟ್ಟು ಕದಲುತ್ತಿರಲಿಲ್ಲ. ನಂದನದ ರಂಭೆಯಾಗಿ ಚಿನ್ನಾಟವಾಡುತ್ತ ಇಲ್ಲಿಯೇ ಇರಲು ಬಯಸುತ್ತಿದ್ದಿ. ಅಲ್ಲಲ್ಲಿ ಹರಿಯುವ ತಿಳಿನೀರಿನ ಝರಿಗಳು ಕಾಲುವೆಗಳು, ಹೊಳೆ ಕೆರೆಗಳು ಆ ನಿಸರ್ಗ ಸೌಂದರ್ಯಕ್ಕೆ ಒಪ್ಪುತ್ತವೆ. ಸಮುದ್ರ ಅದರ ದಡ, ದಡದಲ್ಲಿರುವ ಟೆಂಗು ಮರ, ಇವನ್ನೆಲ್ಲ ವರ್ಣಿಸುತ್ತ ಹೋದರೆ ಅದೇ ಒಂದು ಮಹಾ ಕಾವ್ಯವೇ ಆಗುತ್ತದೆ. ಒಟ್ಟಿನಲ್ಲಿ ಆ ಪ್ರದೇಶ ಬಹುರಮ್ಯವಾದದ್ದು. ಇವನ್ನು ನೋಡಲಾಗಲಿಲ್ಲವೆಂದು ನೀನು ಸಿಟ್ಟಾಗಬಹುದಲ್ಲವೆ? ಇನ್ನು ಅನುಭವಿಸಿದ ಅಡಚಣಿಗಳನ್ನು ಹೇಳುತ್ತೇನೆ.

ಹುಬ್ಬಳ್ಳಿ ಮುಂಜಾನೆ ೬ ಗಂಟೆಗೆ ಬಿಟ್ಟವರು ಎರಡೂವರೆ ಗಂಟೆಗೆ ಕಡೂರಿಗೆ ಮುಟ್ಟಿದೆವು. ಅಲ್ಲಿಂದ ಮೋಟರಿನಲ್ಲಿ ಚಿಕ್ಕಮಗಳೂರಿಗೆ ಹೋದೆವು. ಮಂಗಳೂರಿಗೆ ಹೋಗಲು ಮರುದಿನದ ವರೆಗೆ ಮೋಟರ ಇಲ್ಲದ್ದಕ್ಕಾಗಿ ಅಲ್ಲಿಯೇ ಕಾಯುತ್ತ ಬೀಳಬೇಕಾಯಿತು. ಅಂತೂ ಮರುದಿನ ಮುಂಜಾನೆ ೬ ಗಂಟೆಗೆ ಚಿಕ್ಕಮಗಳೂರಿಂದ ಮಂಗಳೂರಿಗೆ ಮೋಟರಿನಲ್ಲಿ ಹೊರಟೆವು. ಅಖಂಡ ೭ ತಾಸಿನ ಪ್ರವಾಸ ಬೆನ್ನು ಮುರಿಯುವಂಥದು, ಅಲ್ಲದೆ ಅಲ್ಲಲ್ಲಿ ಆ ಮೋಟರಿನಿಂದ ಈ ಮೋಟರಿಗೆ ಬದಲಾಯಿಸುವದು, ಗುಡ್ಡ ಹತ್ತಿ ಸುತ್ತುತ್ತ ಹೋಗುವದು ಅಂತೂ ೨ ಗಂಟೆಗೆ ಮಂಗಳೂರಿಗೆ ಬಂದಿಳಿದೆವು. ಅಷ್ಟು ಹೊತ್ತಿನಲ್ಲಿ ಯಾವ ಖಾನಾವಳಿಯೂ ಊಟದ ವ್ಯವಸ್ಥೆ ಇದ್ದಿಲ್ಲ. ಹೊಟ್ಟೆಯ ಕಾಟ ತಪ್ಪಿಸಲು ಏನಾದರೊಂದು ತಿನ್ನಬೇಕಾಯಿತು. ಮುಂದೆ ೫ ಗಂಟೆಯ ರೈಲು ಮಾರ್ಗವಾಗಿ ಕಾಸರಗೋಡಿಗೆ ತಲುಪಿದೆವು. ಅಂತೂ ಇಷ್ಟೆಲ್ಲ ಕಷ್ಟಗಳನ್ನು ಅನುಭವಿಸುತ್ತಿರುವಾಗ ನೀನಿದ್ದಿದ್ದರೆ ನನ್ನ ಈ ಕಷ್ಟ ಅನುಭವಿಸುವದನ್ನು ನೋಡಿ ನನಗೆ ಮತ್ತಷ್ಟು ಕಷ್ಟವಾಗುತ್ತಿದ್ದಿಲ್ಲವೆ? ಇದಷ್ಟು ಪ್ರವಾಸದ ಕಾಲಕ್ಕೆ ಆದ ಅನುಭವವಾಯಿತು. ಇನ್ನು ಮುಂದಿನ ಪತ್ರದಲ್ಲಿ ಕಾರ್ಯಕಲಾಪಗಳನ್ನು ವಿವರಿಸುತ್ತೇನೆ. ಇಲ್ಲಿ ಕ್ಷೇಮ. ನಿನ್ನ ಕ್ಷೇಮ ಸಮಾಚಾರವನ್ನು ತಿಳಿಯಲು ನಾನು ಬಹು ಆತುರನಾಗಿದ್ದೇನೆ. ತೀವ್ರ ಪತ್ರ ಬರೆ. ಇಂತು —

ನಿನ್ನವ

(ಉತ್ತರಾರ್ಧ)

ಮಂಗಳೂರ ತಾ. ೧—೧—೪೮

ಎನ್ನ ಮನದನ್ನೇ,

ಇದು ಹೊಸ ವರ್ಷದ ಹೊಸ ದಿನವಿದೆ. ಇದು ಕ್ರಿಶ್ಚನ್ನರ ದೊಡ್ಡ ಹಬ್ಬದ ದಿನ. ನೀನಾದರೂ ಹೊಸ ವರ್ಷವು ಶುಭದಾಯಕವಾಗಲೆಂದು, ಬೇಡಿಕೊಂಡೆಯೋ? ಇರಲಿ, ಇನ್ನು ಮುನ್ನಿನ ಕಾರ್ಯಕಲಾಪಗಳ ವರ್ಣನೆಯನ್ನು ಹೇಳುವಂಥವನಾಗುತ್ತೇನೆ, ಚಿತ್ತಗೊಟ್ಟು ಓದುವಂಥಾಕೆಯಾಗು. ಕಾಸರಗೋಡ ಕಾರ್ಯಕ್ರಮಗಳಲ್ಲಿ ಮೊದಲನೆಯದಾದ ಮೆರವಣಿಗೆಯು ಬಹು ಚನ್ನಾಗಿ ರಮ್ಯವಾಗಿ ರಚಿಸಿದ ರಥದಲ್ಲಿ ಅಧ್ಯಕ್ಷರೆಯವನ್ನು ಕೂಡ್ರಿಸಿದರು. ಆ ರಥವನ್ನು ಎಳೆಯಲು ೩೧ ಜೋಡು ಎತ್ತುಗಳನ್ನು ಒಂದರ ಮುಂದೊಂದು ಜೋಡಿನಂತೆ ಕಟ್ಟಿದ್ದರು. ಅಧ್ಯಕ್ಷರಯರು ಎಲ್ಲರಿಗೂ ಕಾಣುವಂತೆ ಪೆಟ್ರಮ್ಯಾಕ್ಸಗಳನ್ನು ಹಿಡಿದಿದ್ದರು. ಮೈಲುದ್ದವಾದ ಮೆರವಣಿಗೆ. ಆ ಊರ ಹೆದ್ದಾರಿ ಗಂಡಸರು ಹೆಂಗಸರಿಂದ ನಿಬಿಡವಾಗಿದ್ದಿತು. ವಿವಿಧ ವಾದ್ಯಗಳಿಂದಲೂ ಜನರ ಜಯಘೋಷಗಳಿಂದಲೂ ಕಿವಿಗಡಚಿಕ್ಕುವಂತಿದ್ದಿತು ಅಂತೂ ಚನ್ನಾಗಿದ್ದಿತು. ಇಳಿದುಕೊಳ್ಳಲು ಸ್ತ್ರೀಯರಿಗೂ ಪುರುಷರಿಗೂ ದಂಪತಿಗಳಿಗೂ ಪ್ರತ್ಯೇಕ ಸ್ಥಳ ಕೊಟ್ಟಿದ್ದರು. ಊಟ—ಉಪಚಾರ ಒಟ್ಟಿನಲ್ಲಿ ಚನ್ನಾಗಿದ್ದಿತು. ೨ ವೇಳೆ ಕಾಫಿ ಫಲಾಹಾರಗಳನ್ನು ಕೊಡಲಾಗುತ್ತಿತ್ತು. ಮಧ್ಯಾನ್ಹ ಮತ್ತು ಸಂಜೆ ೨ ವೇಳೆ ಊಟ ಹಾಕುತ್ತಿದ್ದರು. ಮಲಗಿಕೊಳ್ಳಲು, ಹೈಸ್ಕೂಲ ಖೋಲಿಗಳನ್ನೆಲ್ಲ ಜನರಿಗಾಗಿ ಕೊಟ್ಟಿದ್ದರು. ಮತ್ತು ಸಭಾಭವನಕ್ಕೂ ಇಳಿದುಕೊಳ್ಳಲೂ ಊಟದ ಸ್ಥಳಕ್ಕೂ ಸ್ವಲ್ಪ ದೂರವಿದ್ದಿತು. ಸಭಾಭವನವನ್ನು ಅತಿ ಎತ್ತರದ ಮೇಲೆ ಕಟ್ಟಿದ್ದರು. ಅಲ್ಲದೆ ಅಧ್ಯಕ್ಷರ ವೇದಿಕೆಯ ಸ್ಥಳವು ಗ್ಯಾಲರಿಯಂತೆ ಮಾಡಿದ್ದು ಅದರ ಎತ್ತರದ ಗ್ಯಾಲರಿಯಲ್ಲಿ ವೇದಿಕೆ ಕಟ್ಟಿಸಿದ್ದರು. ಅದರ ಮುಂದೆ ಸ್ವಲ್ಪ ಕೆಳಗಡೆ ಅಂಗಳದಲ್ಲಿ ಸುತ್ತ ಪುಸ್ತಕ ಮತ್ತು ಕಲಾವಸ್ತು ಪ್ರದರ್ಶನಕ್ಕಾಗಿ ಅಂಗಡಿಗಳನ್ನು ರಚಿಸಿದ್ದು, ಅಲ್ಲಿಯೇ ಮಧ್ಯ ರಾಷ್ಟ್ರಧ್ವಜ ಮತ್ತು ಪರಿಷತ್ತಿನ ಧ್ವಜ ಈ ಎರಡೂ ಧ್ವಜ ಸ್ತಂಭಗಳನ್ನು ನಟ್ಟಿದ್ದರು. ಅದರ ಮುಂದೆ ಅದಕ್ಕೂ ಸ್ವಲ್ಪ ಕೆಳಗಿರುವ ಅಂಗಳದಲ್ಲಿ ಸಮಿತಿಯ ಕಚೇರಿಗಳನ್ನು ಕಟ್ಟಿದ್ದರು. ಸಭಾಭವನದಲ್ಲಿ ಸಭಿಕರಿಗೆ ಕೂತುಕೊಳ್ಳಲು ಸಮುದ್ರದ ಉಸುಕಿನ ಹಾಸು ಹಾಸಿದ್ದರು. ಗಂಡಸರು ಹೆಂಗಸರಿಗೂ ಪತ್ರಿಕಾ ಪ್ರತಿನಿಧಿಗಳಿಗೂ ಪ್ರತ್ಯೇಕ ಸ್ಥಳಗಳನ್ನು ಏರ್ಪಡಿಸಿದ್ದರು. ಅಧ್ಯಕ್ಷ ವೇದಿಕೆಯು ಸಾಕಷ್ಟು ಅಗಲವಾಗಿದ್ದು ರಾತ್ರಿಯಲ್ಲಿ ರಂಗ ಮಂಟಪವಾಗುವಂತೆ ರಚಿತವಾಗಿತ್ತು ಅಲ್ಲಿಯೇ ವಿವಿಧವಿನೋದಾವಳಿಗಳು ಜರಗುತ್ತಿದ್ದವು. ಸಭಾಭವನದ ಸುತ್ತೆಲ್ಲ ಕಮಾನುಗಳನ್ನು ರಚಿಸಿದ್ದರು. ವಿವಿಧ ವರ್ಣದ ಕಾಗದದ ತೋರಣಗಳಿಂದ ಸಭಾಭವನವನ್ನು ಅಲಂಕರಿಸಿದ್ದರು. ಆ ಊರಲ್ಲಿ ವಿದ್ಯುದ್ದೀಪಗಳ ಸಾರ್ವಜನಿಕ ಸೌಕರ್ಯವಿಲ್ಲದಿದ್ದರೂ ಪ್ರತ್ಯೇಕ ವ್ಯವಸ್ಥೆ ಮಾಡಿದ್ದು ಸಭಾಭವನವು ಪ್ರಕಾಶಮಯವಾಗಿದ್ದಿತು. ಭಾಷಣಗಳು ಎಲ್ಲರಿಗೂ ಕೇಳುವಂತೆ ಧ್ವನಿವಾಹಕ ಯಂತ್ರಗಳ ವ್ಯವಸ್ಥೆಯೂ ಮಾಡಲ್ಪಟ್ಟಿತ್ತು. ಇದು ಶಾಭುನೀಯವೇ ಇಷ್ಟೆಲ್ಲ ಸಭಾಭವನದ ವಿಸ್ತಾರವಾಯಿತು. ಇನ್ನು ಕಾರ್ಯಕಲಾಪಗಳನ್ನು ನೋಡುವಾ...

ಶ್ರೀಮಾನ್ ತಾತಾಚಾರ್ಯರು ಪರಿಷತ್ತಿನ ಧ್ವಜವನ್ನು ಆರೋಹಣ ಮಾಡುವಾಗ್ಗೆ ಅದು ಮೇಲೆ ಬಿಚ್ಚದೆ, ಅರ್ಧಕ್ಕೆ ಇಳಿಸಿದಾಗ ಒಮ್ಮೆಲೇ ಬಿಚ್ಚಿದ್ದು ಒಂದು ಅಪಶಕುನವಾದಂತಾಯಿತು. ಅದಕ್ಕಾಗಿ ಎಷ್ಟೋ ಜನರಲ್ಲಿ ತರ್ಕವಿತರ್ಕಗಳ ತಾಕಲಾಟವೆದ್ದಿತು. ಕೆಲವರು ಕರ್ನಾಟಕಸ್ಥರ ಏಕತಂತ್ರ ಮಹಾ ಕರ್ನಾಟಕ ನಿರ್ಮಾಣದ ಪ್ರಯತ್ನವು ಸಫಲವಾಗುವ ಲಕ್ಷಣವಿಲ್ಲೆಂದು, ಕೆಲವರು ಸಮ್ಮೇಲನವು ಸುಸೂತ್ರ ಕೊನೆಗಾಣುವ ಲಕ್ಷಣವಿಲ್ಲೆಂದು, ಮತ್ತೆ ಕೆಲವರು ಮತ್ತಿನ್ನೇನೋ ಕಲ್ಪಿಸಿದರು.

ಆದರೆ ಸಮ್ಮೇಲನದ ಕೊನೆಯ ದಿನದ ಅಧಿವೇಶನದ ಮುಕ್ತಾಯದ ಮಂಗಲ ಪ್ರಸಂಗದಲ್ಲಿ ಕೆಲ ಜನರು ಸಭೆಯ ನಿಯಮವನ್ನು ಮೀರಿ ಕಾಡ ಕಗ್ಗರಂತೆ ವರ್ತಿಸಿ ಅಧ್ಯಕ್ಷರನ್ನು ಕಣೆಗಣಿಸಿದ್ದು ಶಿವಪೂಜೆಯಲ್ಲಿ ಕರಡಿ ಬಿಟ್ಟಂತಾಯಿತು. ಆ ವಿಷಯ ಬೇರೆ

ಅಧ್ಯಕ್ಷರ ಭಾಷಣಪೂರ್ವದಲ್ಲಿ ಉದ್ಘಾಟಕರಾದ ಶ್ರೀ. ಜಹಗೀರದಾರರ ಭಾಷಣ ಇದ್ದಿತು. ಅವರು ತಮ್ಮ ಭಾಷಣಕ್ಕೆ ನ್ಯಾಯದಾನ ಮಾಡಿದರೆನ್ನಬಹುದು.

ಇನ್ನು ಅಧ್ಯಕ್ಷರ ಭಾಷಣ ಅತ್ಯಂತ ಗಂಭೀರವೂ ವಿಚಾರಪೂರ್ಣವೂ ಅಲ್ಲದೆ ಉದ್ದವಾದದ್ದು ಇತ್ತು. ಅಧ್ಯಕ್ಷರೇ ಸ್ವತಃ ಎಲ್ಲವನ್ನೂ ಓದುವದಾಗದ್ದಕ್ಕೆ ಅಲ್ಲಲ್ಲಿ ಅಷ್ಟಷ್ಟನ್ನು ಹೇಳಿದರು. ಅದರಿಂದ ಕೆಲವರು ಬೇಸರಪಟ್ಟಿರಬಹುದು.

ಇನ್ನು ಶ್ರೀರಂಗರ ಭಾಷಣ— ಅದು ನೋಡು ಅಲ್ಲೋಲಕಲ್ಲೋಲ ಮಾಡಿತು ಎಲ್ಲರನ್ನು. ಕೆಲವರು ಅತಿ ಕಠೋರವೆಂದೂ ಕೆಲವರು ವಿಷವಿಮರ್ಶೆಯೆಂದೂ ಟೀಕಿಸಿದರು. ನಿಜ ಕಂಡದ್ದನ್ನಾಡಿದರೆ ಕೆಂಡದಂಥ ಕೋಪವಲ್ಲವೇ? ಅವರು ನಿಜವಾಗಿ ಕಠೋರವಾಗಿ ಸದ್ಯದ ಸ್ಥಿತಿಗತಿಯನ್ನು ವಿಮರ್ಶಿಸಿದ್ದರು. ಇದರಿಂದಲೇ ಮೂವರಲ್ಲಿ ಇವರೇ ಹೆಚ್ಚಾಗಿ ಗುಣಪಡೆದವರು.

ಮೂರು ದಿನವೂ ಅನೇಕ ವಿವಿಧ ವಿನೋದಾವಳಿಗಳನ್ನಾಡಿ ತೋರಿಸಿದರು. ನಾಟಕಗಳು ಫಾರ್ಸು ಗಾಯನ ನೃತ್ಯ ವಾದ್ಯ, ವಾದನ ಇವೆಲ್ಲವುಗಳಲ್ಲಿ ಅಲ್ಲಿಯ ಹೆಣ್ಣುಮಕ್ಕಳು ಹೆಚ್ಚಾಗಿ ಭಾಗ ತೆಗೆದುಕೊಂಡಿದ್ದರು. ಇದು ಅವರಲ್ಲಾದ ಪ್ರಗತಿಯನ್ನು ಸೂಚಿಸುವದಿಲ್ಲವೇ? ಯಕ್ಷಗಾನ ಯಕ್ಷ ನಾಟಕಗಳು ಜರುಗಿದವು. ಅಲ್ಲಿಯ ಚಿಕ್ಕಮಕ್ಕಳು ಬಹು ಧೈರ್ಯದಿಂದ ಕೆಲಸ ಮಾಡುತ್ತಿದ್ದರು. ಅವೆಲ್ಲವುಗಳಲ್ಲಿ 'ಕರೆನಾಡು ನಮ್ಮ ನಾಡು' ಎಂಬ ಭಾವನೃತ್ಯ ಕಲಾಪೂರ್ಣವಾಗಿದ್ದು ಮನಸ್ಸಾಕರ್ಷಕವಾಗಿದ್ದಿತು. ಮಹಿಳಾ ಗೋಷ್ಠಿಯಲ್ಲಿ ಮಹಿಳೆಯರು ಮಾಡಿದ ಕೆಲಸ ಅವರ್ಣನೀಯವು. ಯಾವದಕ್ಕೂ ಯಾರು ಯಾರನ್ನು ಕರಿಸಿಕೊಳ್ಳದೆ ತಾವೇ ಮುಂದೆ ಬಂದು ತಮ್ಮ ತಮ್ಮ ವಿಷಯ, ಕಾವ್ಯಗಾಯನವನ್ನಾಗಲಿ ಭಾಷಣಗಳನ್ನಾಗಲಿ ಪ್ರಬಂಧ ವಾಚನವಾಗಲಿ ನಿರ್ವಹಿಸುತ್ತಿದ್ದರು. ನಮ್ಮ ಹೆಣ್ಣುಮಕ್ಕಳಾಗಿದ್ದರೆ ತಲೆ ಎತ್ತಿ ಕೂಡ ನಿಲ್ಲುತ್ತಿರಲಿಲ್ಲ. ಅವರಿಗೆ ಸಭೆಯಲ್ಲೇಕೆ ಕೇವಲ ಹೆಂಗಸರ ಮಧ್ಯದಲ್ಲಿ ನಡುಮನೆಯಲ್ಲಿ ಯಾರಾದರೂ ಒಂದು ಹಾಡು ಹಾಡೆಂದು ಬಾಯ್ದೆರೆದು ಬೇಡಿಕೊಂಡರೂ ಹೇಡಿಗಳಂತೆ ಓಡಿ ಹೋಗುವರು. ನಮ್ಮ ಹೆಣ್ಣು ಮಕ್ಕಳಲ್ಲಿ ಧೈರ್ಯವಿಲ್ಲ. ಸ್ವತಂತ್ರ ಕಾರ್ಯ ನಿರ್ವಹಣ ಶಕ್ತಿಯಿಲ್ಲ. ಕೇವಲ ಕಡುಕೋಪ ಮಾತ್ರ. ಸಾಕು ಮಾಡುವೆ. ಇದನ್ನು ಓದುತ್ತಿದ್ದಂತೆ ಸ್ತ್ರೀ ಪಕ್ಷಪಾತಿಯಾದ ನಿನಗೆ ಈಗಾಗಲೇ ಸಿಟ್ಟು ಸಿಡಿಲೆರಗಿ ಗುಡುಗುಡಿಸುತ್ತಿರಬಹುದು. ಆದರೆ ನಾನೀಗ ಇರುವದು ಇಷ್ಟು ದೂರ. ಬಿಟ್ಟ ದಡಿಯುಳ್ಳಿ; ಇದೊಂದು ನನಗೆ ಧೈರ್ಯ. ನಿನ್ನ ಪತ್ರಚಾರದ ವಿನಾ ನಾನೀಗ ಊರಿಗೆ ಬರಲು ಕೂಡ ಹೆದರುತ್ತಿದ್ದೇನೆ.

ಆಗಾಗ್ಗೆ ನಾನು ಪುಸ್ತಕದಂಗಡಿಗಳಲ್ಲಿ ಹೋಗಿ ಕುಳಿತುಕೊಳ್ಳುತ್ತಿದ್ದೆ. ಆಗ ಹೆಣ್ಣುಹುಡುಗಿಯರ ತಂಡ ಪುಸ್ತಕದಂಗಡಿಗೆ ಬರುತ್ತಿತ್ತು. ಆ ಪುಸ್ತಕ ಈ ಪುಸ್ತಕ ನೋಡುತ್ತ 'ಅಯ್ಯಾ ಗಂಡಸ್ಸತ್ತಿ ಅದೇನ ಮಾಡ್ಲಿಕ್ಕೆ— ಇದು ಕಲಿತವರ ಬಾಳ್ವೆ ಇದ್ದೀತು. ಕಲಿತ ಹೆಂಡತಿ ಗಂಡನಿಗೆ ಅಡಿಗಿ ಮಾಡ್ಲಿಕ್ಕೆ ಹಚ್ಚಿದ್ದಾಳು ಇಷ್ಟೆ— ಇದು ಸಾವಿತ್ರಿ ಸತ್ಯವಾನ, ನಿತ್ಯ ಜೀವನ ಗೊತ್ತೇ ಇದೆ ಎಂದು ಮುಂತಾಗಿ ಹರಟೆ ಹೋಗುತ್ತಿದ್ದರು. ಇನ್ನು ಗಂಡು ಹುಡುಗರು ಬಂದರೆ ಗೊತ್ತೇ ಇದೆ. ಕೇವಲ. ಸ್ವರತಿ, ಕಾಮಜೀವನ ಇವೇ ಅವರಿಗೆ ಬೇಕು. ಕೆಲವು ಹುಡುಗರು ಕೇಳುವದು ಕೇವಲ ಕ್ರಯಪಟ್ಟಿಯನ್ನಷ್ಟೇ. ಏತಕ್ಕಾಗಿ ಕೇಳುತ್ತಿರಬಹುದು ಎಂದು ವಿಚಾರ ಮಾಡಿದೆ. ನಾನೂ ಒಂದು ತೆಗೆದುಕೊಂಡು ನೋಡಿದೆ; ಆ ಮೇಲೆ ತಿಳಿಯಿತು. ಕಾರಣ ಆ ಕ್ರಯಪಟ್ಟಿಯ ಮುಖ ಚಿತ್ರವಾಗಿ ಸುಭಾಷರ ಚಿತ್ರವಿದ್ದಿತು. ಅವರಲ್ಲೂ ಅದು ಪುಕ್ಕಟೆ ದೊರೆಯುತ್ತಿದ್ದುದು. ಇದು ಸುಭಾಷರಮೇಲಿನ ಪ್ರೇಮವನ್ನು ವ್ಯಕ್ತ ಮಾಡುತ್ತದೆ ಇದು ಕ್ರಾಂತಿಯುಗ. ಕ್ರಾಂತಿಪುರುಷನಲ್ಲವೇ ಅವನು? ಪುಸ್ತಕ ವ್ಯಾಪಾರಿಗಳಿಗೆ ಪುಸ್ತಕಗಳನ್ನು ಬಂದವರು ನಾಲ್ಕೆಂಟು ಎತ್ತಿಕೊಂಡು ಹೋಗದಂತೆ ಕಾಯುವದೇ ಒಂದು ಮಹತ್ವದ ಕೆಲಸ. ಹಾಗೆ ಹೋಗದಿದ್ದುದೇ ಒಂದು ಮಹತ್ವದ ಉಳಿತಾಯ. ವ್ಯಾಪಾರ ಹೆಚ್ಚಾಗಿಲ್ಲದೆ ಖರ್ಚು ಮೈಮೇಲೆ ಬರುವಂತಿದ್ದುದರಿಂದ ನಾನು ತಲೆಪಟ್ಟೆ ಎತ್ತಬೇಕೆಂದಿದ್ದೇನೆಂದು ಒಬ್ಬ ಪುಸ್ತಕ ವ್ಯಾಪಾರಿ ಹೇಳಿದನು. ಏನು ಪುಸ್ತಕಕೊಳ್ಳುವವರಿದ್ದಿಲ್ಲವೋ? ಕೊಳ್ಳುವಂಥ ಪುಸ್ತಕಗಳು ಇವರಲ್ಲಿರಲಿಲ್ಲವೋ? ಈ ವಿಚಾರವೇ ಹೊಳೆಯಲಿಲ್ಲ. ಇರಲಿ. ಇತಿಶ್ರೀ ಮನ್ಮಹಾಯಾತ್ರಾ ಪುರಾಣ ಇಲ್ಲಿಗೆ ಮುಗಿದುದು. ನಾನು ಇಂದೇ ಇಲ್ಲಿಗೆ ಬಂದಿದ್ದೇನೆ, ನಾಳೆ ಹಾಗೆ ಸ್ವಲ್ಪ ಉಡುಪಿಗೆ ಹೋಗಿ ಬರಬೇಕೆಂದಿದ್ದೇನೆ. ಬರಲೇ ನಾನಿನ್ನು?

ಇಂತು ನಿನ್ನವ

ನಮ್ಮ ರಾಷ್ಟ್ರಮುದ್ರೆ



ಮುಂಬಯಿ

ಸಮಾಜವಾದಿ ಪಕ್ಷದ ವಾರ್ಷಿಕ ಸಮ್ಮೇಲನವನ್ನು ಫೆಬ್ರುವರಿ ೨೦-೨೨ಕ್ಕೆ ನಾಸಿಕ ಜಿಲ್ಲೆಯ ಮನಮಾಡಿಯಲ್ಲಿ ಕರೆಯಬೇಕೆಂದು ಗೊತ್ತಾಗಿದೆ. ಕಾಂಗ್ರೆಸ್ಸಿನೊಡನೆ ಯಾವ ಬಗೆಯ ಸಂಬಂಧವಿಟ್ಟುಕೊಳ್ಳಬೇಕೆಂಬುವದನ್ನು ಈ ಪರಿಷತ್ತಿನಲ್ಲಿ ಚರ್ಚಿಸಲಾಗುವದು.

ಮುಂಬಯಿ ಶಾಸನ ಸಭೆಯ ಕಾಂಗ್ರೆಸ ಪಕ್ಷದ ಸಭೆ ಶ್ರೀ ಬಿ. ಜಿ. ಖೇರರ ಅಧ್ಯಕ್ಷತೆಯಲ್ಲಿ ಸೇರಿ ಮುಂಬಯಿ ಸರಕಾರದವರು ಕೋಮಿ ಕಾರದ ಸಂಬಂಧದಲ್ಲಿ ಸ್ವೀಕರಿಸಿದ ಧೋರಣ ಸಮಂಜಸವೆಂದು ಅಭಿಪ್ರಾಯ ಪಡಲಾಯಿತಲ್ಲದೆ ರಾಜಕೀಯ ಉದ್ದೇಶ ಸಾಧನೆಗೆ ಕೆಲವೊಂದು ಜನರು ಮುಂಬಯಿಯಲ್ಲಿ ಇತ್ತೀಚೆಗೆ ನಡೆಸಿದ ಸಾಂಕೇತಿಕ ಸಂಪು ಹಾಗು ಮುಶಪ್ರದರ್ಶನ ತಪ್ಪಾದುದೆಂದೂ ಅಭಿಪ್ರಾಯ ಪಡೆಯಲಾಯಿತು. ಮುಸ್ಲಿಂ ಲೀಗ ಸದಸ್ಯರೇ ತಮ್ಮ ಪಕ್ಷಕ್ಕೆ ರಾಜೀನಾಮೆ ಕೊಟ್ಟು ಕಾಂಗ್ರೆಸ ಪಕ್ಷದಲ್ಲಿ ಸೇರಬಯಸಿದರೆ ಅವರನ್ನು ತೆಗೆದುಕೊಳ್ಳಬೇಕೆಂಬ ಬಗ್ಗೆ ಚರ್ಚೆಯಾಗಿ ಮುಂದಿನ ಸಭೆಗೆ ಮುಂದುವರಿಸಲಾಯಿತು.

ಮುಂಬಯಿಯಲ್ಲಿರುವ ಸಾವಂತವಾಡಿ ಸಂಸ್ಥಾನದ ನಿವಾಸಿಗಳು ೧೧ ನೆಯ ತಾರೀಕು ಸಭೆ ಸೇರಿ ಸಂಸ್ಥಾನದಲ್ಲಿ ಹೊಸ ಸರಕಾರ ಸ್ಥಾಪಿತವಾದರೆ ಅದರಲ್ಲಿ ಸಂಸ್ಥಾನ ಪ್ರಜಾಪರಿಷತ್ತಿನ ಕಿಸಾನ ಪಕ್ಷದ ಸದಸ್ಯರೂ ಇರಬೇಕೆಂದು ಸಂಸ್ಥಾನದ ಅಧಿಕಾರಿಗಳಿಗೆ ತಿಳಿಸಿದ್ದಾರೆ.

ಗುಜರಾಥದಲ್ಲಿ ಭೂಮಿಗಳಿಲ್ಲದ ಪರತಂತ್ರ ಕೂಲಿಕಾರ ಜನರು (ಹಾಲಿ) ತಮ್ಮನ್ನು ಮೇ ೧ ರೊಳಗಾಗಿ ಜಮೀನುದಾರರಿಂದ ಪೂರ್ಣ ಮುಕ್ತ ಮಾಡುವ ಕಾಯಿದೆ ಮಾಡದಿದ್ದರೆ ಹಾಲಿ ಜನರೆಂಕ ಹೋರಾಟ ಹೂಡುವದಾಗಿ ಬೆದರಿಕೆ ಹಾಕಿದ್ದಾರೆ.

ಸುರತದಲ್ಲಿಯ ಘೋಟಾ ಮಂದಿರ ವೊದಲಾದ ದೇವಾಲಯಗಳ ಅಧಿಕಾರಿಗಳು ದೇವಾಲಯಗಳು ತಮ್ಮವೆಂದು ಹರಿಜನ ಪ್ರವೇಶಕ್ಕೆ ವಿರೋಧ ಪ್ರದರ್ಶಿಸಿ ದೇವಾಲಯಗಳ ಬಾಗಿಲು ಮುಚ್ಚಲು ನಿರ್ಧರಿಸಿದ್ದಾರೆ.

ಕಾಠೇವಾಡದ ರಾಯಸಂಕಲಿ ಹಾಗು ಧಾಸಾದ ತಾಲೂಕುದಾರರಾದ ದರ್ಬಾರ ಗೋಪಾಲದಾಸರು ಸನ್ಯಾಸವನ್ನು ತೆಗೆದುಕೊಂಡಿದ್ದು ತಮ್ಮ ಆಸ್ತಿಯನ್ನೆಲ್ಲ ಹಿಂದುಸ್ಥಾನ ಸರಕಾರ ಸಂಸ್ಥಾನ ಖಾತೆಗೆ ಒಪ್ಪಿಸಿಕೊಟ್ಟಿರುವರು. ಕಾಠೇವಾಡದ ಉಳಿದ ತಾಲೂಕದಾರರೂ ಹೀಗೆ ಮಾಡಬೇಕೆಂದು ಕೋರಿದ್ದಾರೆ.

ಹೈದರಾಬಾದದ ಏಜಂಟ ಜನರಲ್ಲರಾದ ಶ್ರೀ ಮುನಶಿಯವರು ಮುಂಬಯಿ ಮುಖ್ಯಮಂತ್ರಿ ಶ್ರೀ ಖೇರರನ್ನು ಭೆಟ್ಟಿಯಾಗಿ ಹೈದರಾಬಾದ ಗಡಿಯಲ್ಲಿ ಸಂಸ್ಥಾನದ ಬಗ್ಗೆ ವಿಚಾರ ವಿನಿಮಯ ಮಾಡಿದರು. ಅವರು ಮುದ್ರಾಸ ಗಡಿಯ ಪರಿಸ್ಥಿತಿಯ ಅಭ್ಯಾಸ ಮಾಡಲು ಮುದ್ರಾಸಕ್ಕೆ ಹೋಗಲಿರುವರು.

ಕಾಂಗ್ರೆಸ ಕಾರ್ಯಕಾರೀ ಮಂಡಳದಲ್ಲಿ ಸೇರಲು ಸಾಮ್ಯವಾದಿಗಳು ಸಿದ್ಧರಿಲ್ಲೆಂದೂ ಆ ಬಗೆಯ ತಮ್ಮ ನಿರ್ಣಯವನ್ನು ಬೇಗ ರಾಷ್ಟ್ರಪತಿಗಳಿಗೆ ತಿಳಿಸಲಿರುವರೆಂದೂ ತಿಳಿಯುತ್ತದೆ.

ಅಹಮದಾಬಾದದ ಸುಪ್ರಸಿದ್ಧ ಠಕೋರದ್ವಾರ ಗಾದ್ದಿಯಲ್ಲಿ ಗುಜರಾಥದ ಕಾಂಗ್ರೆಸ ಕಾರ್ಯಕರ್ತರಾದ ರವಿ ಶಂಕರ ಮಹಾರಾಜರು ಹರಿಜನರನ್ನು ಕರೆದುಕೊಂಡು ಪ್ರವೇಶಿಸಲು ಪ್ರಯತ್ನಿಸಿದರು ಸನಾತನಿಗಳು ಕರಿ ನಿಶಾನೆ ಪ್ರದರ್ಶಿಸಿ ವಿರೋಧಿಸಿದರು. ಪೋಲೀಸರು ಬಂದರು. ಆದರೆ ಪೋಲೀಸರನ್ನು ಹಿಂತೆಗೆದುಕೊಳ್ಳಲಿಲ್ಲ ರವಿ ಶಂಕರರು ಉಪವಾಸವನ್ನು ಪ್ರಾರಂಭಿಸಿದ್ದಾರೆ. ಪ್ರತಿಯಾಗಿ ಕೆಲವು ಬ್ರಾಹ್ಮಣರು ಉಪವಾಸ ನಡೆಸಿರುವರು.

ಬಂಗಾಲ

ಯುದ್ಧ ವಿರೋಧಕರ ಜಾಗತಿಕ ಪರಿಷತ್ತು ೧೯೪೯ ಜನವರಿ ತಿಂಗಳಲ್ಲಿ ಕರೆಯಲು ಶಾಂತಿನಿಕೇತನದ ಮಿತ್ರ ಸಂಘದವರು ಮಹಾತ್ಮರೊಡನೆ ವಿಚಾರವಿನಿಮಯ ಮಾಡಿ ನಿರ್ಧರಿಸಿದ್ದಾರೆ. ಇದರ ಪೂರ್ವಭಾವಿಯಾಗಿ ಹಿಂದುಸ್ಥಾನದಲ್ಲಿಯ ಯುದ್ಧ ವಿರೋಧಕರ ಪರಿಷತ್ತನ್ನು ಇದೇ ೧೯೪೮ಕ್ಕೆ ರಸೂಲಾಬಾದದಲ್ಲಿ ಕರೆಯಲಾಗಿದೆ.

ಇಪ್ಪತ್ತನಾಲ್ಕು ಪರಗಣ ಜಿಲ್ಹೆಯಲ್ಲಿಯ ಖಾರಿ ಎಂಬ ಹಳ್ಳಿಯಲ್ಲಿ ಜನೇವರಿ ೧೧ಕ್ಕೆ ದಂಗೆ ಸಂಭವಿಸಿ ೬೫ ಮನೆಗಳು ಬೆಂಕಿಗೆ ಆಹುತಿಯಾದವು. ೩೦೦೦ ಜನ ನಿರ್ವಾಸಿತರಾಗಿರುವರೆಂದು ಅಧಿಕೃತ ಪ್ರಕಟನ ಹೊರಟಿದೆ.

ಬಿಹಾರ

ಬಿಹಾರದ ಗವರ್ನರರಾಗಿ ನೇಮಿಸಲ್ಪಟ್ಟ ಶ್ರೀ ಮಾಧವರಾವ ಅಣೆಯವರು ೧೪ ನೆಯ ತಾರೀಕು ದಿನ್ನು ಅಧಿಕಾರ ಸ್ವೀಕರಿಸಿದರು.

ಹಿಂದುಸ್ಥಾನ

ಹೊಸದಿಲ್ಲಿ

ಸ್ವತಂತ್ರ ಹಿಂದುಸ್ಥಾನದಲ್ಲಿ ಪ್ರತಿಯೊಬ್ಬ ನಾಗರಿಕನಿಗೆ ಸಮಾನ ಹಕ್ಕು ಬಾಧ್ಯತೆಗಳಿರುವವು. ದ್ವಿ ರಾಷ್ಟ್ರವಾದಿಗಳಿಗೆ ಹಿಂದುಸ್ಥಾನದಲ್ಲಿ ಸ್ಥಾನವಿಲ್ಲ ಎಂದು ಹಿಂದುಸ್ಥಾನ ಸರಕಾರದ ಶಿಕ್ಷಣ ಮಂತ್ರಿಗಳಾದ ಮೌಲಾನಾ ಅಬುಲ್ ಕಲಂ ಅಝಾದರು ದಿಲ್ಲಿಯ ಸಾರ್ವಜನಿಕ ಸಭೆಯೊಂದರಲ್ಲಿ ಭಾಷಣಮಾಡುತ್ತ ಅಭಿಪ್ರಾಯಪಟ್ಟರು. ಮುಸ್ಲಿಂ ಲೀಗಿನವರು ಪಾಕಿಸ್ತಾನವನ್ನು ಬೇಡಿ ಮುಸಲ್ಮಾನರನ್ನು ಯಹೂದಿಗಳ ಸ್ಥಿತಿಗೆ ಇಳಿಸಿದರು. ಮುಸಲ್ಮಾನರನ್ನು ಜಾತೀಯತೆಯಿಂದ ನಿರಂತರ ಮುಕ್ತ ಮಾಡುವದಕ್ಕಾಗಿ ಪ್ರಾಮಾಣಿಕ ಮುಸಲ್ಮಾನರ ಪಡೆಯೊಂದು ಬೇಕಾಗಿದೆಯೆಂದು ಮುಂತಾಗಿಯೂ ಅವರು ಹೇಳಿದರು.

ಪಾಕಿಸ್ತಾನಕ್ಕೆ ನಿಜಾಮರು ಸಾಲಕೊಟ್ಟದ್ದರ ಸಂಬಂಧದಲ್ಲಿ ಹಿಂದುಸ್ಥಾನ ಸರಕಾರದ ಮಂತ್ರಿಗಳು ದೀರ್ಘ ವಿಚಾರವಿನಿಮಯ ಮಾಡಿದರು. ನಿಜಾಮರು ಯಥಾಸ್ಥಿತಿ ಒಪ್ಪಂದಕ್ಕೆ ಸಹಿಹಾಕಿದಂದಿನಿಂದ ಅದನ್ನು ಮುರಿಯುತ್ತಲೆ ಬಂದಿರುವರೆಂದೂ ಈಗ ಪಾಕಿಸ್ತಾನಕ್ಕೆ ಸಾಲಕೊಟ್ಟದು ಮಿತ್ರ ದ್ರೋಹವೆಂದೂ ಅಭಿಪ್ರಾಯ ಪಡಲಾಯಿತು. ಹೈದ್ರಾಬಾದದ ಆಯಾತ ನಿರ್ಯಾತವನ್ನು ಪ್ರತಿಬಂಧಿಸುವದು ಹಿಂದುಸ್ಥಾನದ ಸೈನ್ಯವನ್ನು ಅಲ್ಲಿಯೇ ಇಡುವದು ಮೊದಲಾದ ಯೋಜನೆಗಳನ್ನು ಹಿಂದುಸ್ಥಾನ ಸರಕಾರ ಕೈಕೊಳ್ಳಲಿದೆ.

ಕಾಶ್ಮೀರದಲ್ಲಿ ನುಗ್ಗಿರುವ ಧಾಳಿಗಾರರನ್ನು ಹೊಡೆದೋಡಿಸುವ ಕಾರ್ಯದಲ್ಲಿ ಹಿಂದೀ ಹಾಗೂ ಕಾಶ್ಮೀರಿ ಪಡೆಗೆ ನೆರವಾಗಲು ನೇಪಾಲದಿಂದ ಗುರಖಾ ಸೈನಿಕರನ್ನು ಕಳಿಸಲಾಗುವದೆಂದು ತಿಳಿಯುತ್ತದೆ.

ಭಾರತದ ಜನತೆಯು ತನ್ನ ಭೇದಭಾವಗಳನ್ನು ಬದಿಗಿರಿಸಿ ರಾಷ್ಟ್ರಹಿತಕ್ಕಾಗಿ ಎಲ್ಲರೂ ದುಡಿಯಬೇಕೆಂದು ಪಟಿಯಾಲಾದ ಮಹಾರಾಜರು ಪ್ರಕಟನೆಯ ಮೂಲಕ ಬಿನ್ನವಿಸಿಕೊಂಡಿದ್ದಾರೆ.

ಅಖಿಲ ಭಾರತ ಕಾಂಗ್ರೆಸ ಸಮಿತಿಯು ಮೊದಲು ಗೊತ್ತುಪಡಿಸಿದಂತೆ ಈ ತಿಂಗಳ ಕೊನೆಯಲ್ಲಿ ಕೂಡದೆ ಫೆಬ್ರುವರಿಯಲ್ಲಿ ಕೂಡುವದೆಂದು ತಿಳಿಯುತ್ತದೆ.

ಹೊಸದಿಲ್ಲಿಯಲ್ಲಿ ೯ನೆಯ ತಾರೀಕು ಪೋಲಿಸರು ಕಮ್ಯುನಿಸ್ಟ ಕಚೇರಿಯ ಝಡತಿಮಾಡಿ ಪೀಪಲ್ಸ ಏಜ ಪತ್ರಿಕೆಯ ಪ್ರತಿಗಳನ್ನು ಜಪ್ತಮಾಡಿದರು.

ಗುರುದತ್ತ ರೇಲ್ವೆ ಸ್ಟೇಶನಿನಲ್ಲಿ ನಿರಾಶ್ರಿತರ ಊಗಿಬಂಡಿಯ ಮೇಲೆ ಪುಂಡರು ದಾಳಿಮಾಡಿ ಸುಮಾರು ೧೦೦೦ ಜನರನ್ನು ಸಾವುನೋವುಗಳಿಗೀಡುಮಾಡಿದ್ದಾರೆ. ನೂರಾರು ಸ್ತ್ರೀಯರನ್ನು ಅಪಹರಿಸಿದ್ದಾರೆ. ಸಂರಕ್ಷಣೆಗಿದ್ದ ಮದ್ರಾಸ ಸೈನಿಕರು ಶೌರ್ಯದಿಂದ ಕಾದಿದರು. ಅವರಲ್ಲಿಯೂ ಕೆಲವರಿಗೆ ಗಾಯಗಳಾಗಿವೆ.

ಮದ್ರಾಸ

ರೇಲ್ವೆ ಮಂಡಳವು ದಿನದಿನವೂ ಅದೂರದೃಷ್ಟಿಯ ಮತ್ತು ಕ್ಷುದ್ರ ಮನಸ್ಸಿನದಾಗುತ್ತಿದೆ, ಕೇಂದ್ರ ವೇತನ ಮಂಡಳದ ವರದಿಯನ್ನು ಕಡೆಗಣಿಸುತ್ತದೆ ಎಂದು ಮುಂತಾಗಿ ಶ್ರೀ. ಎಸ್. ಗುರುಸ್ವಾಮಿಯವರು ತ್ರಿಚನಾಪಳ್ಳಿಯಲ್ಲಿ ರೇಲ್ವೆ ಕೆಲಸಗಾರರ ಸಭೆಯೊಂದರಲ್ಲಿ ಮಾತಾಡುತ್ತ ಅಭಿಪ್ರಾಯ ಪಟ್ಟರು.

ಅಖಿಲ ಮಲೆಯಾಳ ಸಭೆಯ ೯ನೆಯ ಅಧಿವೇಶನವನ್ನು ಮದ್ರಾಸ ಮುಖ್ಯ ಮಂತ್ರಿಗಳು ಮದ್ರಾಸಿನಲ್ಲಿ ೧೦ಕ್ಕೆ ಉದ್ಘಾಟಿಸುತ್ತ ಕೇರಳ ಪ್ರಾಂತದ ಬೇಡಿಕೆಯ ಯುಕ್ತತೆಯನ್ನೂ ಒಪ್ಪಿದರೂ ಅದನ್ನು ಕಾರ್ಯಗೊಳಿಸುವಲ್ಲಿ ತರುವಾಗ ಬರುವ ವ್ಯಾವಹಾರಿಕ ಅಡಚಣೆಗಳನ್ನು ಅರಿತುಕೊಳ್ಳಬೇಕೆಂದು ಮಲೆಯಾಳಿಗಳಿಗೆ ಬಿನ್ನವಿಸಿಕೊಂಡರು.

ಭಾರತದ ಇಂದಿನ ಪ್ರಕ್ಷುಬ್ಧ ಪರಿಸ್ಥಿತಿಯನ್ನು ಲಕ್ಷಿಸಿ ಮದ್ರಾಸ ಸರಕಾರದವರು ಶಸ್ತ್ರಾಸ್ತ್ರಗಳು ಮತ್ತು ಮದ್ದುಗುಂಡುಗಳು ಮೊದಲಾದವುಗಳ ಮಾರಾಟದ ಮೇಲೆ ನಿರ್ಬಂಧ ಹೇರಿದ್ದಾರೆ. ಹೊಸದಾಗಿ ಶಸ್ತ್ರಾಸ್ತ್ರ ಕೊಂಡವರು ಜಿಲ್ಹಾಧಿಕಾರಿಗಳಿಗೆ ಇಲ್ಲವೆ ಪೋಲೀಸ ಅಧಿಕಾರಿಗೆ ಕೂಡಲೇ ತಿಳಿಸಬೇಕು.

ಹಿಂದೀ ಸಂಸ್ಥಾನಗಳು

ಅಝಾದ ಕಾಶ್ಮೀರ ಪ್ರತಿ ಸರಕಾರದ ಅಧ್ಯಕ್ಷರಾದ ಸರದಾರ ಮಹ್ಮದ ಇಬ್ರಾಹಿಮರು ತಮ್ಮ ಪ್ರತಿ ಸರಕಾರದ ಪಕ್ಷವನ್ನು ಮಂಡಿಸಲು ನ್ಯೂಯಾರ್ಕಿಗೆ ಪ್ರಯಾಣ ಬೆಳಸಿದರು. ಮರಳಿ ಬರುವಾಗ ಅವರು ಇಜಿಪ್ತಕ್ಕೆ ಭೆಟ್ಟಿಕೊಡುವರಂತೆ. ಹೈದರಾಬಾದದಲ್ಲಿ ಭಾರತದ ಜನರಲ್ ಏಜಂಟರಾದ ಶ್ರೀ ಕೆ. ಎಂ. ಮುನಶಿಯವರಿಗೆ ಸಿಕಂದರಾಬಾದದ ನಾಗರಿಕರು ಜನವರಿ ೨೦ಕ್ಕೆ ಸ್ವಾಗತ ಸಮಾರಂಭವನ್ನು ಜರುಗಿಸಿದರು. ಶ್ರೀ ಮುನಶಿಯವರು ವರಾಡದ ರಾಜಕುಮಾರರನ್ನು ಕಂಡು ಅವರೊಡನೆ ೪೦ ನಿಮಿಷ ಮಾತುಕತೆಯಾಡಿದರು.

ರಜಪುತಾನದ ಪ್ರಗತಿಗೆ ವಿಲೀನೀಕರಣವೆ ಯೋಗ್ಯ ಉಪಾಯವೆಂದು ಶಹಾಪುರದ ಮಹಾರಾಜರು ಅಭಿಪ್ರಾಯಪಟ್ಟರು. ಶಹಾಪುರ ಸಂಸ್ಥಾನದಲ್ಲಿ ಈಗ ಸಂಪೂರ್ಣ ಹೊಣೆಗಾರ ಸರಕಾರ ಸ್ಥಾಪಿತವಾಗಿದ್ದು ಪ್ರಜಾಪ್ರತಿನಿಧಿಗಳೇ ಆಡಳಿತ ಸಾಗಿಸಿದ್ದಾರೆ.

ಭಾರತದಲ್ಲಿಯ ಫ್ರೆಂಚವಸಾಹತು ಭಾರತದ ಹೊಸರಾಜ್ಯ ಘಟನೆ ರಚಿತವಾದ ಮೇಲೆ ಭಾರತದಲ್ಲಿ ವಿಲೀನವಾಗುವದೆಂದೂ ಆಡಳಿತದ ಸೌಕರ್ಯದ ದೃಷ್ಟಿಯಿಂದ ಅಲ್ಲಿಯ ವರೆಗೆ ತಡೆಯಬೇಕಾಗಿದೆ ಎಂದೂ ಫ್ರೆಂಚ ಪಾರ್ಲಮೆಂಟಿನ ಸದಸ್ಯ ಶ್ರೀ ಸರ್ವಾಣೆ ಇವರು ಒಂದು ಭಾಷಣದಲ್ಲಿ ಹೇಳಿದರು.

ಇಂದೂರ ಮಹಾರಾಜರು ಸಂಸ್ಥಾನದಲ್ಲಿ ಸಂಪೂರ್ಣ ಹೊಣೆಗಾರ ಸರಕಾರವನ್ನು ಸ್ಥಾಪಿಸುವದಾಗಿಯೂ ಘಟನಾಸಮಿತಿಯ ಕೆಲಸ ಮುಗಿಯುವ ವರೆಗೆ ಆಡಳಿತವನ್ನು ಪ್ರಜಾಪ್ರತಿನಿಧಿಗಳ ನಡುಗಾಲ ಸರಕಾರ ಸ್ಥಾಪಿಸುವುದಾಗಿಯೂ ಒಪ್ಪಿಕೊಂಡಿದ್ದಾರೆ. ಅವರು ಕಿತ್ತುಹಾಕಿದ ಮುಖ್ಯಮಂತ್ರಿ ಶ್ರೀ ಮೇಥಾ ಇವರನ್ನು ಹಿಂದುಸ್ಥಾನ ಸರಕಾರದ ಆಕಾಶವಾಣಿ ಖಾತೆಯ ಕಾರ್ಯದರ್ಶಿಗಳನ್ನಾಗಿ ಮಾಡಲಾಗಿದೆ.


ಪಾಕಿಸ್ತಾನದಲ್ಲಿ ಹೈದರಾಬಾದ ಏಜಂಟ ಜನರಲ್‌ರ ಕಚೇರಿ ಹಾಗು ವಾಸ್ತವ್ಯಕ್ಕಾಗಿ ನಿಜಾಮ ಸರಕಾರದವರು ಕರಾಚಿಯಲ್ಲಿ ೧೦ ಲಕ್ಷ ರೂಪಾಯಿ ಕೊಟ್ಟು ಕಟ್ಟಡವೊಂದನ್ನು ಕೊಂಡಿದ್ದಾರೆಂದೂ ಹೈದರಾಬಾದ ಸಂಸ್ಥಾನ ಬ್ಯಾಂಕಿನ ಶಾಖೆಯನ್ನು ಅಲ್ಲಿ ಬೇಗನೆ ತೆರೆಯಲಾಗುವದೆಂದೂ ತಿಳಿಯುತ್ತದೆ.

ಹೈದರಾಬಾದದಿಂದ ಸುಮಾರು ೨೨ ಮೈಲು ಅಂತರದಲ್ಲಿರುವ ಬೀಬೀನಗರದ ಮೇಲೆ ೩೦೦ ಸಶಸ್ತ್ರ ಜನರು ದಾಳಿಮಾಡಿ ಅನೇಕ ಮನೆಗಳನ್ನು ಸುಲಿದು ಎಷ್ಟೋ ಜನರನ್ನು ಗಾಯಗೊಳಿಸಿದರೆಂದು ಸುದ್ದಿ ಬಂದಿದೆ.

ಪೈಗಾ ಸೈನಿಕ ದಳದ ೪೦೦ ಜನರು ೧೨ನೆಯ ತಾರೀಕು ಹೈದರಾಬಾದ ಮುಖ್ಯ ಮಂತ್ರಿಗಳ ವಾಸಸ್ಥಳವಾದ ಶಹಾಮಂಜಿಲಕ್ಕೆ ದವುಡು ತೆಗೆದುಕೊಂಡು ಹೋಗಿ ಸಂಬಳ ಹಾಗು ಭತ್ತೆ ಹೆಚ್ಚಿಸಬೇಕೆಂದು ಮುಶಪ್ರದರ್ಶನ ಮಾಡಿದರು.

ನಿಜಾಮರ ಖಾಸಗಿ ಆಸ್ತಿಯಾದ ಸರಫಿಖಾನದಲ್ಲಿ ಸುಮಾರು ೩೫೦೦ ನೋಕರದಾರರು ಸಂಬಳವನ್ನು ಹೆಚ್ಚಿಸಬೇಕೆಂಬ ಬೇಡಿಕೆಯನ್ನು ಮುಂದಿಟ್ಟು ಸಂಪನ್ನು ಹೂಡಿದ್ದಾರೆ. ಸುಮಾರು ೩೦೦ ಜನರು ಮಾತ್ರ ಸಂಪಿನಲ್ಲಿ ಭಾಗವಹಿಸಿಲ್ಲ.

ಮದ್ರಾಸಿನ ಹೊಸ ಮೇಯರರು



ಮದ್ರಾಸಿನ ಹೊಸ ಮೇಯರರಾದ ಡಾ. ಉಡುಪಿ ಕೃಷ್ಣರಾಯರು ಅಚ್ಚ ಕನ್ನಡಿಗರಿದ್ದು ಮದ್ರಾಸ ಮ್ಯೂನ್ಸಿಪಾಲ್ಟಿಯ ಹಿಂದಿನ ಅಧ್ಯಕ್ಷರಾದ ಡಾ. ಯು. ರಾಮರಾಯರ ಚಿರಂಜೀವ ಇರುವರು. ಮೇಯರ ಪದಕ್ಕೆ ಕಾಂಗ್ರೆಸ ಪರವಾಗಿ ನಿಂತು ಅವಿರೋಧವಾಗಿ ಆರಿಸಿ ಬಂದಿರುವರು.

ಅಜಮೀರದಲ್ಲಿ ಜನವರಿ ೧೧ ರ ಇರುಳಿನಲ್ಲಿ ಕೆಲವು ಇರಿತಗಳಾಗಿದ್ದು ಅದರಲ್ಲಿ ೧೧ ಜನರು ಕೊಲೆ ಮಾಡಲ್ಪಟ್ಟರೆಂದೂ ೭೫ ಜನರಿಗೆ ಗಾಯಗಳಾಗಿವೆಯೆಂದೂ ತಿಳಿದಿದೆ. ಮುಂಜಾವ ೧೦ ರಿಂದ ಮಧ್ಯಾಹ್ನ ೧ ರ ವರೆಗೆ ಕರ್ಫ್ಯೂ ಹಾಕಲ್ಪಟ್ಟಿದೆ.

ಮದ್ರಾಸ ತ್ರಿಪ್ಲಿಕೇನದಲ್ಲಿಯ ದೊಡ್ಡ ಮಸೀದೆ ಮತ್ತು ಇತರ ಮಸ್ಜೀದೆಗಳನ್ನು ಪೋಲೀಸರು ಝಡತಿಮಾಡಿ ಶಸ್ತ್ರಗಳನ್ನು ಹಾಗು ಎರಡು ಖಡ್ಗಗಳನ್ನು ಜಪ್ತಮಾಡಿಕೊಂಡು ಹೋದರು.

ಕಾರವಾರಗಡಿಯಲ್ಲಿ ಒಬ್ಬನ ಹತ್ತಿರ ಬಂದೂಕು ಮತ್ತು ೫ ಗುಂಡುಗಳು ದೊರೆತವು ಈ ಶಸ್ತ್ರಗಳನ್ನು ಅವನು ಗೋವೆಯಿಂದ ತರುತ್ತಿದ್ದನು. ಈಗ ಒಂದು ತಿಂಗಳ ಹಿಂದೆ ಇದೇ ಸ್ಥಳದಲ್ಲಿ ಕೆಲ ಕಚ್ಚಾ ಶಸ್ತ್ರಾಸ್ತ್ರ ಮತ್ತು ಮದ್ದು ಗುಂಡುಗಳು ದೊರೆತಿದ್ದವು.

ಚಂದಾದಾರರಲ್ಲಿ ವಿನಂತಿ

—※—

ಯಾವದೇ ಪತ್ರವ್ಯವಹಾರ ಮಾಡುವಾಗ್ಗೆ ನಿಮ್ಮ ಚಂದಾ ನಂಬರನ್ನು ಅಂದರೆ ನಾವು ನಿಮ್ಮ ವಿಳಾಸದ ಪ್ರಾರಂಭಕ್ಕೆ ಸೇರಿಸಿದ ನಂಬರನ್ನು ಬರೆದರೆ ಮಾತ್ರ ನಿಮ್ಮ ಪತ್ರಕ್ಕೆ ಲಕ್ಷ್ಯಗೊಡಲಾಗುವದು. ಅವಧಿ ಮುಗಿಯುವ ಮುಂಚೆಯೇ ೧೫ ದಿನ ಪೂರ್ವದಲ್ಲಿ ವ್ಹಿ. ಪಿ. ಮಾಡಲಾಗುವದು. ವ್ಹಿ. ಪಿ. ಬೇಡಾದವರು ೧೫ ದಿನ ಮೊದಲು ನಮಗೆ ತಿಳಿಸಬೇಕು. ವ್ಹಿ. ಪಿ. ನಿರಾಕರಿಸಿ ಹಿಂದುಗಡೆ M. O. ಮಾಡಿದರೆ ವ್ಹಿ. ಪಿ. ಖರ್ಚು ಮುರಿಯಲಾಗುವದು.

ಕರ್ಮವೀರ ಚಂದಾ ವಿವರ

ಅಂಚೆ ವೆಚ್ಚಸಹಿತ (ಚಂದಾಹಣ ಮುಂಗಡ)

೧ ವರ್ಷಕ್ಕೆ	೬—೪—೦
೬ ತಿಂಗಳಿಗೆ	೩—೪—೦
೩ ,,	೧—೧೨—೦

ವ್ಹಿ. ಪಿ. ಯಿಂದ ತರಿಸಿಕೊಂಡಲ್ಲಿ ಪ್ರತಿಗೆ ೬ ಆಣೆ ಹೆಚ್ಚಿಗೆ ಬೀಳುವದು.



ಜ್ಯೋತಿಷಿ— ಕೃಷ್ಣಶಾಸ್ತ್ರಿ ಘಟೆ ಭವಿಷ್ಯ ಕಥನ ಅಫೀಸ ಖಡೇಬಜಾರ ಬೆಳಗಾವಿ.

ಜನವರಿ ೧೯ ರಿಂದ ೨೫ ರ ವರೆಗೆ

ಮೇಷ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಉತ್ತಮ ಇದ್ದರೆ ಮಕ್ಕಳಲ್ಲಿ ಒಬ್ಬರಿಗೆ ಅಪಘಾತದ ಅಂಜಿಕೆ. ಸಂಸಾರದಲ್ಲಿ ಕೆಲವೊಂದು ಅನಪೇಕ್ಷಿತ ಗೊಂದಲ ಹುಟ್ಟುವದರಿಂದ ಎಲ್ಲ ಬಗೆಯ ಗದ್ದಲ. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಸಾಧಾರಣ ಆದರೆ ಲಾಭ ಉತ್ತಮ. ಮಿತ್ರರಲ್ಲಿ ಒಬ್ಬರಿಗೆ ಬಹಳ ಕ್ಲೇಶ. ಕ್ವಚಿತ್ ವಿಯೋಗದ ಸಂಭವ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆಯ ಯಶಸ್ಸು. ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರವ್ಯವಹಾರ ಅನುಕೂಲ ಅಶ್ವಿನಿಯ ಕೊನೆಯ ೪ ಮತ್ತು ಭರಣಿಯ ೧ನೇ ಚರಣಕ್ಕೆ ತೊಂದರೆ ಹೆಚ್ಚು. ತಾ. ೨೦, ೨೨, ೨೩ ಅನುಕೂಲ.

ವೃಷಭ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಉತ್ತಮ. ಪ್ರತಿಯೊಂದು ಕೆಲಸದಲ್ಲಿ ಮೊದಲು ಸ್ವಲ್ಪ ಮಾನಭಂಗ ಆದರೆ ಕೊನೆಯಲ್ಲಿ ಒಳ್ಳೇ ಯಶಸ್ಸು. ಉದ್ಯೋಗದಲ್ಲಿ ಎಲ್ಲ ಬಗೆಯಿಂದ ಸುಸ್ಥಿತಿ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ವಿಜಯ ಅಲ್ಲದೆ ಶತ್ರುಗಳಿಗೂ ಪರಭಾರೆ ಬಹಳ ಹಾನಿಯಾಗುವದು. ಮಿತ್ರಸುಖ ಉತ್ತಮ. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ. ರೋಹಿಣಿಯ ಕೊನೆಯ ೪ ಮತ್ತು ಮೃಗದ ೧ ನೇ ಚರಣಕ್ಕೆ ಹೆಚ್ಚು ಅನುಕೂಲ ತಾ. ೨೨, ೨೩, ೨೪, ೨೫ ಅನುಕೂಲ.

ಮಿಥುನ

ಪ್ರಕೃತಿ ಸಾಧಾರಣ ಮಕ್ಕಳ ಸುಖ ಅನುಕೂಲ ಆದರೆ ಹೆಂಡತಿಸಹಿತವಾಗಿ ಮನೆಯಲ್ಲಿಯ ಇತರ ಎಲ್ಲರೊಡನೆ ತೀವ್ರ ಕಲಹ. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಮಹತ್ ಪ್ರಯಾಸದಿಂದ ಸಾಧ್ಯ. ಆದರೆ ಲಾಭ ಉತ್ತಮ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳ ಸಮಾನ ಸ್ಥಿತಿ. ಮಿತ್ರಸುಖ ಉತ್ತಮ. ಬೌದ್ಧಿಕ ಕೆಲಸಗಳಲ್ಲಿ ಪ್ರತ್ಯಕ್ಷ ಯಶಸ್ಸು. ಪ್ರವಾಸ ಮತ್ತು ಭೆಟ್ಟಿ ಪತ್ರವ್ಯವಹಾರಕ್ಕಿಂತ ಅನುಕೂಲ. ಆರಿದ್ರೆಯ ಕೊನೆಯ ೪ ಮತ್ತು ಪುನರ್ವಸುವಿನ ೧ ನೇ ಚರಣಕ್ಕೆ ತೊಂದರೆ ಕಡಿಮೆ. ತಾ. ೧೯, ೨೦, ೨೪ ಅನುಕೂಲ.

ಕರ್ಕ

ಪ್ರಕೃತಿ ಸಾಧಾರಣ ಹೆಂಡತಿಗೂ ಸ್ವಲ್ಪ ಕಾಹಿಲೆ. ಉಭಯತರಲ್ಲಿ ತೀವ್ರ ಮತಭೇದ ಮಕ್ಕಳ ಸುಖ ಉತ್ತಮ ಮತ್ತು ಮನೆತನದ ಲೌಕಿಕ ಬೆಳೆಯುವಂಥ ಕೃತ್ಯಗಳನ್ನು ಮಾಡುವರು. ಉದ್ಯೋಗದಲ್ಲಿ ಒಳ್ಳೆಯ ಪ್ರಗತಿ ತುಂಬಾ ಲಾಭ, ಅವಚಿತವಾಲದ ಸಂಭವವೂ ಉಂಟು. ಆದರೆ ಪ್ರತಿಷ್ಠೆಯಲ್ಲಿ ಸ್ವಲ್ಪ ವಿಘ್ನ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ. ಪ್ರವಾಸ ಮತ್ತು ಪತ್ರವ್ಯವಹಾರವೂ ಭೆಟ್ಟಿಗಿಂತ ಹೆಚ್ಚು ಅನುಕೂಲ. ಪುಷ್ಯದ ಕೊನೆಯ ೪ ಮತ್ತು ಆಶ್ಲೇಷದ ಮೊದಲನೆ ಚರಣಕ್ಕೆ ತೊಂದರೆ ಕಡಿಮೆ. ತಾ. ೧೯, ೨೦, ೨೧, ೨೨ ಅನುಕೂಲ.

ಸಿಂಹ

ಪ್ರಕೃತಿ ಸಾಧಾರಣ ಹೆಂಡತಿಗೂ ಸ್ವಲ್ಪ ಕಾಹಿಲೆ. ಎಲ್ಲ ವಿಷಯಗಳಲ್ಲಿ ಪ್ರಾಪಂಚಿಕ ತೊಂದರೆ ವಿಪರೀತ. ಬಂಧು ವರ್ಗದವರೊಡನೆ ವಿರೋಧ. ದುಷ್ಟ ಜನರ ಸಹವಾಸದಲ್ಲಿ ಸ್ವಲ್ಪ ದಿನ ಕಳೆಯಬೇಕಾದ ಅಪರಿಹಾರ್ಯ ಪ್ರಸಂಗ. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಅನುಕೂಲ ಆದರೆ ಲಾಭ ಬಹಳ ಕಡಿಮೆ. ಉದ್ಯೋಗಸ್ಥರಿಗೆ ಬಹಳ ಹಾನಿ. ವಾದದಲ್ಲಿ ಸ್ಪರ್ಧೆಯಲ್ಲಿ ಹಾನಿ. ಶತ್ರುಗಳಂತೆ ಮಿತ್ರರೂ ಬಹಳ ಉಪದ್ವ್ಯಾಪ ಮಾಡುವರು. ಪ್ರವಾಸ ಮತ್ತು ಭೆಟ್ಟಿ ಅನುಕೂಲ ಆದರೆ ಪತ್ರವ್ಯವಹಾರ ಬಹಳ ತೊಂದರೆಯದು. ಮಘಾದ ಕೊನೆಯ ೪ ಮತ್ತು ಪುಬ್ಬದ ೧ ನೆ ಚರಣಕ್ಕೆ ತೊಂದರೆ. ತಾ. ೧೯, ೨೧, ೨೨ ಅನುಕೂಲ

ಕನ್ಯಾ

ಪ್ರಕೃತಿ ಉತ್ತಮ, ಸ್ತ್ರೀ ಸುಖ ಮನಸ್ಸಿನಂತೆ. ಆದರೆ ಮಕ್ಕಳು ಅಪ್ರಿಯವಾಗಿ ವರ್ತಿಸುವದರಿಂದ ಬಹಳ ಮನಸ್ತಾಪ. ಉಳಿದ ಪ್ರಾಪಂಚಿಕ ತೊಂದರೆಗಳು ಬೆಳೆಯಹತ್ತುವವು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಸಾಧಾರಣ ಆದರೆ ಲಾಭ ಅನುಕೂಲ. ಸ್ತ್ರೀಯರಲ್ಲಿ ಕಪ್ಪುತಿಳವಳಿಕೆ. ಮಿತ್ರರಲ್ಲಿ ಕ್ಲೇಶ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಮೊದಲು ತೋರುತಿದ್ದ ಯಶಸ್ಸಿನ ಆಶೆ ಕೊನೆಯಲ್ಲಿ ಟೊಳ್ಳಾಗುವ ಸಂಭವ. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಅನುಕೂಲ ಹಸ್ತಾದ ಕೊನೆಯ ೪ ಮತ್ತು ಚಿತ್ರಾದ ೧ ನೇ ಚರಣಕ್ಕೆ ತೊಂದರೆ ಕಡಿಮೆ ತಾ. ೨೨, ೨೩, ೨೪ ಅನುಕೂಲ.

ತುಲಾ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖವೂ ಅನುಕೂಲ. ಆದರೆ ಹೆಂಡತಿ ಮತ್ತು ಮಕ್ಕಳು ನಿಮ್ಮ ಕೆಲವೊಂದು ವ್ಯವಹಾರದ ಬಗ್ಗೆ ಬಹಳ ಸಂಶಯ ತಾಳುವರು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಜನರಿಗೆ ಅನುಕೂಲವೆಂದು ಕಂಡುಬಂದರೂ ವಾಸ್ತವಿಕವಾಗಿ ಬಹಳ ಕಡಮೆಯಾಗುವ ಯೋಗ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಯಶಸ್ಸು ಉತ್ತಮ ಆದರೆ ಶತ್ರುಗಳು ನಿಮ್ಮ ಸಹಾಯಕರನ್ನು 'ಫಿತೂರ' ಮಾಡುವ ಪ್ರಯತ್ನ ನಡೆಸುವರು. ಮಿತ್ರರಲ್ಲಿ ವಿರೋಧ. ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರವ್ಯವಹಾರ ಅನುಕೂಲ. ಸ್ವಾತಿಯ ಕೊನೆಯ ೪ ಮತ್ತು ವಿಶಾಖಾದ ೧ನೇ ಚರಣಕ್ಕೆ ತೊಂದರೆಯಿಂದಲೆ ಯಶಸ್ಸು. ತಾ. ೧೯, ೨೪, ೨೫ ಅನುಕೂಲ.

ವೃಶ್ಚಿಕ

ಪ್ರಕೃತಿ ಮತ್ತು ಸ್ತ್ರೀಸುಖ ಉತ್ತಮ. ಆದರೆ ಕೆಲ ಆಗಂತುಕ ಕಾರಣಗಳಿಂದ ಅಲ್ಪ ಸ್ವಲ್ಪ ಪ್ರಾಪಂಚಿಕ ತೊಂದರೆಯಾಗುವ ಸಂಭವ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಉತ್ತಮ ಆದರೆ ಪ್ರತಿಷ್ಠೆಗೆ ಕೆಲ ಬಗೆಯಿಂದ ಕುಂದುಬರುವ ಪ್ರಸಂಗ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಅನುಕೂಲತೆ; ಮಿತ್ರಸುಖ ಉತ್ತಮ. ಮಾನ್ಯರಾದ ಕೆಲ ಜನರ ಭೆಟ್ಟಿ ಸಹವಾಸದ ಪ್ರಸಂಗ. ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರವ್ಯವಹಾರ ಉತ್ತಮ. ಅನುರಾಧೆಯ ಕೊನೆಯ ೪ ಮತ್ತು ಜ್ಯೇಷ್ಠಾದ ೧ನೇ ಚರಣಕ್ಕೆ ತೊಂದರೆ ಕಡಮೆ. ತಾ. ೨೧, ೨೨, ೨೩ ಅನುಕೂಲ.

ಧನು

ಪ್ರಕೃತಿಗೆ ಕಿರುಕುಳ ಕ್ಲೇಶ. ಸ್ತ್ರೀಸುಖ ಅನುಕೂಲ. ಆದರೆ ಉಳಿದ ಪ್ರಾಪಂಚಿಕ ತೊಂದರೆ ವಿಪರೀತ. ಉದ್ಯೋಗದಲ್ಲಿ ಪ್ರಗತಿ ಕಡಮೆ ಆದರೆ ಪ್ರತಿಷ್ಠೆ ಮತ್ತು ಲಾಭ ಉತ್ತಮ. ಮಿತ್ರಸುಖ ಅನುಕೂಲ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಪ್ರತಿಕೂಲತೆ. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಅನುಕೂಲ. ಮೂಲಾದ ಕೊನೆಯ ೪ ಮತ್ತು ಪೂರ್ವಾಷಾಢಾದ ೧ನೇ ಚರಣಕ್ಕೆ ಹೆಚ್ಚು ತೊಂದರೆ. ತಾ. ೧೯, ೨೦, ೨೪ ಅನುಕೂಲ.

ಮಕರ


ಪ್ರಕೃತಿ ಸಾಧಾರಣವೆ, ಹೆಂಡತಿಗೂ ಕಾಹಿಲೆ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಅನುಕೂಲ. ಪ್ರಿಯ ಜನರ ಭೆಟ್ಟಿ ಮತ್ತು ಸಹವಾಸ, ಉದ್ಯೋಗದಲ್ಲಿ ಪ್ರಗತಿ ಹೆಚ್ಚು. ಪ್ರತಿಷ್ಠೆ ಅನುಕೂಲ ತುಂಬ ಲಾಭ. ಮಿತ್ರರಿಂದ ಮಹತ್ವದ ಸಹಾಯ. ಕೆಲ ವಿಶೇಷ ಧಾರ್ಮಿಕ ಕೃತ್ಯಗಳು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಬಹಳ ಸ್ಪರ್ಧೆ. ಆದರೆ ಕೊನೆಗೆ ಸ್ವತಃದ ದೈವವೆ ಅನುಕೂಲ. ಪ್ರವಾಸಾದಿ ಕೆಲಸ ಉತ್ತಮ. ಶ್ರವಣಾದ ಕೊನೆಯ ೪ ಮತ್ತು ಧನಿಷ್ಠಾದ ೧ನೆ ಚರಣಕ್ಕೆ ಹೆಚ್ಚು ತೊಂದರೆ. ತಾ. ೨೧, ೨೨, ೨೩ ಅನುಕೂಲ.

ಕುಂಭ

ಪ್ರಕೃತಿ ಉತ್ತಮ. ಹೆಂಡತಿಯದು ಇದೇ ಬಗೆಯ ತಕರಾರು. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಬಹಳ ಉತ್ತಮ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಮನಸ್ಸಿನಂತೆ. ಆದರೆ ವೆಚ್ಚ ಇಮ್ಮಡಿ ಮುಮ್ಮಡಿ ಆಗುವ ಪ್ರಸಂಗ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ. ಮಿತ್ರರಿಂದ ಕೆಲವೊಂದು ಮಹತ್ವದ ವಿಷಯಗಳಲ್ಲಿ ಬೇಕೆಂತಲೆ ಇಲ್ಲವೆ ತಿಳಿಯದಲೆ ಉದಾಸೀನತೆ ತಾಳುವದರಿಂದ ಮನಸ್ಸಿಗೆ ಬಹಳ ಖೇದ. ಭೆಟ್ಟಿ ಮತ್ತು ಪ್ರವಾಸವೂ ಪತ್ರವ್ಯವಹಾರಕ್ಕಿಂತ ಅನುಕೂಲ. ಶತತಾರಕೆಯ ಕೊನೆಯ ೪ ಮತ್ತು ಪೂರ್ವಾಭಾದ್ರಪದದ ೧ನೇ ಚರಣಕ್ಕೆ ತೊಂದರೆ ಕಡಮೆ. ತಾ. ೧೯, ೨೦, ೨೪, ೨೫ ಅನುಕೂಲ.

ಮೀನ

ಪ್ರಕೃತಿ ಉತ್ತಮ. ಹೆಂಡತಿಯದೂ ಅನುಕೂಲ. ಆದರೆ ರತಿಸುಖದಲ್ಲಿ ವಿರಸ. ಪ್ರಾಪಂಚಿಕ ಸುಖದಲ್ಲಿ ಬಹಳ ಅನಪೇಕ್ಷಿತ ತೊಂದರೆ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ವಿಜಯ. ಮಿತ್ರಪಕ್ಷದಲ್ಲಿ ವಿರೋಧ. ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರವ್ಯವಹಾರ ಉತ್ತಮ. ಉತ್ತರಾಭಾದ್ರಪದದ ಕೊನೆಯ ೪ ಮತ್ತು ರೇವತಿಯ ೧ನೇ ಚರಣಕ್ಕೆ ತೊಂದರೆ ಕಡಮೆ. ತಾ. ೧೯, ೨೦, ೨೧, ೨೨ ಅನುಕೂಲ.



೧ Agricultural College Magazine (Dharwar)

ಸಂಪಾದಕರು ಶ್ರೀ ಎಂ ವಿ ಎಸ್ ಅಯ್ಯಂಗಾರರು. ಪ್ರಕಾಶಕರು ಶ್ರೀ. ಎಸ್. ಬಿ. ಹರಿಹರರು. ಪುಟ ೭೩, ಬೆಲೆ ರೂ. ೨.

ಇದೊಂದು ಅರ್ಧ ವಾರ್ಷಿಕ ಪತ್ರಿಕೆ. ಇದರಲ್ಲಿ ಒಕ್ಕಲುತನಕ್ಕೆ ಸಂಬಂಧಪಟ್ಟ ವಿಷಯಗಳ ಮೇಲೆ ಪ್ರಯೋಗ ವಿಜ್ಞಾನಿಗಳ ಹಲವು ಲೇಖನಗಳಿವೆ. ಮೊದಲು ೫೦ ಪುಟಗಳು ಇಂಗ್ಲೀಷಿನಲ್ಲಿ ಬರೆದ ಪ್ರಬಂಧಗಳಿಗೆ ಮೀಸಲಾಗಿವೆ. ಉಳಿದ ೨೦ ಕನ್ನಡದ ಬರಹಗಳಿಗೆ. ಪುಸ್ತಕ ಆಕರ್ಷಕವಾಗಿದೆ, ಎಲ್ಲರೂ ಓದಬಹುದು.

೨ ಕನ್ನಡ ಋತುಸಂಹಾರ

ಬರೆದವರು ಶ್ರೀ. ಎಸ್. ವಿ ಪರಮೇಶ್ವರ ಭಟ್ಟರು. ಎಂ. ಎ., ಪ್ರಕಾಶಕರು ಕಾವ್ಯಾಲಯ ಮೈಸೂರು. ಪುಟ ೪೯, ಬೆಲೆ ೧೨ ಆಣೆ.

ಕಾಳಿದಾಸ ಸಂಸ್ಕೃತದಲ್ಲಿ ಬರೆದ 'ಋತುಸಂಹಾರ' ವೆಂಬ ಖಂಡಕಾವ್ಯದ ಅನುವಾದವಿದು. ಇದರಲ್ಲಿ ಋತು ರತಿಗಳ ವರ್ಣನೆಯೇ ಪ್ರಧಾನ ವಸ್ತು. ಈ ಸರಸ ಪ್ರಬಂಧವನ್ನು ಭಟ್ಟರು ವಿವಿಧ ಕನ್ನಡ ಛಂದಸ್ಸುಗಳಲ್ಲಿ ಭಾಷಾಂತರಿಸಿದ್ದಾರೆ. 'ಇದು ಭಾಷಾಂತರವಲ್ಲ, ಭಾವಗ್ರಹಣ' ಎಂದು ಮೊದಲ ಮಾತಿನಲ್ಲಿ ಗ್ರಂಥಕರ್ತರೆಂದಿರುವುದು ಆತ್ಮರಕ್ಷಣೆಗೆ ಕವಚಪ್ರಾಯವಾಗಿದೆ. "ಚೀನಾ, ಅಂಬರ, ರೇಶಿಮೆಯಂಬರ" ಮುಂತಾಗಿ ವಿಸಂಧಿ ಕುಸಂಧಿಗಳಿಲ್ಲದಿದ್ದರೆ ಪದ್ಯರಚನೆ ಚೆನ್ನಾಗಿರುತ್ತಿತ್ತು. ಕವಿತಾಶಕ್ತಿ ಪ್ರೌಢವಿರುವದು. ಈ ಭಾಷಾಂತರವು ಓದುವವರ ರಸಿಕತೆಗೆ ನಿಕಷವಾಗಿದೆ. ಎಲ್ಲರೂ ಇದನ್ನು ಓದಿ ಆನಂದಿಸಲು ಇದು ಯೋಗ್ಯವಾಗಿದೆ.

ಯುಗಧರ್ಮ (ಹಿಂದಿ ಮಾಸಪತ್ರಿಕೆ)

ಸಂಪಾದಕು, ಬಾಬೂರಾವ ಕುಮಠೆಕರ. ವಾರ್ಷಿಕ ಚಂದಾ ರೂ. ೭-೪-೦ ಪುಟ ೪೦

ದಿಲ್ಲಿಯಿಂದ ಹೊರಟ ಈ ಹೊಸಪತ್ರಿಕೆಯನ್ನು ಆದರದಿಂದ ಸ್ವಾಗತಿಸುತ್ತೇವೆ. ಉತ್ತಮ ಮುದ್ರಣ ಅತ್ಯುತ್ತಮ ಕಾಗದಗಳು. ನಾನಾ ಪ್ರಾಂತಗಳ ಅನೇಕ ಸುಪ್ರಸಿದ್ಧ ವ್ಯಕ್ತಿಗಳ ಲೇಖನಗಳಿವೆ. ಈ ಪತ್ರಿಕೆಯಲ್ಲಿ ಮುಖ್ಯವಾಗಿ ಆಧ್ಯಾತ್ಮಿಕ ಲೇಖನಗಳೇ ಉಂಟು. ಅಧ್ಯಾತ್ಮವೇ ಪತ್ರಿಕೆಯ ಗುರಿ.

ವಿಹಾರಿ (ಮಾಸಿಕ)

ಸಂಪಾದಕರು ಶ್ರೀ. ಟಿ. ಆರ್. ಅಯ್ಯಂಗಾರರು. ಪ್ರಕಾಶಕರು ಶ್ರೀ. ಎಂ. ಎಸ್. ಚೌಡಪ್ಪನವರು ಪುಟ ೩೪, ಬೆಲೆ ೨ ಆಣೆ.

ಈ ಪತ್ರಿಕೆ ನೋಡಲು ಸಾಧಾರಣವಿದೆ. ವಿನೋದದ ಬರಹಗಳಿಗಾಗಿ ಮೀಸಲಿಟ್ಟಂತೆ ತೋರುತ್ತದೆ. ಬೆಂಗಳೂರಲ್ಲಿ ಒಂದರ ಮೇಲೊಂದರಂತೆ ಮಾಸಿಕಗಳು ಹೊರಡುತ್ತಿರುವುದು ಹುರುಪಿನ ಗುರುತು. ಪ್ರಬಂಧಗಳ ಸಂಖ್ಯಾಬಲಕ್ಕಿಂತ ಗುಣಬಲ ಹೆಚ್ಚಾಗಲೆಂದು ಹಾರೈಸಿ ಈ ಹೊಸ ಮಾಸಿಕವನ್ನು ಸ್ವಾಗತಿಸುತ್ತೇವೆ.

ಸ್ವರಾಜ್ಯ ಗೀತಾಮೃತ

ಗ್ರಂಥಕರ್ತ ಶ್ರೀ. ಪುಂಡೂರು ಲಕ್ಷ್ಮೀ ನಾರಾಯಣ ಪುಣಿಂಚತ್ತಾಯರು. ಕಾಸರಗೋಡು. ದ. ಕ. ಪುಟಗಳು ೪೭ ಬೆಲೆ ೧೨ ಆಣೆ.

ರಾಷ್ಟ್ರೀಯ ಭಾವನೆಗಳನ್ನು ವ್ಯಕ್ತಪಡಿಸುವ ಮತ್ತು ಪ್ರಚೋದಿಸುವ ಕವಿತಾ ಸಾಹಿತ್ಯ ಕನ್ನಡದಲ್ಲಿ ಸಾಕಷ್ಟಿಲ್ಲ. ಶ್ರೀ. ಪುಣಿಂಚತ್ತಾಯರ ಸ್ವರಾಜ್ಯ ಗೀತಾಮೃತದಲ್ಲಿ ಈ ಭಾವ ಧಾರಾಳವಾಗಿ ಹೊಮ್ಮಿ ಬಂದಿದೆ. ಸಂಗೀತ ಬಲ್ಲವರು ಸೊಗಸಾಗಿ ಹಾಡಿ ಆನಂದ ಪಡುವಂತೆ ಗೀತೆಗಳಿಗೆಲ್ಲ ರಾಗ ತಾಲ ಕಾಣಿಸಲಾಗಿದೆ. ಅನೇಕ ದೇಶಭಕ್ತರನ್ನು ಉದ್ದೇಶಿಸಿ ಗೀತೆಗಳಿವೆ. ೧೦ ಭಾವಚಿತ್ರಗಳಿಂದ ಅಲಂಕೃತವಾದ ಸ್ವರಾಜ್ಯ ಗೀತಾಮೃತವು ಹೊಸ ಹುರುಪಿನ ಹುಡುಗರನ್ನು ಹುರಿದುಂಬಿಸದಿರದು.

ಬಾಲಗಂಗಾಧರಸ್ತವ

ಗ್ರಂಥಕರ್ತ ಶ್ರೀ. ಪುಂಡೂರು ಲಕ್ಷ್ಮೀ ನಾರಾಯಣ ಪುಣಿಂಚತ್ತಾಯರು. ಪುಟಗಳು ೩೧, ಬೆಲೆ ೪ ಆಣೆ.

ಲೀಲೆ

ಗ್ರಂಥಕರ್ತ ಶ್ರೀ ಪುಂಡೂರು ಲಕ್ಷ್ಮೀ ನಾರಾಯಣ ಪುಣಿಂಚತ್ತಾಯರು ಪುಟಗಳು ೧೭; ಬೆಲೆ ೨ ಆಣೆ.

ಬಾಲಗಂಗಾಧರಸ್ತವ, ಲೀಲೆ ಎಂಬವುಗಳೂ ಗೀತ ಪುಸ್ತಿಕೆಗಳೇ. ಇವುಗಳಲ್ಲಿ ಮೊದಲಿನದು ಲೋಕಮಾನ್ಯ ತಿಲಕರನ್ನು ಉದ್ದೇಶಿಸಿದ್ದು. ಎರಡನೆಯದಾದ ಲೀಲೆಯಲ್ಲಿ ನೈತಿಕ ಆಧ್ಯಾತ್ಮಿಕ ಗೀತೆಗಳುಂಟು. ಪುಣಿಂಚತ್ತಾಯರ ಸಹಜವಾದ ಶೈಲಿಯನ್ನು ಇವುಗಳಲ್ಲಿಯೂ ಕಾಣಬಹುದು.

Karnatak Secondary Teachers Association

(Annual Report for 1947)

ಪ್ರಧಾನ ಕಾರ್ಯದರ್ಶಿ ಜಿ. ಎಸ್. ಮೊಖಾಸಿ.

ಇದರಲ್ಲಿ ಈ ಸಂಘದ ಒಂದು ವರ್ಷದ ಚಟುವಟಿಕೆಯ ವಿವರಗಳನ್ನೆಲ್ಲ ಕಾಣಬಹುದು. ವರದಿಯಾದ ವರ್ಷದಲ್ಲಿ ಸಂಘವು ಅನೇಕ ಮಹತ್ವದ ಕಾರ್ಯಗಳನ್ನು ಮಾಡಿದೆ.

ಹುತಾತ್ಮ ತಿಮ್ಮನಗೌಡ ಪಾಟೀಲ

ಲೇಖಕರು ಮತ್ತು ಪ್ರಕಾಶಕರು ಶ್ರೀ. ಎಚ್. ವಿ. ಬ್ಯಾಳಿ. ಮಾಳನಾಯಕನಹಳ್ಳಿ. ಪುಟಗಳು ೧೭, ಬೆಲೆ ೬ ಆಣೆ.

ಗೌಡರ ಜೀವನ ಚರಿತ್ರವಿದು. ಮೆಣಸಿನಹಾಳ ತಿಮ್ಮನಗೌಡರು ಕರ್ನಾಟಕದ ೧೯೪೨ರ ಚಲೇಜಾವ ಆಂದೋಲನದಲ್ಲಿ ವಹಿಸಿದ ಪಾತ್ರ ಬಹಳ ದೊಡ್ಡದು. ತಮ್ಮ ಸಂಪದವನ್ನೆಲ್ಲ ಭಾರತಮಾತೆಯ ಅಡಿಗೆ ಅರ್ಪಿಸಿದ ಈ ವೀರ ಶಿಖಾಮಣಿಯ ತ್ಯಾಗ ಅನುಪಮವೇ. ಈ ತ್ಯಾಗಕ್ಕೆ ಕಳಸವಿಟ್ಟಂತೆ ಗೌಡರ ಪ್ರಾಣವೂ ನಾಡದೇವಿಗೆ ಅರ್ಪಿತವಾಯ್ತು. ಇಂತಹರ ಚರಿತ್ರವನ್ನು ಎಲ್ಲರೂ ಓದಿ ಸ್ಫೂರ್ತಿ ಹೊಂದಬೇಕು. ಭಾಷೆಯು ಸುಲಭವಾಗಿದೆ. ಭಗವದ್ಗೀತೆಯಿಂದ ಉದ್ಧರಿಸಿದ ಶ್ಲೋಕ ತಪ್ಪಾಗಿದೆ. ಲೇಖಕರು ಮುಂದಿನ ಮುದ್ರಣದಲ್ಲಿ ಇದನ್ನು ಅವಶ್ಯ ತಿದ್ದಿಕೊಳ್ಳುವರಾಗಿ ನಂಬಿದ್ದೇವೆ.

ಈ ಪತ್ರಿಕೆಯು ಹುಬ್ಬಳ್ಳಿ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ ಲೋಕಶಿಕ್ಷಣ ಟ್ರಸ್ಟದ ಪರವಾಗಿ ಹ. ರಾ. ಪೊಹರೆಯವರಿಂದ ಮುದ್ರಿತವಾಗಿ ಪ್ರಕಟವಾಯಿತು.